ಮಹಿಳಾ ವಿಶೇಷ ಪುಟಗಳೊಂದಿಗೆ

# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮಾರ್ಚ್, ೨೦೨೦ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೯ ಸಂಚಿಕೆ: ೦೨

ಚಂದಾ ರೂ. ೧೫೦/- (೨೦೨೦ರ ಜನವರಿಯಿಂದ ಸೆಪ್ಟಂಬರ್‌ವರೆಗೆ) ಸಂಸ್ಥೆಗಳಿಗೆ ರೂ. ೨೫೦/- ಪುಟ: ೨೦ ಬೆಲೆ: ರೂ. ೨೫/-



ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಕಳೆದ ವಾರ ದೆಹಲಿಯಲ್ಲಿ ಮೂರು ದಿನಗಳ ಕಾಲ ಅನಿಯಂತ್ರಿತವಾಗಿ ನಡೆದ ಭಯಾನಕ ಗಲಭೆಗಳಲ್ಲಿ ೪೮ಕ್ಕೂ ಹೆಚ್ಚು ಜನ ಕೊಲ್ಲಲ್ಪಟ್ಟಿದ್ದಾರೆ, ನೂರಾರು ಜನ ಮಾರಕವಾಗಿ ಗಾಯಗೊಂಡಿದ್ದಾರೆ. ಸಾವಿರಾರು ಜನ ಮನೆ ಮಠ-ಅಂಗಡಿ-ಮುಂಗಟ್ಟುಗಳನ್ನು ಕಳೆದುಕೊಂಡು ದಿಕ್ಕೆಟ್ಟಿದ್ದಾರೆ. ರಾಷ್ಟ್ರದ ರಾಜಧಾನಿಯಲ್ಲಿ ಗಲಭೆಕೋರರು ಯಾವುದೇ ಭಯವಿಲ್ಲದೆ ದೊಣ್ಣೆ, ಸಲಾಕೆ, ಪೆಟ್ರೋಲ್ ಬಾಂಬುಗಳನ್ನು ಹಿಡಿದು ಬೀದಿ ಬೀದಿಗಳನ್ನು ಸುತ್ತುತ್ತಾ ಜನರನ್ನು ಹೊಡೆದು, ಸುಟ್ಟು ಕೊಲ್ಲಲು, ಹಲ್ಲೆ ಮಾಡಲು, ಕಟ್ಟಡಗಳಿಗೆ ಬೆಂಕಿ ಇಡಲು, ಮನೆ ಮಠಗಳನ್ನು ಲೂಟಿ ಮಾಡಲು ಮುಕ್ತ ಅವಕಾಶ ನೀಡಲಾಗಿತ್ತು ಎಂದರೆ ಅಲ್ಲಿ ಒಂದು ಕಾನೂನು ಮತ್ತು ಶಿಸ್ತಿನ ಆಡಳಿತ ವ್ಯವಸ್ಥೆ ಇತ್ತೆ ಎಂದು ಕೇಳಬೇಕಾಗುತ್ತದೆ. ರಾಷ್ಟ್ರದ ರಾಜಧಾನಿಯ ಈ ವ್ಯವಸ್ಥೆ ಕೇಂದ್ರ ಸರ್ಕಾರಕ್ಕೆ ಸೇರಿದ್ದು, ನಗರದ ಪೋಲೀಸ್ ವ್ಯವಸ್ಥೆ ಸಂಪೂರ್ಣವಾಗಿ ಕೇಂದ್ರ ಗೃಹ ಇಲಾಖೆಯ ಸುಪರ್ದಿಗೆ ಬರುತ್ತದೆ ಎಂಬ ಸಂಗತಿ ಈ ಗಲಭೆಗಳ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ಏಕೆಂದರೆ ಗಲಭೆಗಳಿಗೆ ನೆಪವಾದದ್ದು ಪೌರತ್ವ ತಿದ್ದುಪಡಿ ಕಾಯಿದೆ ವಿರುದ್ಧ ನಗರದಲ್ಲಿ ಕಳೆದೆರಡು ತಿಂಗಳುಗಳಿಂದ ನಿರಂತರವಾಗಿ ನಡೆಯುತ್ತಿದ್ದ ಧರಣಿ-ಪ್ರದರ್ಶನಗಳಿಗೆ ಪ್ರತಿಯಾಗಿ ಬಿಜೆಪಿಯವರು ಆ ಕಾಯಿದೆಯ ಪರ ಪ್ರಚಾರ ಕಾರ್ಯಕ್ರಮಗಳನ್ನು ಆರಂಭಿಸಿದ್ದು. 'ಗಲಭೆಗಳಲ್ಲಿ ಸತ್ತವರಲ್ಲಿ ಹಿಂದೂ-ಮುಸ್ಲಿ ಇಬ್ಬರೂ ಇದ್ದಾರೆಂಬುದು ಗಲಭೆ ಆರಂಭಿಸಿದವರ ಉದ್ದೇಶ ಸಮಾಜದ ಕೋಮುವಾದಿಕರಣ ಎಂದು ಸಾರಿ ಹೇಳುತ್ತದೆ. ಬಿಜೆಪಿಯ ಸಿಎಎ ಪರ ಕಾರ್ಯಕ್ರಮದ ಉದ್ದೇಶವೂ ಅದೇ ಆಗಿದ್ದರೆ ಆಶ್ಚರ್ಯವಿಲ್ಲ.

ಗಲಭೆ ಕೋಮುವಾದಿಯೇ ಆಗಿರಲಿ, ಮತ್ತೊಂದು ಉದ್ದೇಶದ್ದೇ ಆಗಿರಲಿ, ಇಲ್ಲಿ ಎದ್ದು ಕಾಣುವುದು ಪೋಲೀಸ್ ವ್ಯವಸ್ಥೆಯ ನಿಷ್ಕ್ರಿಯತೆ. ಕೆಲವು ವರದಿಗಳ ಪ್ರಕಾರ ಪೋಲೀಸರೂ ಒಂದು ಕೋಮಿನ ಪರವಾಗಿ ಗಲಭೆಗಳಲ್ಲಿ ಭಾಗವಹಿಸಿದ್ದರು ಕೂಡ! ಇದಕ್ಕೆ ವಿಡಿಯೋ ಸಾಕ್ಷ್ಯಗಳೂ ಇದ್ದಂತಿವೆ, ಹಾಗಿದ್ದಲ್ಲಿ ಇದು ನಿಜವಾಗಿಯೂ ಗಂಭೀರವಾದ ಸಮಸ್ಯೆ. ಇಡೀ ದೇಶದಲ್ಲಿನ ಕೋಮುವಾದಿ ವಾತಾವರಣದಿಂದ ಪೋಲೀಸರೂ ಪ್ರಭಾವಿತವಾಗುವುದು ಸಹಜವೇ ಆದರೂ, ಹಾಗೆ ಪ್ರಭಾವಿತವಾಗಲು ಬಿಡುವ ಅಧಿಕಾರ ವ್ಯವಸ್ಥೆಯ ಸಂವಿಧಾನ ನಿಷ್ಠೆಯನ್ನು ಪ್ರಶ್ನಿಸಬೇಕಾಗುತ್ತದೆ.

ಮೋದಿಯವರು ಭಾರತಕ್ಕೆ ಭೇಟಿ ನೀಡಿದ್ದ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಸಬರ್ಮತಿ ಆಶ್ರಮಕ್ಕೆ ಕರೆದೊಯ್ದು ತಮ್ಮ ಗಾಂಧಿ ಪ್ರೀತಿಯನ್ನು ಪ್ರದರ್ಶಿಸುತ್ತಿರುವಾಗಲೇ ದೆಹಲಿಯಲ್ಲಿ ಗಾಂಧಿ ಯಾವುದನ್ನು ರಕ್ಷಿಸಲು ತಮ್ಮ ಪ್ರಾಣ ತೆತ್ತರೋ ಆ ಹಿಂದೂ-ಮುಸ್ಲಿಂ ಸೌಹಾರ್ದವನ್ನು ನಾಶ ಮಾಡುವ ಸಂಚಿನ ಕೊನೆಯ ಹಂತದ ಸಿದ್ಧತೆಗಳು ನಡೆದಿದ್ದವು. ಟ್ರಂಪ್ ಮಾರನೆಯ ದಿನ ದೆಹಲಿಯ ರಾಜ್‌ಘಾಟ್‌ಗೆ ಹೋಗಿ ಸತ್ಯ ಮತ್ತು ಅಹಿಂಸೆಗಳ ಆರಾಧಕನಿಗೆ ಗೌರವ ಸಲ್ಲಿಸುತ್ತಿರುವ ಹೊತ್ತಿನಲ್ಲೇ ಈ ಸಂಚು ಬೀದಿಯಲ್ಲಿ ರಕ್ತ ಚೆಲ್ಲುತ್ತಾ ಸ್ಫೋಟಗೊಂಡಿದೆ.

ಈ ಸಂಚು ಒಂದು ರಾಜಕೀಯ ಸೇಡಿನ ಭಾಗವೇ ಆಗಿತ್ತು ಎಂಬುದನ್ನು ಕಳೆದ ಒಂದು ತಿಂಗಳಲ್ಲಿ ನಗರದಲ್ಲಿ ನಡೆಯುತ್ತಾ ಬಂದ ರಾಜಕೀಯ ವಿದ್ಯಮಾನಗಳ ದಿಕ್ಕೇ ಹೇಳುವಂತಿದೆ. ಕೇಂದ್ರದಲ್ಲಿ ಮಹಾ ಜಯವನ್ನೇ ಸಾಧಿಸಿದ್ದರೂ, ಬಿಜೆಪಿ ತನ್ನ ರಾಜಕೀಯ ಅಜೆಂಡಾವನ್ನು ತ್ವರಿತವಾಗಿ ಜಾರಿಗೊಳಿಸಲು ಅಗತ್ಯವಾದ ರಾಜ್ಯಗಳ ಆಡಳಿತವನ್ನು ವಶಪಡಿಸಿಕೊಳ್ಳುವ ವಿಷಯದಲ್ಲಿ-ವಿವಿಧ ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ-ಇತ್ತೀಚೆಗೆ ಒಂದೇ ಸಮನೆ ಸೋಲುತ್ತಿರುವ ಮುಜುಗರವನ್ನು ತಪ್ಪಿಸಿಕೊಳ್ಳಲೋಸುಗ ಹೇಗಾದರೂ ಮಾಡಿ ದೆಹಲಿ ವಿಧಾನ ಸಭಾ ಚುನಾವಣೆಗಳನ್ನು ಗೆಲ್ಲಲು ನಡೆಸಿದ ಭಯಾನಕ ಕೋಮು ಪ್ರಚೋದನೆಯ ಪ್ರಯತ್ನಗಳು ಸಂಪೂರ್ಣ ವಿಫಲವಾಗಿ ಅದು ಹೀನಾಯವಾಗಿ ಸೋತು ಅನುಭವಿಸಿದ ಮುಖಭಂಗದ ವಿರುದ್ಧದ ಸೇಡೇ ಇದಾಗಿದೆ ಎಂದು ಸ್ಪಷ್ಟವಾಗಿ ಹೇಳಬಹುದು.

ಅನುರಾಗ್ ಠಾಕೂರ್ ಎಂಬ ಕೇಂದ್ರ ಮಂತ್ರಿ ಮತ್ತು ಪರ್ವೇಶ್ ವರ್ಮ ಎಂಬ ದೆಹಲಿ ಸಂಸತ್ ಸದಸ್ಯರ ನೇತೃತ್ವದಲ್ಲಿ ಗೃಹ ಸಚಿವರು ಆರಂಭಿಸಿದ ಚುನಾವಣಾ ಪ್ರಚಾರಾಂದೋಲನದ ಭಾಗವಾಗಿಯೇ ಅವರ ಸಮ್ಮುಖದಲ್ಲೇ ಆರಂಭಿಸಿದ 'ದೇಶದ್ರೋಹಿಗಳಿಗೆ(ಸಿಎಎ ಪ್ರತಿಭಟನಕಾರರಿಗೆ) ಗುಂಡಿಕ್ಕಿರಿ' ಮತ್ತು 'ಅವರು ಬಂದು ನಿಮ್ಮ ಮನೆ ಹೆಂಗಸರನ್ನು ಹೊತ್ತುಕೊಂಡು ಹೋಗಲಿದ್ದಾರೆ' ಎಂಬ ಮತೀಯ ಧೃವೀಕರಣದ ಮಾತುಗಳು ಈಗ ಮಹಾಸೋಲಿನ ಹತಾಶೆಯಲ್ಲಿ ಕಪಿಲ್ ಮಿಶ್ರಾ ಎಂಬ ಸೋತ ದೆಹಲಿ ಶಾಸಕನ ನಾಯಕತ್ವದಲ್ಲಿ 'ಅವರನ್ನು ಅಲ್ಲಿಂದ ಒದ್ದೋಡಿಸಿ' ಎಂಬ ಪ್ರಚೋದಕ ಸರಣಿ 'ಕರೆ'ಗಳ ಮೂಲಕ ಮುಟ್ಟಿದ ತಾರ್ಕಿಕ ಅಂತ್ಯವೇ ದೆಹಲಿ ಗಲಭೆಗಳಾಗಿವೆ. ಇದನ್ನೇ ದೆಹಲಿ ಹೈಕೋರ್ಟ್ ಹೇಳುತ್ತಾ, ಇದು ೧೯೮೪ರ ಸಿಖ್ ವಿರೋಧಿ ದಂಗೆಯಂತೆಯೇ ಯೋಜಿತವಾಗಿ ಕಾಣುತ್ತಿದ್ದು, ಅದು ಸಫಲವಾಗಲು ಸಂವಿಧಾನದ ಕಾವಲುಗಾರನಾದ ನ್ಯಾಯಾಲಯ ಬಿಡುವುದಿಲ್ಲ ಎಂದಿರುವುದು. ವಿಚಾರಣೆ ನಡೆಸಿದ ನ್ಯಾಯಾಧೀಶರು ಕಪಿಲ್ ಮಿಶ್ರಾ ಮಾಡಿದ ಕೋಮುಪ್ರಚೋದಕ ಭಾಷಣದ ವಿಡಿಯೋವನ್ನು ಸರ್ಕಾರಿ ವಕೀಲರ ಮುಂದೆ ಪ್ರದರ್ಶಿಸಿ ಸರ್ಕಾರದ ಕರ್ತವ್ಯಲೋಪದ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಸರ್ಕಾರ, ವಿಚಾರಣೆಯ ವರದಿ ತಲುಪಿದ ಕೂಡಲೇ ಮಾಡಿದ ಮೊದಲ ಕೆಲಸವೆಂದರೆ ಆ ನ್ಯಾಯಾಧೀಶರನ್ನು ಪಂಜಾಬ್ ಮತ್ತು ಹರ್‍ಯಾಣಾ ಹೈಕೋರ್ಟ್‌ಗೆ ವರ್ಗ ಮಾಡಿ ತಕ್ಷಣ ಅಲ್ಲಿಗೆ ತೆರಳಲು ಸೂಚಿಸಿದ್ದು. ಅಂದು ಸಂಜೆ ದೆಹಲಿ ಗಲಭೆಗಳ ಬಗ್ಗೆ ಎನ್‌ಡಿಟಿವಿಯಲ್ಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ಆರೆಸ್ಸೆಸ್‌ನ ವಕ್ತಾರ ದೇಶ್‌ರತನ್ ನಿಗಂ, ದೆಹಲಿ ಕೋರ್ಟ್ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ವರ್ತಿಸಿದೆ ಎಂದಾಗಲೇ, ಆ ನ್ಯಾಯಾಧೀಶರ ತಕ್ಷಣದ ಪಯಣ ತೀರ್ಮಾನವಾಗಿತ್ತೆನ್ನಬಹುದೇನೋ. ಇದು ಇಂದು ಭಾರತ ಸರ್ಕಾರದ ಹೆಸರಿನಲ್ಲಿ ದೇಶವನ್ನು ನಿಜವಾಗಿ ಯಾರು, ಯಾವ ಆಲೋಚನೆ ಆಳುತ್ತಿದೆ ಎಂಬುದರ ಸೂಚನೆಯಾಗಿರಬಹುದು.

ಅನುರಾಗ್ ಠಾಕೂರ್ ಮತ್ತು ಪರ್ವೇಶ್ ವರ್ಮಾರನ್ನು ಚುನಾವಣಾ ಸಂದರ್ಭದಲ್ಲೇ ಚುನಾವಣಾ ಆಯೋಗ ಕೇವಲ ಒಂದಷ್ಟು ದಿನ ಚುನಾವಣಾ ಪ್ರಚಾರದಿಂದ ಬಹಿಷ್ಕರಿಸುವ ಮೃದು ಧೋರಣೆ ತಾಳದೆ ಕ್ರಿಮಿನಲ್ ಮೊಕದ್ದಮೆ ಹೂಡಿ ಅವರನ್ನು ಬಂಧಿಸುವ ಸೂಚನೆ ನೀಡಿದ್ದಿದ್ದರೆ ಈ ಎಲ್ಲ ಅನಾಹುತವನ್ನು ತಪ್ಪಿಸಬಹುದಿತ್ತೇನೋ. ಆದರೆ ಕೇಂದ್ರ ಸರ್ಕಾರ ಪ್ರಜಾಪ್ರಭುತ್ವದ ಇಂತಹ ಕಾವಲು ಸಂಸ್ಥೆಗಳನ್ನೇ ಕೈವಶ ಮಾಡಿಕೊಂಡಿರುವ ಇಂದಿನ ಪರಿಸ್ಥಿತಿಯಲ್ಲಿ ಜನ, ವಿಶೇಷವಾಗಿ ಅಲ್ಪಸಂಖ್ಯಾತ-ಭಿನ್ನಮತೀಯರು ನ್ಯಾಯಕ್ಕಾಗಿ ಎಲ್ಲಿಗೆ ಹೋಗಬೇಕೆಂದು ತಿಳಿಯದೆ ದಿಕ್ಕೆಟ್ಟಂತಾಗಿದ್ದಾರೆ. ಇದು ಪ್ರಜಾಪ್ರಭುತ್ವವೇ ದಿಕ್ಕೆಟ್ಟಿರುವ ದುರಂತ ಸ್ಥಿತಿ.

ಇಂತಹ ಸ್ಥಿತಿಯಲ್ಲೇ ನಗರ ಹೊತ್ತಿ ಉರಿಯುತ್ತಿದ್ದರೂ, ಜನ ನಂಬಿದ ಆಂ ಆದ್ಮಿ ಪಕ್ಷ ಜಾಣತನದಲ್ಲಿ ತಿಲಕಧಾರಿಯಾಗಿ ಮೌನಕ್ಕೆ ಶರಣಾಗುವುದು, ಬೆನ್ನೆಲುಬೇ ಇಲ್ಲದ ಪಕ್ಷಾಂತರಿ ಹುಳು ಹುಪ್ಪಟೆಗಳೆಲ್ಲ ತಮ್ಮ ಹಕ್ಕಾಗಿ ಅಧಿಕಾರದ ಗದ್ದುಗೆ ಏರುವುದು ಮತ್ತು ನಿಜವಾಗಿ ಅಧಿಕಾರಕ್ಕೆ ಬಾಧ್ಯರಾದವರು ಅದನ್ನು ಕಂಗೆಟ್ಟು ಕೂತು ನೋಡುವಂತಾಗುವುದು, ದಿಕ್ಕುಗಾಣದ ಯುವಜನತೆಗೆ ಹುಚ್ಚೇರಿದಂತಾಗಿ 'ಪಾಕಿಸ್ತಾನ ಜಿಂದಾಬಾದ್' ಎಂದು ಕೂಗುವಂತಾಗುವುದು, ಮಠಾಧೀಶನೊಬ್ಬನಿಗೆ ದೇಶಭಕ್ತಿ ಕೆರಳಿ, ಇಂತವರ ಕಣ್ಣು ಕಿತ್ತು ತರಬಲ್ಲವರಿಗೆ ಇನಾಮು ಘೋಷಿಸುವುದು, ಸ್ವಾತಂತ್ರ್ಯ ಹೋರಾಟಗಾರರು ಪಾಕಿಸ್ತಾನದ ಏಜೆಂಟರಾಗಿ ಕಾಣತೊಡಗುವುದು. ಮತ್ತು ನಿಜವಾದ ಪಾಕಿಸ್ತಾನದ ಏಜೆಂಟರು ದೇಶಭಕ್ತರಂತೆ ಮೆರೆದಾಡುವುದು.

**-ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಒಂಬತ್ತನೇ ಹುಟ್ಟುಹಬ್ಬ ಆಚರಿಸುತ್ತಿರುವ, ನಿಮ್ಮ ಅಲ್ಲ, ನಮ್ಮ 'ಹೊಸಮನುಷ್ಯ' ಪತ್ರಿಕೆಗೆ ಓದುಗರೆಲ್ಲರ ಪರವಾಗಿ ಶುಭಾಶಯಗಳು. ವಿಚಾರಧಾರೆ–ವಸ್ತುನಿಷ್ಠತೆಯಿಂದ ಕೂಡಿರುವ 'ಹೊಸಮನುಷ್ಯ', ಪೂರ್ವಗ್ರಹಗಳ ಮತ್ತು ಮೂಢನಂಬಿಕೆಗಳ ವಿರುದ್ಧ ಸತತವಾಗಿ ಹೋರಾಡುತ್ತಾ ಎಲ್ಲರ ಆಲೋಚನೆಗಳನ್ನೂ ವಿಮರ್ಶಿಸಿಕೊಳ್ಳುವಂತೆ ಮಾಡುತ್ತದೆ. ನಮ್ಮೆಲ್ಲ ನಿರಾಶೆ–ಹತಾಶೆಗಳ ನಡುವೆಯೂ ಆಸೆ ಕಳೆದುಕೊಳ್ಳುವ ಅಗತ್ಯವಿಲ್ಲವೆಂದು ಪತ್ರಿಕೆ ಆಗಾಗ ನಮ್ಮನ್ನು ಎಚ್ಚರಿಸುತ್ತಾ, ನಾವು ಆತ್ಮಾವಲೋಕನ ಮಾಡಿಕೊಳ್ಳುವಂತೆ ಪ್ರೇರೇಪಿಸುತ್ತದೆ. ನಿಮ್ಮ ಈ ಜನಜಾಗೃತಿ ಹೋರಾಟವು ನಿರಂತರ ನಡೆಯುತ್ತದೆಂಬ ಆಶಯಗಳೊಂದಿಗೆ ಹೊಸಮನುಷ್ಯ ಪತ್ರಿಕೆಯನ್ನು ಕಾಯುತ್ತಿರುತ್ತೇವೆ.

**–ಶ್ರೀದೇವಿ, ಕಡಿದಾಳ್ ಶಾಮಣ್ಣ,** ಭಗವತಿಕೆರೆ (ಹೊಳೆಹೊನ್ನೂರು)

ಈ ಹೊತ್ತಿನಲ್ಲಿ ನಮ್ಮ ದೇಶ ಎದುರಿಸುತ್ತಿರುವ ರಾಜಕೀಯ ಮತ್ತು ಆರ್ಥಿಕ ಸ್ಥಿತಿಯಲ್ಲಿ ಏನನ್ನು ಒಪ್ಪಿಕೊಳ್ಳಬೇಕು? ಯಾವುದು ಸರಿ? ಯಾವುದು ತಪ್ಪು? ಅನ್ನುವುದು ಗೊತ್ತಾಗುತ್ತಿಲ್ಲ ಎಂದು ನಾನು ಪರಿತಪಿಸುತ್ತಿರುವಾಗೆಲ್ಲ 'ಹೊಸ ಮನುಷ್ಯ'ದ ಓದು ಇದು ಸರಿಯೆಂದು ನನಗೆ ದಾರಿ ತೋರಿಸುತ್ತದೆ.

**–ರಾಜೇಶ್ವರಿ ತೇಜಸ್ವಿ,** ಮೂಡಿಗೆರೆ

ಪ್ರಭುತ್ವದ ಜನವಿರೋಧಿ ಕಾರ್ಯಕ್ರಮಗಳನ್ನೂ ಸಮಾಜದ ಬೈನರಿಗಳ ವಿರೋಧ ನೆಲೆಯ ಚಿಂತನೆಗಳನ್ನೂ ವಿರೋಧಿಸುತ್ತಲೇ, ಗಾಂಧಿ ಮಾರ್ಗದಲ್ಲಿ ಎಲ್ಲ ಧಾರೆಯ ಧನಾತ್ಮಕ ಮತ್ತು ಸಕಾರಾತ್ಮಕ ಚಿಂತನೆಗಳನ್ನು ಪ್ರೋತ್ಸಾಹಿಸುತ್ತಾ ಹೆಚ್ಚು ಹೆಚ್ಚು ಜನರನ್ನು ಒಳಗೊಳ್ಳುತ್ತಾ ಬೆಳೆಯಲಿ.

**–ಅಶ್ವತ್ಥ ಶಿಕಾರಿಪುರ,** ಬೆಂಗಳೂರು

'ಹೊಸಮನುಷ್ಯ' ನನ್ನ ದೃಷ್ಟಿ ಹಾಗೂ ದಿಗಂತಗಳನ್ನು ಸದಾ ವಿಸ್ತರಿಸುತ್ತಿರುವ ಪತ್ರಿಕೆ ಎಂದು ಹೇಳಬಲ್ಲೆ. ಪೂರ್ವಗ್ರಹಗಳಿಲ್ಲದೆ ಅರಿವಿನ ದಾರಿಗಳನ್ನು ಶೋಧಿಸಲು ಈ ಮಾಧ್ಯಮ ಅಗತ್ಯವಿತ್ತು. ನಾನಿನ್ನೂ ವಿದ್ಯಾರ್ಥಿಯೆಂದು ಸದಾ ನೆನಪಿಸುತ್ತ ಹೊಸದರೆಡೆಗೆ ಬೊಗಸೆ ಚಾಚಲು ಪ್ರೇರೇಪಿಸುವ ಪತ್ರಿಕೆಗೆ ಶರಣು.

**–ಗೀತಾ ವಸಂತ,** ತುಮಕೂರು

ರಾಜಕೀಯ ಹುನ್ನಾರಗಳನ್ನು ಅರ್ಥಮಾಡಿಕೊಂಡು ಉತ್ತರ ಕಂಡುಕೊಳ್ಳುವಲ್ಲಿಯೇ ದಣಿಸುತ್ತಿರುವ ಕಾಲವಿದು. ಶುದ್ಧ ಸಾಹಿತ್ಯಿಕ ಎಂಬ ಗುಲಾಲು ಎರಚಿಕೊಳ್ಳದೆ, ಸಮ ಸಮಾಜದ ತಾತ್ವಿಕತೆಯನ್ನು, ಸಾಹಿತ್ಯದ ಅನುಸಂಧಾನದೊಂದಿಗೆ ಮುನ್ನಡೆಸಿದ್ದಕ್ಕಾಗಿ, ಹೊಸಮನುಷ್ಯ ನನಗೆ ಇಷ್ಟವಾಗಿದೆ. ಪತ್ರಿಕೋದ್ಯಮ ದಿಕ್ಕೆಟ್ಟ ಹೊತ್ತಲ್ಲಿ, ದಿಟ್ಟ ನಡೆಗಾಗಿ ಅಭಿವಂದನೆ.

**–ವಿನಯಾ ಒಕ್ಕುಂದ,** ಧಾರವಾಡ

ಫೆಬ್ರುವರಿ ಸಂಚಿಕೆಯ ಒಂದೊಂದು ಟಿಪ್ಪಣಿ/ಲೇಖನವೂ ಸಮಕಾಲೀನ ವಿದ್ಯಮಾನಗಳನ್ನು ಯಥಾರ್ಥವಾಗಿ ಗ್ರಹಿಸುವಲ್ಲಿ ನಮ್ಮ ಕಣ್ತೆರೆಸುವಂತಿದೆ.

**–ಟಿ.ಎನ್. ವಾಸುದೇವಮೂರ್ತಿ,** ಬೆಂಗಳೂರು

'ಹೊಸ ಮನುಷ್ಯ'ದ ಒಂಬತ್ತನೇ ಹುಟ್ಟುಹಬ್ಬದ ಸಂಚಿಕೆಯಾದ ಫೆಬ್ರುವರಿ ಸಂಚಿಕೆಯ 'ಸಂಪಾದಕರ ಟಿಪ್ಪಣಿ'ಗಳಲ್ಲಿನ 'ಓದುಗರ ನೈತಿಕ ಬೆಂಬಲ ಇರುವವರೆಗೆ ಪತ್ರಿಕೆ ನಿಷ್ಠುರ ಸತ್ಯಗಳನ್ನು ಹೇಳಲು ಹಿಂಜರಿಯುವುದಿಲ್ಲ' ಎಂಬ ನಿಮ್ಮ ಮಾತು ನಮ್ಮಂಥ ಓದುಗರ ಮನೋಸ್ಥೈರ್ಯವನ್ನು ಹೆಚ್ಚಿಸುವಂತಿದೆ. ರಾಜಾರಾಮ್ ತೋಳ್ಪಾಡಿಯವರು ಪೇಜಾವರರ ವ್ಯಕ್ತಿತ್ವವನ್ನು ನಿರೂಪಿಸುತ್ತಾ ಕೊನೆಯಲ್ಲಿ ಎತ್ತಿರುವ ವಿಪರ್ಯಾಸದ ಪ್ರಶ್ನೆ ನನ್ನದೂ ಸಹ ಆಗಿದೆ.

**–ಆರ್. ಜ್ಯೋತಿ,** ಕಾರ್ಕಳ

ಚಿದಾನಂದಮೂರ್ತಿಯವರಿಗೇನೋ, ಅವರ ಇತ್ತೀಚಿನ ವರ್ಷಗಳ ಹಿಂದುತ್ವವಾದಿ ನಿಲುವುಗಳ ಹೊರತಾಗಿಯೂ ಶ್ರದ್ಧಾಂಜಲಿ ಸರಿ. ಕನ್ನಡ ಸಾಹಿತ್ಯ–ಸಂಶೋಧನೆಗೆ ಅವರ ಕೊಡುಗೆ ದೊಡ್ಡದು.. ಆದರೆ 'ಹೊಸ ಮನುಷ್ಯ'ದಂತಹ ಸಮಾಜವಾದಿ ಪತ್ರಿಕೆಯಲ್ಲಿ ಮತೀಯವಾದಿ ರಾಜಕಾರಣದ ನೇರ ಬೆಂಬಲಿಗರಾಗಿದ್ದ ಪೇಜಾವರರಿಗೇಕೆ ಶ್ರದ್ಧಾಂಜಲಿ ಬರಹ? ನನಗೆ ನಿರಾಶೆಯನ್ನುಂಟು ಮಾಡಿದ್ದೀರಿ.

**–ಎನ್. ಅಶೋಕ್‌ಕುಮಾರ್,** ಮೈಸೂರು.

ಚಿದಾನಂದಮೂರ್ತಿಯವರನ್ನು ಕುರಿತು ಎಚ್.ಎಸ್. ರಾಘವೇಂದ್ರ ರಾವ್ ಅವರ ಶ್ರದ್ಧಾಂಜಲಿ ಸಮತೂಕದಿಂದ ಕೂಡಿದೆ. ಆದರೆ ಪೇಜಾವರರನ್ನು ಕುರಿತ ರಾಜಾರಾಂ ತೋಳ್ಪಾಡಿಯವರ ಬರಹ ವೈಭವೀಕರಣದಿಂದ ಕೂಡಿದ್ದು ಏಕಪಕ್ಷೀಯವಾಗಿದೆ. ಅವರ ಹಿಂದುತ್ವವಾದಿ ಒಲವು ನಿಲುವುಗಳನ್ನು ಕಾಲದ ಸಂದಿಗ್ಧತೆ ಎಂದು ಕರೆದಿರುವುದು ಲೇಖಕರ ನೈತಿಕ ಸಂದಿಗ್ಧತೆಯನ್ನು ಸೂಚಿಸುತ್ತದಷ್ಟೆ.

**–ಎನ್. ಆರ್. ಪ್ರಕಾಶ್,** ಚಿಕ್ಕಮಗಳೂರು

**(ಈ ಕುರಿತು ೧೮ನೇ ಪುಟದಲ್ಲಿನ ಸಂಪಾದಕರ ಬರಹವನ್ನೂ ನೋಡಿ.–ಸಂ.)**

ನಮ್ಮ ಇಂದಿನ ನ್ಯಾಯಾಂಗದ ಸ್ಥಿತಿಗತಿಗಳನ್ನು ಕುರಿತ ನ್ಯಾ. ಮದನ್ ಲೋಕೂರ್ ಅವರ ವಿಶ್ಲೇಷಣೆ ನ್ಯಾಯಿಕ ವಲಯದ ವಕ್ತಾರರನ್ನು ತಡಮಾಡದೆ ಎಚ್ಚರಗೊಳ್ಳುವಂತೆ ಕರೆ ಕೊಡುತ್ತಿದೆ. ಆದರೆ ಮೈಸೂರಿನ ವಕೀಲರ ಸಂಘದ ಇತ್ತೀಚಿನ ವರ್ತನೆ ನಮ್ಮ ಇಂತಹ ನಿರೀಕ್ಷೆಗಳನ್ನು ಹುಸಿಗೊಳಿಸುವಂತಿದೆ.

**– ಜಿ. ವಸಂತರಾಜ್,** ದಾವಣಗೆರೆ

ನಿಮ್ಮ 'ಶೃಂಗೇರಿಯಿಂದ ಕಲಬುರ್ಗಿಯವರೆಗೆ' ಶೀರ್ಷಿಕೆಯ ಟಿಪ್ಪಣಿ ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಅದರ ಸಮ್ಮೇಳನಗಳು ಕಂಡಿರುವ ಅವನತಿಯನ್ನು ನಿಷ್ಠುರವಾಗಿಯೂ ಸಮರ್ಥವಾಗಿಯೂ ವಿವರಿಸುತ್ತದೆ. ಧನ್ಯವಾದಗಳು.

**–ಎಂ.ಶ್ರೀಧರಮೂರ್ತಿ,** ಬೆಂಗಳೂರು

ಜಿ.ಪಿ. ಬಸವರಾಜು ಅವರ ಕಥೆ 'ಮಲ್ಲಿಕಾ' ಹಳೆಯ ಮೌಲಿಕ ಕಥೆಗಳನ್ನು ನೆನಪಿಗೆ ತಂದಿತು. ಬಹಳ ವರ್ಷಗಳ ಹಿಂದೆ 'ಸಂಗನಗೌಡರು ಮತ್ತು ಸಬರಮತಿ' ಎಂಬ ಇಂಥದೊಂದು ನನ್ನ ಕತೆ ಪ್ರಕಟವಾಗಿ ಗಮನ ಸೆಳೆದಿತ್ತು.

**–ವೆಂಕಟೇಶ ಮಾಚಕನೂರ,** ಧಾರವಾಡ


**ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ (ರಿ.), ಶಿವಮೊಗ್ಗ**

**ದಶಮಾನೋತ್ಸವ (೨೦೧೦-೨೦೨೦)**

ಇದರ ಅಂಗವಾಗಿ

**ಸಮಾಜವಾದಿ ಸಮಾವೇಶ :**

'ರಸಿಕ ರುದ್ರ ತಪಸ್ವಿ ಲೋಹಿಯಾ'

ಮತ್ತು 'ಸಮಾಜವಾದದ ಸಾಲುದೀಪಗಳು'

**ಪುಸ್ತಕಗಳ ಬಿಡುಗಡೆ**

ಹಾಗೂ

ರಾಷ್ಟ್ರೀಯತೆ, ಪ್ರಜೆತನ ಇತ್ಯಾದಿ:

ನಾಡಿನ ಮುಖ್ಯ ಚಿಂತಕರಿಂದ ವಿಚಾರ ಮಂಡನೆ ಮತ್ತು ಚರ್ಚೆ

ದಿನಾಂಕ: ೨೯, ಮಾರ್ಚ್, ೨೦೨೦ ಬೆಳಿಗ್ಗೆ: ೧೦.೩೦ಕ್ಕೆ

ಸ್ಥಳ: ಪತ್ರಿಕಾ ಭವನ, ಆರ.ಟಿ.ಓ ರಸ್ತೆ, ಶಿವಮೊಗ್ಗ

**ಸರ್ವರಿಗೂ ಆದರದ ಸ್ವಾಗತ**

ವಿವರಗಳಿಗಾಗಿ: ೯೭೩೧೯೨೯೭೩೧ / ೯೪೮೦೧೪೧೯೮೪

**ಗಾಂಧಿ ಕಥನ : ಮೂರನೇ ಮುದ್ರಣ**

ಡಿ.ಎಸ್. ನಾಗಭೂಷಣ ಅವರ ಗಾಂಧಿ ಕಥನ ಕೃತಿಯ ಮೂರನೇ ಮುದ್ರಣವನ್ನು ಪ್ರಕಾಶಕರಾದ ಎಂ. ಮೂನಿಸ್ವಾಮಿ ಅಂಡ್ ಸನ್ಸ್ ಇದೀಗ ಬಿಡುಗಡೆ ಮಾಡಿದ್ದಾರೆ; ಹೊಸದೊಂದು ಮುಖಪುಟದೊಂದಿಗೆ!




೭೦೦ ಪುಟಗಳ ಈ ಕೃತಿಯ ಮುಖ ಬೆಲೆ: ರೂ. ೩೫೦/–

ರಿಯಾಯ್ತಿ ದರದಲ್ಲಿ ಪ್ರತಿಗಳು ಇಲ್ಲಿ ಲಭ್ಯ:

ಹತ್ತಕ್ಕೂ ಹೆಚ್ಚಿನ ಪ್ರತಿಗಳಿಗಾಗಿ ಸಂಪರ್ಕಿಸಿ:

ಎಂ.ಸಿ. ನರೇಂದ್ರ : ೯೮೪೫೦೧೨೭೪೦

ಬಿಡಿ ಪ್ರತಿಗಳಿಗಾಗಿ ಸಂಪರ್ಕಿಸಿ:

ಸವಿತಾ ನಾಗಭೂಷಣ: ೯೪೮೧೩೫೧೦೭೯

# ಲೋಹಿಯಾ ಅವರ ಧರ್ಮ ಮೀಮಾಂಸೆ

ಧರ್ಮ ವಿಚಾರ ಪುಟ



ಮಾರ್ಚ್ ೨೩, ಲೋಹಿಯಾ ಅವರು ಹುಟ್ಟಿದ ದಿನ. ಅವರು ತಮ್ಮನ್ನು ತಾವು ನಾಸ್ತಿಕ ಎಂದು ಕರೆದುಕೊಂಡಿದ್ದರೂ, ತಮಗೆ ನಾಸ್ತಿಕರ ಜೊತೆ ಇದ್ದಾಗ ಆಸ್ತಿಕರ ಬಳಿ ಹೋಗಬೇಕೆಂದೂ, ಆಸ್ತಿಕರ ಬಳಿ ಹೆಚ್ಚು ಇದ್ದಾಗ ನಾಸ್ತಿಕರ ಬಳಿ ಹೋಗಬೇಕೆಂದೂ ಅನಿಸುತ್ತದೆ ಎನ್ನುತ್ತಿದ್ದರು! ತಮಗೆ ರಾಜಕಾರಣದಿಂದ ಬಿಡುವು ದೊರೆತರೆ ಹಿಮಾಲಯಕ್ಕೆ ಹೋಗಬಯಸುವುದಾಗಿಯೂ ಹೇಳುತ್ತಿದ್ದರು. ಹೀಗೆ ಆಧುನಿಕ ಮನುಷ್ಯನ ಲೋಕ ಚಿಂತನೆಯ ಎಲ್ಲ ದ್ವಂದ್ವ–ತಲ್ಲಣಗಳನ್ನೂ ಅನುಭವಿಸುತ್ತಿದ್ದ ಅವರನ್ನು ನಿಶ್ಚಿತವಾಗಿ ನಾಸ್ತಿಕ ಎಂದು ಗುರುತಿಸಲಾಗದೇನೋ. ಹಾಗಾಗಿಯೇ ಅವರು ತಮ್ಮ ಯಾವ ಸಮಕಾಲೀನ ಚಿಂತಕನೂ ಮಾಡದಷ್ಟು ಧರ್ಮದ ಬಗ್ಗೆ ಧರ್ಮ ಚಿಂತನೆ ಮಾಡಿದರು. ತಮ್ಮದೇ ಒಂದು ಧರ್ಮ ಮೀಮಾಂಸೆಯನ್ನು ಮಂಡಿಸಿದರು. ಉಪನಿಷತ್ತುಗಳ ಅಭ್ಯಾಸಿಯಾಗಿದ್ದ ಅವರು ಎಂದೂ ಬಹುತೇಕ ಎಡಪಂಥೀಯ ಚಿಂತಕ ಅಥವಾ ರಾಜಕಾರಣಿಗಳಂತೆ ಸಾಮಾನ್ಯ ಜನರ ಧಾರ್ಮಿಕ ಸಂವೇದನೆಗಳನ್ನು ಅಲಕ್ಷಿಸಲಿಲ್ಲ. ಬದಲಿಗೆ ಗೌರವಿಸಿದರು. ಭಾರತದ ನದಿ ಪರ್ವತಗಳು ಮತ್ತು ಅವುಗಳ ತಟಗಳ ಮತ್ತು ಮೇಲಿನ ತೀರ್ಥಕ್ಷೇತ್ರಗಳ ಸ್ವಚ್ಛತೆಗಳ ಬಗ್ಗೆ ಬರೆದರು.

ರಾಮಾಯಣ–ಮಹಾಭಾರತಗಳನ್ನು ಭಾರತದ ಜನರ ಮನೋಭಿತ್ತಿಯ ಮೇಲೆ ಕೆತ್ತಲ್ಪಟ್ಟ ಆದಿಶಿಲ್ಪ ಎಂದು ಭಾವಿಸಿದ್ದ ಲೋಹಿಯಾ ಅವರು ರಾಮ, ಕೃಷ್ಣ, ಶಿವ ಮತ್ತು ದ್ರೌಪದಿ–ಸಾವಿತ್ರಿಯರನ್ನು ಆಧುನಿಕವಾಗಿ ನೋಡುವ ಬಗೆಗಳನ್ನು ಅವುಗಳ ಶಿಲ್ಪ ಕೆಡದಂತೆ ಮನೋಹರವಾಗಿ ಬರೆದರು. ಉ.ಪ್ರ. ದ ಚಿತ್ರಕೂಟದಲ್ಲಿ ವಾರ್ಷಿಕ 'ರಾಮಾಯಣ ಮೇಳ'ದ ಆಯೋಜನೆಗೆ ಚಾಲನೆ ನೀಡಿದರು. ತಮ್ಮ ಅಭಿಮಾನಿ ಗೆಳೆಯ ಖ್ಯಾತ ಕಲಾವಿದ ಎಂ.ಎಫ್. ಹುಸೇನ್‌ರಿಗೆ ರಾಮಾಯಣದ ಸರಣಿ ಚಿತ್ರಗಳನ್ನು ರಚಿಸಿ, ಅವನ್ನು ಹಳ್ಳಿ ಹಳ್ಳಿಗೆ ಪ್ರದರ್ಶನಕ್ಕೊಯ್ಯುವಂತೆ ಮಾಡಿ ತಮ್ಮ ನಾಸ್ತಿಕತೆಯ ನಾವೀನ್ಯತೆಯನ್ನು ಮೆರೆದರು.

ಲೋಹಿಯಾ ಪ್ರಕಾರ ಧರ್ಮ, ವಿಶೇಷವಾಗಿ ಹಿಂದೂ ಧರ್ಮದಲ್ಲಿ ಉದಾರವಾದಿ ಮತ್ತು ಸಂಕುಚಿತವೆಂಬ ಎರಡು ಆವೃತ್ತಿಗಳ ಘರ್ಷಣೆ ಸದಾ ನಡೆಯುತ್ತಿದ್ದು, ಅದು ಧರ್ಮದ ಮೂರು ಆಯಾಮಗಳಲ್ಲಿ ಯಾವುದಕ್ಕೆ ಹೆಚ್ಚು ಪ್ರಾಶಸ್ತ್ಯ ಸಿಗುವುದೋ ಅದರ ಮೇಲೆ ಅವಲಂಬಿಸಿ ಈ ಘರ್ಷಣೆಗಳ ಪರಿಣಾಮ ನಿರ್ಧರಿತವಾಗುತ್ತದೆ. ಆ ಮೂರು ಆಯಾಮಗಳೆಂದರೆ, ಅನಾದಿ–ಅನಂತದೊಂದಿಗೆ ಸಂವಾದ. ಇದು ಧ್ಯಾನ, ಪ್ರಾರ್ಥನೆಗಳ ಮೂಲಕ ಅಭಿವ್ಯಕ್ತಗೊಳ್ಳುತ್ತದೆ. ಎರಡನೆಯದು ಸದ್ವರ್ತನೆ ಹಾಗೂ ಮೌಲ್ಯಗಳ ತರಬೇತಿ ಮತ್ತು ಅನ್ಯಮತ ಸಹಿಷ್ಣುತೆ. ಸಾಮಾಜಿಕವಾಗಿ ವ್ಯಕ್ತವಾಗುವ ರೀತಿ ಇದು. ಮೂರನೆ ಆಯಾಮ ಸಾಮಾಜಿಕ ಕಾನೂನು ಮತ್ತು ಕಟ್ಟಳೆಗಳಿಗೆ ಸಂಬಂಧಿಸಿದ್ದು. ಹಿಂದೂ ಧರ್ಮಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಇದು ಜಾತಿ ಪದ್ಧತಿ, ಅಸ್ಪೃಶ್ಯತೆ ಮತ್ತು ಸ್ತ್ರೀಯರ ಸ್ಥಾನಮಾನ, ಶಿಕ್ಷಣ ಮತ್ತು ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ್ದು. ಧರ್ಮದ ಈ ಮೂರು ಆಯಾಮಗಳಲ್ಲಿ ಮೊದಲೆರಡನ್ನು ಒಪ್ಪಬಹುದಾದರೂ, ಮೂರನೆಯದನ್ನು ಒಪ್ಪುವುದು ಧರ್ಮದ ಕಲ್ಪನೆಗೇ ಮಾಡುವ ಅಪಚಾರವಾಗುತ್ತದೆ ಎನ್ನುತ್ತಿದ್ದರು. ಮೊದಲೆರಡರಲ್ಲಿ ಶ್ರದ್ಧೆ ಇದ್ದು ಮೂರನೆಯದನ್ನು ತಿರಸ್ಕರಿಸಿದಾಗ ಸಮಾಜದಲ್ಲಿ ಶಾಂತಿ–ನೆಮ್ಮದಿ–ಶ್ರೇಯಸ್ಸು ಇರುತ್ತದೆ. ಇಲ್ಲದೇ ಹೋದಾಗ ಹಗೆ–ಅಶಾಂತಿ–ಹಿಂಸೆ ಇರುತ್ತದೆ.

ಗಾಂಧಿ ಹಿಂದೂ ಧರ್ಮದ ಉದಾರ ಆವೃತ್ತಿಯ ಆಧುನಿಕ ಹರಿಕಾರರಾಗಿದ್ದರು ಎನ್ನುವ ಲೋಹಿಯಾ, ಹಿಂದೂ–ಮುಸ್ಲಿಂ ಘರ್ಷಣೆಗಳಿಗೆ ಚರಿತ್ರೆಯ ಕೋಮುವಾದಿ ವ್ಯಾಖ್ಯಾನವೇ ಕಾರಣವೆಂದು ಅಭಿಪ್ರಾಯಪಡುತ್ತಿದ್ದರು. ಯಾರು ಇಲ್ಲಿಗೆ ಏಕೆ ಬಂದರು ಎಂಬುದಕ್ಕಿಂತ ಬಂದವರು ನಮ್ಮವರೇ ಆಗಿ ಇಲ್ಲಿನ ಜನಜೀವನದಲ್ಲಿ ಬೆರೆತುಹೋದರೋ ಅಥವಾ ಲೂಟಿಕಾರರಾಗಿ ಇಲ್ಲಿನ ಸಂಪತ್ತನ್ನು ಹೊರಗೆ ಒಯ್ದರೇ ಎಂಬುದು ಮುಖ್ಯವಾಗಬೇಕೆಂದು ಹೇಳುತ್ತಿದ್ದರು. ಇತರ ಜನಾಂಗಗಳಂತೆಯೇ ಇಲ್ಲಿಗೆ ಬದುಕು–ಸಂಪತ್ತುಗಳನ್ನು ಅರಸಿಕೊಂಡು ಬಂದ ಮೊಘಲರು ಇಲ್ಲಿಯೇ ನೆಲೆಸಿ ಇಲ್ಲಿನ ಕಷ್ಟಸುಖಗಳಲ್ಲಿ ಭಾಗಿಯಾದರು. ಆದರೆ ಇಂಗ್ಲಿಷರು ಸಂಪತ್ತನ್ನು ತಮ್ಮ ದೇಶಕ್ಕೆ ದೋಚಿದ ಲೂಟಿಕೋರರಾದರು. ಈ ದೃಷ್ಟಿಯಿಂದ ಲೋಹಿಯಾ ಹೇಳುತ್ತಿದ್ದ ಮಾತೆಂದರೆ, ಬಾಬರ್ ಲೂಟಿಕೋರನಿರಬಹುದು. ಆದರೆ ಅಕ್ಬರ್ ನಮ್ಮವನೇ ಆದ. ಹಾಗಾಗಿ ನಮಗೆ ವಿಕ್ರಮಾದಿತ್ಯ, ರಾಣಾ ಪ್ರತಾಪಸಿಂಹರಂತೆಯೇ ಜೈಸಿ, ರಜಿಯಾರೂ ನಮ್ಮ ಆದರ್ಶ ನಾಯಕ–ನಾಯಕಿಯರೇ. ರಾಷ್ಟ್ರ ವಿಭಜನೆಯನ್ನು ಗಾಂಧಿಯವರ ಜೊತೆಗೂಡಿ ಕೊನೆಯ ಕ್ಷಣದವರೆಗೂ ತಪ್ಪಿಸಲು ಯತ್ನಿಸಿದ ಕೆಲವೇ ಕೆಲವರಲ್ಲಿ ಒಬ್ಬರಾದ ಲೋಹಿಯಾ, ಹಿಂದೂ ಮುಸ್ಲಿಮರ ಬಾಂಧವ್ಯದಲ್ಲಿನ ಐತಿಹಾಸಿಕತೆಯಲ್ಲಿ ಎಂತಹ ದೃಢ ನಂಬಿಕೆ ಇತ್ತೆಂದರೆ ಮುಂದೊಂದು ದಿನ ಭಾರತ–ಪಾಕಿಸ್ತಾನ(ಬಂಗ್ಲಾದೇಶ ಸೇರಿದಂತೆ) ಒಂದು ಮಹಾಸಂಘ ರಾಷ್ಟ್ರ ರೂಪಿತವಾಗಲೇಬೇಕೆಂದು ನಂಬಿದ್ದರು. ಈ ಹಿನ್ನೆಲೆಯಲ್ಲೇ ಅವರು ಭಾರತದ ಮುಸ್ಲಿಮರನ್ನು ದ್ವೇಷಿಸುವವನು ಪಾಕಿಸ್ತಾನದ ಪರವಾಗಿರುವವನು ಎಂದು ಹೇಳುತ್ತಿದ್ದರು. ಈ ಎಲ್ಲ ವಿಷಯಗಳ ಸುತ್ತಮುತ್ತ ಅವರು ಬರೆದ 'ಹಿಂದೂ ಬನಾಮ್ ಹಿಂದೂ' ಎಂಬ ಲೇಖನವೊಂದರ ಎರಡು ಭಾಗಗಳ ಅನುವಾದಗಳನ್ನು ಇಲ್ಲಿ ನೀಡುತ್ತಿದ್ದೇವೆ–ಸಂ.

## ಉದಾರವಾದವೇ ಪರಿಹಾರ

**ಕೇ**ವಲ ಉದಾರವಾದ ಮಾತ್ರ ದೇಶವನ್ನು ಒಗ್ಗೂಡಿಸಬಲ್ಲದು. ಭಾರತ ಅತ್ಯಂತ ವಿಶಾಲವಾದ ಹಾಗೂ ಪ್ರಾಚೀನವಾದ ದೇಶ. ಮನುಷ್ಯನ ಸಂಕಲ್ಪದ ಹೊರತಾಗಿ ಯಾವ ಶಕ್ತಿಯೂ ಅದನ್ನು ಒಗ್ಗೂಡಿಸಲಾರದು. ಮತಾಂಧ ಹಿಂದುತ್ವವು ತನ್ನ ಸ್ವಭಾವದಿಂದಾಗಿಯೇ ಇಂಥ ಸಂಕಲ್ಪವನ್ನು ಹುಟ್ಟು ಹಾಕಲಾರದು. ಅದರೆ ಹಿಂದೆ ಅದೆಷ್ಟೋ ಸಲ ಮಾಡಿರುವಂತೆ ಉದಾರವಾದಿ ಹಿಂದುತ್ವವು ಈ ಕೆಲಸ ಮಾಡಬಲ್ಲದು. ಹಿಂದೂಧರ್ಮವು ಸಂಕುಚಿತ ದೃಷ್ಟಿಯಲ್ಲಿ ರಾಜಕೀಯ ಧರ್ಮವಲ್ಲ, ಅದು ಸಿದ್ಧಾಂತ ಹಾಗೂ ಸಂಘಟನೆಯ ಧರ್ಮವಲ್ಲ. ಆದರೆ ದೇಶದ ರಾಜಕೀಯ ಇತಿಹಾಸದಲ್ಲಿ ಒಗ್ಗಟ್ಟನ್ನು ತರಬಯಸಿದ ಮಹಾನ್ ಪ್ರಯತ್ನಗಳಿಗೆ ಇದರಿಂದ ಪ್ರೇರಣೆ ದೊರೆತಿದೆ ಹಾಗೂ ಅವುಗಳಿಗೆ ಇದು ಪ್ರಮುಖ ಸಾಧನವಾಗಿದೆ. ಹಿಂದೂಧರ್ಮದಲ್ಲಿನ ಉದಾರವಾದ ಹಾಗೂ ಮತಾಂಧತೆಯ ಸಮರವನ್ನು ದೇಶದ ಒಗ್ಗಟ್ಟು ಹಾಗೂ ವಿಘಟನೆಯ ಶಕ್ತಿಗಳ ನಡುವಣ ಸಂಘರ್ಷವೆಂತಲೂ ಕರೆಯಬಹುದು. ಆದರೆ ಉದಾರವಾದಿ ಹಿಂದುತ್ವವು ಸಮಸ್ಯೆಯನ್ನು ಪೂರ್ತಿಯಗಿ ಬಗೆಹರಿಸಲಿಲ್ಲ. ವೈವಿಧ್ಯದಲ್ಲಿ ಏಕತೆ ಎಂಬ ತತ್ವದ ಮೂಲದಲ್ಲಿ ಕೊಳೆತ ಹಾಗೂ ವಿಘಟನೆಯ ಬೀಜಗಳಿವೆ. ಯಾವತ್ತೂ ಉದಾರವಾದಿ ವಿಚಾರಗಳಲ್ಲಿ ಮೇಲಿಂದ ನುಸುಳಿಕೊಳ್ಳುವ ಹಾಗೂ ನಿರಂತರ ವೈಚಾರಿಕ ಸ್ಪಷ್ಟತೆಗೆ ಅಡೆತಡೆ ಉಂಟುಮಾಡುವ ಮತಾಂಧ ಶಕ್ತಿಗಳ ಹೊರತಾಗಿ, ವೈವಿಧ್ಯದಲ್ಲಿ ಏಕತೆ ಎನ್ನುವ ತತ್ವವು ಸಮೃದ್ಧವೂ ನಿಷ್ಕ್ರಿಯವೂ ಆದ ಮನಸ್ಸನ್ನು ರೂಪಿಸುತ್ತದೆ. ಹಿಂದೂಧರ್ಮವು ನಿರಂತರವಾಗಿ ಸಣ್ಣ ಸಣ್ಣ ಪಂಥಗಳಾಗಿ ಒಡೆಯುತ್ತಿರುವುದು ತುಂಬ ಖೇದದ ಸಂಗತಿ. ಆ ಪೈಕಿ ಒಂದೊಂದು ಪಂಥವೂ ತನ್ನದೇ ಶಂಖ ಊದತೊಡಗುತ್ತದೆ. ಉದಾರವಾದೀ ಹಿಂದುತ್ವವು ಅವುಗಳ ಮೇಲೆ ಏಕತೆಯ ಮುಸುಕನ್ನು ಹೊದಿಸಲೆತ್ನಿಸಿದಷ್ಟೂ ಅವು ಅನಿವಾರ್ಯವಾಗಿ ರಾಷ್ಟ್ರದ ಸಾಮೂಹಿಕ ಬದುಕಿನಲ್ಲಿ ದೌರ್ಬಲ್ಯ ಹುಟ್ಟು ಹಾಕುತ್ತವೆ. ಒಂದು ವಿಚಿತ್ರ ಔದಾಸೀನ್ಯ ಎಲ್ಲೆಡೆ ಆವರಿಸುತ್ತದೆ. ಅವು ಒಂದು ಇನ್ನೊಂದರ ಅಂಗಗಳಾಗಿವೆ ಎಂದು ಎಲ್ಲರಿಗೂ ಮನವರಿಕೆಯಾಗಿದೆ ಎನ್ನುವಂತೆ ಯಾವೊಬ್ಬನೂ ನಿರಂತರ ನಡೆಯುತ್ತಿರುವ ವಿಭಜನೆ ಕುರಿತು ಯೋಚಿಸಲಾರನು. ಇದರಿಂದಾಗಿಯೇ ಮತಾಂಧ ಹಿಂದುತ್ವಕ್ಕೆ ಅವಕಾಶ ಸಿಗುತ್ತದೆ ಹಾಗೂ ಅಧಿಕಾರದ ಆಕಾಂಕ್ಷೆಯ ರೂಪದಲ್ಲಿ ಪ್ರೇರಕ ಶಕ್ತಿ ಸಿಗುತ್ತದೆ. ಹೀಗೆ ಅದರ ಪ್ರಯತ್ನಗಳ ಫಲವಾಗಿ ಇನ್ನೂ ಹೆಚ್ಚಿನ ದೌರ್ಬಲ್ಯ ಉಂಟಾಗುತ್ತದೆ.

## ಮತಾಂಧತೆ ಮತ್ತು ಹಿಂದೂ ಮನಸ್ಸು

**ಮು**ಸಲ್ಮಾನರಿಗೆ ಸಂಬಂಧಿಸಿದಂತೆ ಯಾವ ದೃಷ್ಟಿಕೋನ ಇರಬೇಕು ಎನ್ನುವುದೇ ಇದೀಗ ಉದಾರ ಹಾಗೂ ಮತಾಂಧ ಹಿಂದುತ್ವದ ಮಹಾಯುದ್ಧದ ಹೊರರೂಪವಾಗಿದೆ. ಇದು ಹೊರ ರೂಪವಾಗಿದೆ ಹಾಗೂ ಈ ತನಕ ಪರಿಹಾರಗಾಣದ ಮೂಲಭೂತ ಸಂಘರ್ಷಗಳು ಹೆಚ್ಚು ನಿರ್ಣಾಯಕವಾಗಿವೆ ಎಂಬುದನ್ನು ನಾವು ಒಂದು ಕ್ಷಣವೂ ಮರೆಯಬಾರದು. ಮಹಾತ್ಮಾಗಾಂಧಿಯವರ ಹತ್ಯೆ ಹಾಗೂ ಹಿಂದೂ ಮುಸಲ್ಮಾನ ಘರ್ಷಣೆಯ ಘಟನೆಯು ಹಿಂದೂ ಧರ್ಮದಲ್ಲಿನ ಉದಾರವಾದಿ ಹಾಗೂ ಮತಾಂಧ ಶಕ್ತಿಗಳ ಹಣಾಹಣಿಯಷ್ಟು ಪ್ರಮುಖವಾಗಿರಲಿಲ್ಲ. ಅಷ್ಟು ಹೊತ್ತಿಗಾಗಲೇ ಜಾತಿ, ಮಹಿಳೆ, ಅಸ್ತಿ, ಪರಧರ್ಮ ಸಹಿಷ್ಣುತೆ ಮೊದಲಾದವುಗಳಿಗೆ ಸಂಬಂಧಿಸಿದಂತೆ ಗಾಂಧೀಜಿಯವರು ಮತಾಂಧರ ಮೇಲೆ ತೀವ್ರ ಪ್ರಹಾರ ಮಾಡಿದ್ದರು. ಅದರ ವಿರುದ್ಧ ವಿಷವೆಲ್ಲ ಒಂದೆಡೆ

(೫ನೇ ಪುಟಕ್ಕೆ

ಪ್ರಚಲಿತ

# ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ ಮುಸ್ಲಿಮರು ಬೀದಿಗಿಳಿದಿದ್ದಾರೆ...

–ನಿಜ಼ಾಂ ಪಾಶಾ

**ಮುಸ್ಲಿಂ ಗಂಡಸರು, ಹೆಂಗಸರು, ಮುದುಕರು, ಮಕ್ಕಳು ಎಲ್ಲರೂ ಬೀದಿಗಿಳಿದು, ತಾವೇ ಮಾತನಾಡಲು ನಿರ್ಧರಿಸಿದ್ದಾರೆ. ಗೋರಕ್ಷಣೆಯ ಹೆಸರಿನಲ್ಲಿ ಮುಸ್ಲಿಮರನ್ನು ಥಳಿಸುವ ಕೃತ್ಯಗಳನ್ನು ಪ್ರತಿಭಟಿಸಲು ೨೦೧೭ರಲ್ಲಿ (ಸಣ್ಣ ಸಂಖ್ಯೆಯಲ್ಲೇ ಆದರೂ ಬೇರೆಲ್ಲ ಸಮುದಾಯದ ವ್ಯಕ್ತಿಗಳೂ ಒಗ್ಗೂಡಿ) ಹಮ್ಮಿಕೊಂಡಿದ್ದ 'Not in my name' ಆಂದೋಲನದಂತಲ್ಲದೇ, ಈ ಬಾರಿ ಮುಸ್ಲಿಮರು ಕೇವಲ ಪ್ರತಿಭಟನೆಯ ವಸ್ತುವಾಗದೇ ತಾವೇ ಪ್ರತಿಭಟನೆಯ ಮುಂಚೂಣಿಯಲ್ಲಿ ನಿಂತು ಮುನ್ನಡೆಸುತ್ತಿದ್ದಾರೆ.**




ವ್ಯಂಗ್ಯವೆಂದರೆ, ಭಾರತದಲ್ಲಿ ಮುಸ್ಲಿಮರ ಪೌರತ್ವವನ್ನು ಪ್ರಶ್ನಿಸುವುದಕ್ಕೆಂದೇ ವಿನ್ಯಾಸಗೊಳಿಸಲಾಗಿರುವ ಪೌರತ್ವ ತಿದ್ದುಪಡಿ ಕಾಯ್ದೆ–ರಾಷ್ಟ್ರೀಯ ನಾಗರಿಕರ ನೋಂದಣಿ–ರಾಷ್ಟ್ರೀಯ ಜನಸಂಖ್ಯಾ ನೋಂದಣಿ ಎಂಬ ಅಪವಿತ್ರ ತ್ರಿವಳಿ ಕಾಯ್ದೆಗಳು, ಮುಸ್ಲಿಮರು ತಮ್ಮ ಭಾರತೀಯ ಅಸ್ಮಿತೆಯನ್ನು ಮರುಸ್ಥಾಪಿಸುತ್ತಿರುವ ಅನಿರೀಕ್ಷಿತ ಬೆಳವಣಿಗೆಗಳಿಗೆ ಕಾರಣವಾಗಿವೆ. ದೇಶವಿಭಜನೆಯಿಂದ ಉಂಟಾಗಿದ್ದ ಕೋಮುದ್ವೇಷದ ಪ್ರತಿಕೂಲ ವಾತಾವರಣದಲ್ಲೂ ಮುಸ್ಲಿಮರು ಸ್ವತಂತ್ರ ಭಾರತದಲ್ಲೇ ಉಳಿಯುವ ಆಯ್ಕೆ ಮಾಡಿಕೊಂಡಿದ್ದರೂ ಕೂಡ ಅವರ ದೇಶಪ್ರೇಮವನ್ನು ನಿರಂತರವಾಗಿ ಪ್ರಶ್ನಿಸುತ್ತಲೇ ಬರಲಾಗಿದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಹುಟ್ಟಿಕೊಂಡಿದ್ದ ಬಹುತೇಕ ಮುಸ್ಲಿಂ ನಾಯಕರು, ದೇಶವಿಭಜನೆಯಾದ ಕೂಡಲೇ ಪಾಕಿಸ್ತಾನಕ್ಕೆ ಹೊರಟಿದ್ದರಿಂದ, ಸ್ವಾತಂತ್ರ್ಯಾನಂತರ ಭಾರತದಾದ್ಯಂತ ಪ್ರಭಾವಿಯಾದ ಮುಸ್ಲಿಂ ನಾಯಕರು ಇಲ್ಲದಂತಾಯಿತು. ಸಾಚಾರ್ ಸಮಿತಿ ವರದಿಯ ಪ್ರಕಾರ, ಸಶಸ್ತ್ರ ಪಡೆ, ಪೊಲೀಸ್, ಆಡಳಿತಶಾಹಿ, ಶೈಕ್ಷಣಿಕ ಸಂಸ್ಥೆಗಳು, ಸಂಘಟಿತ ಖಾಸಗೀ ಉದ್ಯಮ ವಲಯವೂ ಸೇರಿದಂತೆ ಸಾರ್ವಜನಿಕ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಮುಸ್ಲಿಮರ ಪಾಲ್ಗೊಳ್ಳುವಿಕೆ ಪ್ರಮಾಣಾನುಗುಣವಾಗಿ ಇರಬೇಕಾದ್ದಕ್ಕಿಂತ ತೀರಾ ಕಡಿಮೆಯಿದೆ. ಬಲಪಂಥೀಯ ರಾಜಕಾರಣ ಮುನ್ನೆಲೆಗೆ ಬರುತ್ತಿದ್ದಂತೆ, ಜನಕಥನಗಳಲ್ಲಿ 'ರಾಷ್ಟ್ರೀಯತೆ' ಎಂದರೆ, ಅಬ್ಬರದ ದೇಶಭಕ್ತಿ, ಉನ್ಮತ್ತ ಗಂಡಸುತನ ಮತ್ತು ಕೋಮುವಾದ ಎಂದು ಹೆಚ್ಚೆಚ್ಚು ಅರ್ಥೈಸಲ್ಪಟ್ಟಿತು. ಪ್ರತಿ ಮತಾಂಧನೂ ತಾನೊಬ್ಬ/ಬ್ಬಳು 'ರಾಷ್ಟ್ರೀಯವಾದಿ' ಎಂದು ಗುರುತಿಸಿಕೊಳ್ಳಲಾರಂಭಿಸಿದ/ಳು. ಪ್ರತಿ ಹಂತದಲ್ಲೂ ಮುಸ್ಲಿಮರು 'ದೇಶದ್ರೋಹಿಗಳು', 'ಪಾಕಿಸ್ತಾನ ಪರ' ಎಂಬ ಆರೋಪಕ್ಕೊಳಗಾದರು. 'ಪಾಕಿಸ್ತಾನಕ್ಕೆ ಹೋಗಿ' ಎನ್ನುವ ಮಾತುಗಳನ್ನೆದುರಿಸಿದರು. ಉದಾರವಾದಿ ಮೌಲ್ಯಗಳನ್ನು ಒಪ್ಪಿಕೊಂಡ ವ್ಯಕ್ತಿಗಳನ್ನು, ಸಂಸ್ಥೆಗಳನ್ನು, ಸಮುದಾಯಗಳನ್ನು 'ಸಾಕಷ್ಟು ದೇಶಭಕ್ತರಲ್ಲ' ಎಂದೂ, 'ಭಯೋತ್ಪಾದಕರ, ಪ್ರತ್ಯೇಕತಾವಾದಿಗಳ, ನುಸುಳುಕೋರರ, ಬಗೆಬಗೆಯ ರಾಷ್ಟ್ರದ್ರೋಹಿಗಳ (ಸಾಮಾನ್ಯವಾಗಿ ರಾಷ್ಟ್ರದ್ರೋಹಿಗಳೆಂದರೆ ಮುಸ್ಲಿಮರು ಎಂದೇ) ಬಗ್ಗೆ ಮೃದುಧೋರಣೆ ಉಳ್ಳವರು' ಎಂದೂ ವರ್ಗೀಕರಿಸಲಾಯಿತು.

ಸಂಕೇತಗಳು, ಬೇಕಾದವರಿಗೆ ಬೇಕಾದಹಾಗೆ ಬಳಸಿಕೊಳ್ಳಲಾಗುವಷ್ಟು ಯಾವಾಗಲೂ ದುರ್ಬಲವಾಗಿರುತ್ತವೆ. ಈ 'ನವ ರಾಷ್ಟ್ರೀಯವಾದಿ'ಗಳು ತ್ರಿವರ್ಣಧ್ವಜವನ್ನು ತಮ್ಮ ಮೆರವಣಿಗೆಗಳಲ್ಲಿ ಕೊಂಡೊಯ್ದರು. ಅಕ್ಷರಶಃ ತಮ್ಮ ತೋಳುಗಳ ಮೇಲೂ ಧರಿಸಿಕೊಂಡರು. ತ್ರಿವರ್ಣಧ್ವಜವೆಂದರೆ ಈ ನವ 'ರಾಷ್ಟ್ರೀಯವಾದಿಗಳು ಎನ್ನುವಷ್ಟು ಸಮಾನಾರ್ಥಕವಾಗಿಬಿಟ್ಟಿತು. ಕಠುವಾದಲ್ಲಿ ಎಂಟು ವರ್ಷದ (ಮುಸ್ಲಿಂ)ಬಾಲಕಿಯ ಮೇಲೆ ನಡೆದ ಕ್ರೂರ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೊಳಪಟ್ಟ ಆರೋಪಿಗಳನ್ನು ಬೆಂಬಲಿಸಿ ಜಮ್ಮುವಿನಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಹಾರಾಡಿದ ತ್ರಿವರ್ಣಧ್ವಜದ ಚಿತ್ರ ಜನರ ನೆನಪಿನಲ್ಲಿ ಅಚ್ಚೊತ್ತಿದೆ.

ಗೋಹತ್ಯೆಯ ಹೆಸರಿನಲ್ಲಿ ಸಾರ್ವಜನಿಕವಾಗಿ ಥಳಿಸುವುದು, ಕಾನೂನು ಕೈಗೆತ್ತಿಕೊಂಡು ಕೊಲೆ ಮಾಡುವುದು, ಸುಪ್ರೀಂಕೋರ್ಟ್ ಈಗಾಗಲೇ ನಿಷ್ಪ್ರಯೋಜಕಗೊಳಿಸಿರುವ ತಲಾಕ್‌ನ ಅನ್ಯ ರೂಪಗಳನ್ನು ಅಪರಾಧೀಕರಣಗೊಳಿಸುವ ಅಸಂಬದ್ಧ ಕಾನೂನುಗಳ ಜಾರಿ, ೪೬೪ ವರ್ಷ ಹಳೆಯದಾದ ಮಸೀದಿಯನ್ನು ಅಕ್ರಮವಾಗಿ ಧ್ವಂಸಮಾಡಿ ದೇಶದ ಬಹುತ್ವ ಸ್ವರೂಪಕ್ಕೆ ಸರಿಪಡಿಸಲಾಗದಷ್ಟು ಧಕ್ಕೆ ಉಂಟುಮಾಡಿರುವುದಕ್ಕೆ ಪರಿಹಾರವಾಗಿ ೫ ಎಕರೆ ಜಾಗವನ್ನು ಕೊಟ್ಟಿರುವುದು, ೩೭೦ನೇ ವಿಧಿಯನ್ನು ಹಿಂಪಡೆದಿರುವುದು ಮತ್ತು ಆನಂತರ ಕಾಶ್ಮೀರದಲ್ಲಿ ಉಸಿರುಗಟ್ಟಿಸುವಂತಹ ನಿರ್ಬಂಧಗಳು ಇವ್ಯಾವುವೂ ಭಾರತೀಯ ಮುಸ್ಲಿಮರನ್ನು ಬಡಿದೆಬ್ಬಿಸಲಿಲ್ಲ ಮತ್ತು ತಂತಮ್ಮ ಮನೆಮಠಗಳನ್ನು ಬಿಟ್ಟು ಹೊರಬಂದು ಬೀದಿಗಿಳಿಯುವಂತೆ ಪ್ರೇರೇಪಿಸಲಿಲ್ಲ.

ಆನಂತರ, ಸರ್ಕಾರವು ಮತ್ತಷ್ಟು ಮುಂದೆ ಹೋಗಿ, ಒಂದರ ಹಿಂದೊಂದರಂತೆ ಕಾಯ್ದೆಗಳನ್ನು ಜಾರಿ ಮಾಡಿತು. ಒಟ್ಟು ಪರಿಣಾಮದಲ್ಲಿ ಮುಸ್ಲಿಮರು ತಮ್ಮ ಭಾರತೀಯತೆಯನ್ನು ಸಾಬೀತುಪಡಿಸಬೇಕು ಇಲ್ಲವೇ ಕಾನೂನು ಕ್ರಮ ಎದುರಿಸಬೇಕು ಎಂಬ ಸನ್ನಿವೇಶವನ್ನು ಸೃಷ್ಟಿಸಿತು. ಮಿಕ್ಕೆಲ್ಲಾ ಸಮುದಾಯಗಳಿಗೂ ಸುರಕ್ಷಿತವಾದ ದಾರಿಯನ್ನು ತೋರಿಸಿತು. ಅವರು ಹೇಳುವಂತೆ, ಉಳಿದದ್ದು ಇತಿಹಾಸದ ಸಕ್ರಮೀಕರಣ! ಅಂತೂ ಚೂರಿಯು ಮೂಳೆಗೇ ತಾಗುವಷ್ಟು ಆಳಕ್ಕೆ ಇರಿಯಿತು.

ಪ್ರತಿಭಟನೆಗಳು ಜಾಮಿಯಾ ಮಿಲಿಯಾ ಇಸ್ಲಾಮಿಯಾದಲ್ಲಿ ಆರಂಭಗೊಂಡು ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯಕ್ಕೂ ವೇಗವಾಗಿ ಹಬ್ಬಿತು. ಆನಂತರ ದೇಶದ ಉಳಿದ ಭಾಗಗಳಿಗೆ ಹರಡಿತು. ಮೊದಲು ಜಾಮಿಯಾದಲ್ಲಿ ಶುರುವಾದದ್ದೂ ಕೂಡ ಅದರ ಐತಿಹಾಸಿಕ ಪರಂಪರೆಗೆ ತಕ್ಕನಾಗಿಯೇ ಇದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ, ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವು(ಎಎಂಯು) ಹೆಚ್ಚು ವಸಾಹತು ಚಹರೆಗಳನ್ನು ಹೊಂದಿದೆ ಎಂದು ಭಾವಿಸಿದ ಮುಸ್ಲಿಂ ನಾಯಕರು, ಅದರಿಂದ ಹೊರಬಂದು ಸ್ವಾತಂತ್ರ್ಯ ಆಂದೋಲನದಲ್ಲಿ ಸಮಾನವಾಗಿ ಭಾಗಿಯಾಗಬೇಕೆಂದು ನಿರ್ಧರಿಸಿ ಜಾಮಿಯಾ ಮಿಲಿಯಾ ಇಸ್ಲಾಮಿಯಾವನ್ನು ಸ್ಥಾಪಿಸಿದರು. ಜಾಮಿಯಾ ಮಿಲಿಯಾ ಇಸ್ಲಾಮಿಯಾವು ಮಹಾತ್ಮಗಾಂಧಿಯವರು ಘೋಷಿಸಿದ ಅಸಹಕಾರ ಚಳುವಳಿ ಮತ್ತು ಖಿಲಾಫತ್ ಚಳುವಳಿಗಳ ಕೇಂದ್ರಸ್ಥಾನವಾಯಿತು. 'ಅಗತ್ಯಬಿದ್ದಲ್ಲಿ, ವಿಶ್ವವಿದ್ಯಾನಿಲಯದ ಪೋಷಣೆಗೆ ಭಿಕ್ಷಾಪಾತ್ರೆ ಹಿಡಿದು ಹೊರಡುವೆ' ಎಂದೂ ಗಾಂಧಿ ಹೇಳಿದ್ದರು.

ಎನ್‌ಆರ್‌ಸಿ–ಸಿಎಎ–ಎನ್‌ಪಿಆರ್ ವಿರೋಧಿ ಪ್ರತಿಭಟನೆಗಳಲ್ಲಿ ಜಾಮಿಯಾ ಮತ್ತು ಎಎಂಯುಗಳ ಪಾತ್ರವನ್ನು ವಿವರಿಸುವಲ್ಲಿ, ಮಜಾಜ಼್ ಲುಖ್ನವಿ ಬರೆದಿರುವ ಅಲಿಘರ್‌ನ ಗೀತೆ, 'ಅಲಿಘರ್ ಕಾ ತರಾನಾ...'ದ ಸಾಲುಗಳು ಅಪರೂಪದ ದಾರ್ಶನಿಕ ಕಾಣ್ಕೆಗಳಾಗಿ ಸಾಬೀತಾಗುತ್ತಿವೆ....

' ಜೊ ಅಬ್ರ್ ಯಹಾಂ ಸೆ ಉಠೇಗಾ, ವೊ ಸಾರೇ ಜಹಾಂ ಪರ್ ಬರ್‌ಸೇಗಾ...'
[ಇಲ್ಲಿಂದ ಮೇಲೇರಿದ (ಕ್ರಾಂತಿಯ)ಮೋಡ, ಇಡೀ ಪ್ರಪಂಚದ ಮೇಲೆ ಮಳೆ ಸುರಿಸುತ್ತದೆ]

ದೇಶಾದ್ಯಂತ ಹರಡಿರುವ ಈ ಮಹತ್ವದ ಜನಾಂದೋಲನವನ್ನು ಮುಸ್ಲಿಂ ಆಂದೋಲನವೆಂದು ಕರೆಯುವುದು ಉಚಿತವಲ್ಲ. ಆದರೆ ಸ್ವಾತಂತ್ರ್ಯಾನಂತರ ಮೊಟ್ಟಮೊದಲ ಬಾರಿಗೆ ಮುಸ್ಲಿಮರು ಬೀದಿಗಿಳಿದು ತಮ್ಮದೇ ರಾಷ್ಟ್ರದ ರಾಜಕೀಯ ಸಂಕಥನಗಳಲ್ಲಿ ಸಮಪಾಲಿನ ಮಾನ್ಯತೆಗಾಗಿ ತಮ್ಮ ದನಿಯನ್ನು ಎತ್ತಿದ್ದಾರೆ ಎನ್ನುವುದನ್ನು ನಾವು ಗಮನಿಸಬೇಕು..

ಪ್ರತಿಭಟನೆಗಳು ಚುನಾವಣೆಗಳನ್ನೇನೂ ಗೆದ್ದುಕೊಡುವುದಿಲ್ಲ ಎಂಬುದು ನಿಜ. ಬಹುಪಾಲು ಜನ ಇನ್ನೂ ಮೋದಿ ಹಿಂದೆ ಇದ್ದಾರೆ ಮತ್ತು ಈ ತಾರತಮ್ಯದ ಕಾಯ್ದೆಗಳನ್ನು ಬೆಂಬಲಿಸುತ್ತಾರೆ ಎಂದೇ ಒಂದು ಕ್ಷಣ ಊಹಿಸೋಣ. ಆದರೆ ಮೋದಿ–ಶಾ ಸರ್ಕಾರ ಬಂದಮೇಲೆ ಮೊದಲ ಬಾರಿಗೆ, ಅವರ ತಾರತಮ್ಯದ ಮತ್ತು ವಿಭಜಕ ಕಾನೂನುಗಳಿಗೆ, ಮೋಡಿಮಾತುಗಳಿಗೆ ದೇಶಾದ್ಯಂತ ವಿರೋಧ ವ್ಯಕ್ತವಾಗಿದೆ. ಈ ವಿರೋಧವು ಭುಗಿಲೆದ್ದಿರುವುದು ಯಾವುದೇ ಪಕ್ಷ ಅಥವಾ ವ್ಯಕ್ತಿಯಿಂದಲ್ಲ. ಇದು ಜನರಿಂದಲೇ ಎಂಬುದು ಗಮನಾರ್ಹ..

ಈ ಪ್ರತಿಭಟನೆಗಳು ಅವುಗಳ ನಿರಂತರತೆ ಮತ್ತು ನಾಯಕತ್ವದ ಗೈರುಹಾಜರಿಯಿಂದ ಗಮನ ಸೆಳೆದಿವೆ. ವಿದ್ಯಾರ್ಥಿ ನಾಯಕರು, ಜನಪ್ರಿಯ ಸಂಸ್ಕೃತಿ ಲೋಕದ ತಾರೆಯರು, ಸ್ಥಳೀಯ ಮತ್ತು ಪ್ರಾಂತೀಯ ದಿಗ್ಗಜರು, ನಿಜಾರ್ಥದಲ್ಲಿ ನಡೆದಿರುವ ಈ ಜನಾಂದೋಲನದಲ್ಲಿ ತಮ್ಮ ಪಾತ್ರವೇನು ಎಂದು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾ ಒಂದು ಪ್ರತಿಭಟನಾ ಸ್ಥಳದಿಂದ ಮತ್ತೊಂದರ ನಡುವೆ ತಾರಾಡುತ್ತಿರುವುದನ್ನು ನೋಡಬಹುದು. ಸಾಮಾನ್ಯ ಮುಸ್ಲಿಂ ಪುರುಷ ಮತ್ತು ಮಹಿಳೆ, ತಮ್ಮ ಆತಂಕಗಳ ಬಗ್ಗೆ ದನಿ ಎತ್ತಲು, ಆ ಪಕ್ಷ ಈ ಪಕ್ಷ, ಆ ನಾಯಕ, ಈ ನಾಯಕ ಎಂದು ಕಾಯ್ದುಕೂರಲು ನಿರಾಕರಿಸಿದ್ದಾರೆ. ತಮ್ಮ ಸಮುದಾಯದಲ್ಲಿ ರಾಷ್ಟ್ರೀಯ ನಾಯಕತ್ವದ ಕೊರತೆಯಿರುವ ಬಗ್ಗೆ ಕೊರಗು ಈಗ ಇಲ್ಲ!

ಮುಸ್ಲಿಂ ಗಂಡಸರು, ಹೆಂಗಸರು, ಮುದುಕರು, ಮಕ್ಕಳು ಎಲ್ಲರೂ ಬೀದಿಗಿಳಿದು, ತಾವೇ ಮಾತನಾಡಲು ನಿರ್ಧರಿಸಿದ್ದಾರೆ. ಗೋರಕ್ಷಣೆಯ ಹೆಸರಿನಲ್ಲಿ ಮುಸ್ಲಿಮರನ್ನು ಥಳಿಸುವ ಕೃತ್ಯಗಳನ್ನು ಪ್ರತಿಭಟಿಸಲು ೨೦೧೭ರಲ್ಲಿ (ಸಣ್ಣ ಸಂಖ್ಯೆಯಲ್ಲೇ ಆದರೂ ಬೇರೆಲ್ಲ ಸಮುದಾಯದ ವ್ಯಕ್ತಿಗಳೂ ಒಗ್ಗೂಡಿ) ಹಮ್ಮಿಕೊಂಡಿದ್ದ 'Not in my name' ಆಂದೋಲನದಂತಲ್ಲದೇ, ಈ ಬಾರಿ ಮುಸ್ಲಿಮರು ಕೇವಲ ಪ್ರತಿಭಟನೆಯ ವಸ್ತುವಾಗದೇ ತಾವೇ ಪ್ರತಿಭಟನೆಯ ಮುಂಚೂಣಿಯಲ್ಲಿ ನಿಂತು ಮುನ್ನಡೆಸುತ್ತಿದ್ದಾರೆ.

ಭಾರತದ ರಾಷ್ಟ್ರೀಯ ನಾಯಕರನ್ನು ಮತ್ತು ಸಂಕೇತಗಳನ್ನು ಮುಸ್ಲಿಮರು ತಮ್ಮದಾಗಿಸಿಕೊಳ್ಳುತ್ತಿರುವುದನ್ನು ಈ ಪ್ರತಿಭಟನೆಗಳಲ್ಲಿ ಗುರುತಿಸಲಾಗಿದೆ. ಟೋಪಿಗಳನ್ನು ಧರಿಸಿದ ಗಂಡಸರು, ಹಿಜಬ್‌ಗಳನ್ನು ಧರಿಸಿದ ಹೆಂಗಸರು ತ್ರಿವರ್ಣಧ್ವಜವನ್ನು ಬೀಸುತ್ತಾ, ಮುಖದ ಮೇಲೆ ತ್ರಿವರ್ಣ ಬಳಿದುಕೊಂಡು ದೇಶದ ಬಹುತೇಕ ನಗರಗಳ ಬೀದಿಗಳಲ್ಲಿ, ಪ್ರತಿಭಟನಾ ಸ್ಥಳಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಮೆರವಣಿಗೆಗಳಲ್ಲಿ ಕೇವಲ ಮೌಲಾನಾ ಆಜಾದ್, ಜಾಕೀರ್ ಹುಸೇನರ ಚಿತ್ರಗಳಿಗೆ ಜೋತುಬೀಳುತ್ತಿಲ್ಲ. ತಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗುತ್ತಿರುವ ಈ ಸಂದರ್ಭದಲ್ಲಿ, ಎಲ್ಲ ರಾಷ್ಟ್ರೀಯ ನಾಯಕರನ್ನೂ, ತಮ್ಮೆಲ್ಲರ ಸ್ವಾತಂತ್ರ್ಯಕ್ಕಾಗಿ ಹೋರಾಡಿರುವ ನಾಯಕರನ್ನಾಗಿ ಮರುಸ್ಥಾಪಿಸಿಕೊಳ್ಳುತ್ತಿದ್ದಾರೆ.

ಮಹಾತ್ಮ ಗಾಂಧಿ ಮತ್ತೆ ಪ್ರತಿರೋಧದ ಸಂಕೇತವಾಗಿದ್ದಾರೆ. ಡಾ. ಬಿ.ಆರ್.ಅಂಬೇಡ್ಕರರು, ಮತ್ತೊಮ್ಮೆ, ಅವರು ರಚಿಸಿದ ಸಂವಿಧಾನದ ಪ್ರಸ್ತಾವನೆಯಲ್ಲಿರುವ 'ಪ್ರಜೆಗಳಾದ ನಮಗೆ' ಸೇರಿದ್ದಾರೆ. ಈಗ ಅವರು ಉತ್ತರ ಪ್ರದೇಶದ ಒಂದು ಪಕ್ಷಕ್ಕೆ ಮಾತ್ರ ಸೀಮಿತರಾದವರಲ್ಲ. ಇವೆಲ್ಲದರ ಜೊತೆಗೆ ಹಜರತ್ ಮೊಹಾನಿಯವರ 'ಇಂಕಿಲಾಬ್ ಜಿಂದಾಬಾದ್', ಬಿಸ್ಮಿಲ್ ಅಜೀಮಾಬಾದಿಯವರ 'ಸರ್ಫರೋಶ್ ಕಿ ತಮನ್ನಾ' ಮತ್ತು ಫೈಜ್ ಅಹಮದ್ ಫೈಜ್ ಅವರ 'ಹಮ್ ದೇಖೇಂಗೇ'ಯ ಸಾಲುಗಳು ಪ್ರತಿಭಟನೆಯ ಘೋಷಣೆಗಳಲ್ಲಿ ಮತ್ತೆ ಕೇಳಿಬರುತ್ತಿವೆ. ಈ ಉಪಖಂಡದ ಮುಸ್ಲಿಮರು ನಾಗರಿಕ ಸ್ವಾತಂತ್ರ್ಯಗಳಿಗಾಗಿ ನಡೆಯುವ ಹೋರಾಟಗಳಿಂದ ಹೊರಗುಳಿದಿಲ್ಲ ಎಂಬುದನ್ನೂ ಇದು ತೋರಿಸುತ್ತಿದೆ.

ವಾಸ್ತವವಾಗಿ ಈ ವಿದ್ಯಮಾನದಿಂದ, ಸ್ಥಾಪಿತ ಸಂಸ್ಥೆಯು(ಐಐಟಿ ಕಾನ್ಪುರದ ಆಡಳಿತವೂ) ಎಷ್ಟು ವಿಚಲಿತವಾಗಿದೆಯೆಂದರೆ, ಫೈಜ್ ಅಹಮದ್ ಫೈಜ್‌ರ 'ಹಮ್ ದೇಖೇಂಗೇ' ಕವನವು ವಿಗ್ರಹ ಭಂಜಕವಾಗಿ ಹಿಂದೂವಿರೋಧಿಯಾಗಿದೆಯೇ ಎಂದು ವಿಚಾರಣೆಗೆ ಆದೇಶಿಸುವಂಥಾ ಅಸಂಬದ್ಧ ಕೆಲಸಕ್ಕೆ ಅದು ಕೈ ಹಾಕಿದೆ. ಬಹುಶಃ ಇದರ ನಿರ್ದೇಶಕರು, 'ವಿಗ್ರಹ ಭಂಜನೆ' ಎಂಬ ಶಬ್ದದ ಅಕ್ಷರಶಃ ಅರ್ಥ ನೋಡದೆ ಅದರ ರೂಪಕಾರ್ಥವಾದ, 'ಭದ್ರವಾಗಿ ತಳವೂರಿರುವ ಸಂಸ್ಥೆಗಳ ಮತ್ತು ಆಲೋಚನೆಗಳ ವಿರೋಧ' ಎಂಬುದರತ್ತ ಗಮನ ಹರಿಸಿದರೆ ಒಳ್ಳೆಯದು. ಸುಪ್ರೀಂ ಕೋರ್ಟ್‌ನ ಪ್ರಸಿದ್ಧ ಮಾಜಿ ನ್ಯಾಯಾಧೀಶರಾದ ದಿ. ನ್ಯಾ.ವಿ.ಆರ್.ಕೃಷ್ಣ ಅಯ್ಯರ್‌ರವರು ಡಾ.ಅಂಬೇಡ್ಕರ್‌ರನ್ನು 'ರಚನಾತ್ಮಕ ವಿಗ್ರಹಭಂಜಕ' ಎಂದು ಕರೆದಿದ್ದರು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬೇಕು.

ರಾಷ್ಟ್ರೀಯ ನಾಯಕರನ್ನು, ಸಂಕೇತಗಳನ್ನು ತಮ್ಮದಾಗಿಸಿಕೊಳ್ಳುವುದರ ಜೊತೆಗೆ ಮುಸ್ಲಿಂ ಪ್ರತಿಭಟನಾಕಾರರಲ್ಲಿ ಈಗ ತಮ್ಮ ಮುಸ್ಲಿಂ ಅಸ್ಮಿತೆಯ ಪುನರ್‌ದೃಢೀಕರಣವೂ ನಡೆದಿದೆ. ನಮಾಜಿಗಾಗಿ ಪ್ರತಿಭಟನೆಗಳನ್ನು ನಿಲ್ಲಿಸುತ್ತಿದ್ದಾರೆ. ಮುಸ್ಲಿಮೇತರ ಪ್ರತಿಭಟನಾಕಾರರು ನಮಾಜು ಮಾಡುವವರನ್ನು ಸುತ್ತುವರೆದು ಮಾನವ ಸರಪಳಿಯನ್ನು ನಿರ್ಮಿಸುತ್ತಿದ್ದಾರೆ. ಮಸೀದಿಗಳಲ್ಲಿ ನಮಾಜು ಮುಗಿದ ಮೇಲೆ, ತಾರತಮ್ಯದ ಕಾಯ್ದೆಗಳು ಹಿಂತೆಗೆದುಕೊಳ್ಳಲ್ಪಡಲಿ ಎಂದು 'ದುವಾ(ಪ್ರಾರ್ಥನೆ)'ಗಳನ್ನು ಮಾಡಲಾಗುತ್ತಿದೆ. ಎನ್‌ಆರ್‌ಸಿ-ಸಿಎಎ-ಎನ್‌ಪಿಆರ್‌ಗಳನ್ನು ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆಗಳಿಗೆ ಬೆಂಬಲ ಸೂಚಿಸುವ ಸಲುವಾಗಿ ವಿವಿಧ ಕಡೆಗಳಲ್ಲಿ 'ರೋಜಾ(ಉಪವಾಸ)'ಗಳನ್ನು ಮಾಡಲಾಗುತ್ತಿದೆ. ಸಮುದಾಯಗಳಲ್ಲಿ 'ಇಫ್ತಾರ್ ಕೂಟ'ಗಳನ್ನು ಏರ್ಪಡಿಸಲಾಗುತ್ತಿದೆ.

ಜಾಮಿಯಾ, ಶಹೀನ್ ಬಾಗ್ ಮತ್ತು ಸುತ್ತಮುತ್ತಲಿನ ಮುಸ್ಲಿಂ ಬಾಹುಳ್ಯದ ಪ್ರದೇಶಗಳಲ್ಲಿ ಈ ಪ್ರತಿಭಟನೆಗಳ ಮೂಲಕ ಒಂದು ಹೊಸರೀತಿಯ ದಿನಚರಿ ಮತ್ತು ಸಂಸ್ಕೃತಿಗಳೇ ಮೂಡಿದಂತಿದೆ. ಹಲವು ವಾರಗಳಿಂದ ನಿರಂತರವಾಗಿ ನಡೆಯುತ್ತಲೇ ಇರುವ ಪ್ರತಿಭಟನೆಯಲ್ಲಿ ಭಾಗವಹಿಸುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಲೇ ಇದೆ. ಅಲ್ಲಿ ಸೇರಿರುವ ಜನರ ವಿವರವನ್ನು ನೋಡಿದರೆ, ವಿದ್ಯಾರ್ಥಿ ಚಳುವಳಿಯಿಂದ ಎಲ್ಲ ವಯೋಮಾನದ ಎಲ್ಲ ರಂಗಗಳ ಜನರ ಚಳುವಳಿಯಾಗಿ ಅದು ಮಾರ್ಪಟ್ಟಿರುವುದು ಕಾಣುತ್ತದೆ. ಶಾಲಾ ಮಕ್ಕಳು ತಮ್ಮ ಶಾಲಾಬಸ್‌ಗಳಿಂದ ಸಿಎಎ ವಿರೋಧಿ ಬ್ಯಾನರ್‌ಗಳನ್ನು ಬೀಸುವುದು ಕಾಣುತ್ತದೆ. ಅಜ್ಜಿಯರು ತಮ್ಮ ಗಾಲಿಕುರ್ಚಿಗಳಲ್ಲೇ ಪ್ರತಿಭಟನಾಸ್ಥಳಕ್ಕೆ ಬಂದು ಘೋಷಣೆಗಳನ್ನು ಕೂಗುತ್ತಿದ್ದಾರೆ.

ಪ್ರತಿಭಟನಾ ಸ್ಥಳದಲ್ಲಿ ಹಿಜಬ್ ತೊಟ್ಟ ಮಹಿಳೆಯರು ಸೇರುವುದು ಹೆಚ್ಚುತ್ತಿದ್ದಂತೆಯೇ, ಆ ಸ್ಥಳಗಳು ಹೆಚ್ಚು ಲಿಂಗಸೂಕ್ಷ್ಮವೂ ಆಗಿ ಪ್ರತಿಕ್ರಿಯಿಸುತ್ತಿವೆ. ಜಾಮಿಯಾದಲ್ಲಿರುವ ಎರಡು ಮಸೀದಿಗಳಲ್ಲಿ ಒಂದನ್ನು ಸಂಪೂರ್ಣವಾಗಿ ಮಹಿಳೆಯರಿಗಾಗಿಯೇ ಮೀಸಲಿಡಲಾಗಿದೆ. ಅಲ್ಲಿನ ಶೌಚಾಲಯಗಳನ್ನು ಅವರ ಬಳಕೆಗಾಗಿ ಬಿಟ್ಟುಕೊಡಲಾಗಿದೆ. ಶಹೀನ್‌ಬಾಗ್‌ನಲ್ಲಿ ರಸ್ತೆಯ ಮಧ್ಯದಲ್ಲೇ ಹಗಲು-ರಾತ್ರಿ ಧರಣಿ ಕುಳಿತ ಮಹಿಳೆಯರನ್ನು, ಅದರಲ್ಲೂ ಮಕ್ಕಳೊಂದಿಗೇ ಕುಳಿತವರನ್ನು, ತತ್ತರಿಸುವ ಚಳಿಯಿಂದ ರಕ್ಷಿಸಲು ಶಾಮಿಯಾನ ಹಾಕಿ, ಜಮಖಾನೆಗಳನ್ನು ಹಾಸಲಾಗಿದೆ. ಲಿಂಗ ತಾರತಮ್ಯದ ವಿಷಯದಲ್ಲಿ ಯಾವ ಸಮುದಾಯವನ್ನು ದೂಷಿಸಲಾಗುತ್ತಿತ್ತೋ ಅದರಲ್ಲಿನ ಈ ಮಂಥನವು ಬರೀ ಹೊರಗಷ್ಟೇ ಅಲ್ಲ ಒಳಗೂ ನಡೆಯುತ್ತಿರುವುದು ಸ್ವಾಗತಾರ್ಹವಾದ ಲಕ್ಷಣವಾಗಿದೆ.

ಅಲ್ಲಮ ಇಕ್ಬಾಲ್ ಅವರು ವಾಸ್ತವವಾಗಿ ಎರಡು ತರಾನಾಗಳನ್ನು ಬರೆದಿದ್ದಾರೆನ್ನುವುದು ಹೆಚ್ಚಿನವರಿಗೆ ತಿಳಿದಿಲ್ಲ. ಒಂದು ಎಲ್ಲರಿಗೂ ತಿಳಿದಿರುವ 'ಸಾರೇ ಜಹಾಂ ಸೇ ಅಚ್ಛಾ, ಹಿಂದೂಸ್ತಾನ್ ಹಮಾರಾ'. ಭಾರತದ ಜನರಲ್ಲಿ ರಾಷ್ಟ್ರೀಯ ಗುರುತು ಮತ್ತು ಹೆಮ್ಮೆಯ ಭಾವವನ್ನು ಮೂಡಿಸುವ ಸಲುವಾಗಿ ಅದನ್ನು ಬರೆದದ್ದು. ಮತ್ತೊಂದು ಅಷ್ಟಾಗಿ ತಿಳಿದಿಲ್ಲದಿರುವುದು-'ಚೀನ್-ಓ-ಅರಬ್ ಹಮಾರಾ/ಹಿಂದೂಸ್ತಾನ್ ಹಮಾರಾ/ಮುಸ್ಲಿಂ ಹೈ ಹಮ್ ವತನ್ ಹೈ/ಸಾರಾ ಜಹಾಂ ಹಮಾರಾ'. ಜಾಗತಿಕವಾಗಿ ಮುಸ್ಲಿಂ ಸಮುದಾಯವನ್ನು ಗುರುತಿಸಿಕೊಳ್ಳಲು ಮತ್ತು ಭಾರತದಲ್ಲಿ ಮುಸ್ಲಿಮರ ಪಾಲನ್ನು ಒತ್ತಿಹೇಳಲು ಬರೆದಂತಹದ್ದು. ಇವತ್ತು ಬಹುಶಃ ಭಾರತೀಯ ಮುಸ್ಲಿಮರು ಈ ಎರಡನ್ನೂ ಒಟ್ಟಾಗಿಸಿ ಈ ಘೋಷಣೆಯನ್ನು ಮಾಡುತ್ತಿದ್ದಾರೆ: 'ಮುಸ್ಲಿಂ ಹೈ ಹಮ್ ವತನ್ ಹೈ/ಹಿಂದೂಸ್ತಾನ್ ಹಮಾರಾ'



**(ನಿಜಾಂ ಪಾಶಾ ಸರ್ವೋನ್ನತ ನ್ಯಾಯಾಲಯದ ವಕೀಲರು ಮತ್ತು ಕಾನೂನು ಸಂವಿಧಾನ ಪರಿಣತ ಲೇಖಕರು)**

(ಕನ್ನಡಕ್ಕೆ: **ರೇಖಾಂಬ ಟಿ.ಎಲ್**

ಕೃಪೆ: ***ಜನತಾ***, ೧೨ ಜನವರಿ, ೨೦೨೦)

೩ನೇ ಪುಟದಿಂದ)

ಸಂಗ್ರಹವಾಗತೊಡಗಿತು. ಹಿಂದೆಯೂ ಒಮ್ಮೆ ಗಾಂಧೀಜಿಯವರ ಹತ್ಯೆಗೆ ಯತ್ನಿಸಲಾಗಿತ್ತು. ಜಾತಿಪದ್ಧತಿಯನ್ನು ಉಳಿಸಿಕೊಳ್ಳುವುದರ ಮೂಲಕ ಹಿಂದೂ ಧರ್ಮವನ್ನು ರಕ್ಷಿಸುವುದೇ ಆ ಸಮಯದಲ್ಲಿ ಅದರ ಘೋಷಿತ ಹಾಗೂ ಸ್ಪಷ್ಟ ಉದ್ದೇಶವಾಗಿತ್ತು. ಇಸ್ಲಾಂನ ದಾಳಿಯಿಂದ ಹಿಂದೂ ಧರ್ಮವನ್ನು ರಕ್ಷಿಸುವುದು ಅಂತಿಮ ಹಾಗೂ ಯಶಸ್ವಿ ಪ್ರಯತ್ನದ ಉದ್ದೇಶವಾಗಿತ್ತೆಂದು ಮೇಲ್ನೋಟಕ್ಕೆ ಅನಿಸುತ್ತಿತ್ತು. ಸೋಲುತ್ತಲಿದ್ದ ಮತಾಂಧತೆಯ ಉದಾರವಾದವನ್ನು ಹಣಿಯಲು ಕಟ್ಟಿದ ಅತಿ ದೊಡ್ಡ ಹಾಗೂ ಅತ್ಯಂತ ಹೇಯ ಬಾಜಿ ಅದಾಗಿತ್ತು ಎಂಬುದರಲ್ಲಿ ಇತಿಹಾಸದ ಯಾವುದೇ ವಿದ್ಯಾರ್ಥಿಗೆ ಸಂದೇಹವಿರಲಾರದು. ಗಾಂಧೀಜಿಯ ಹಂತಕ ಮತಾಂಧತೆಯ ಒಂದು ಅಣುವಾಗಿದ್ದ. ಅದು ಯಾವತ್ತೂ ಹಿಂದೂ ಮನಸ್ಸಿನಲ್ಲಿ ಅಡಗಿಕೊಂಡಿರುತ್ತದೆ. ಕೆಲವೊಮ್ಮೆ ಸುಪ್ತವಾಗಿರುವ ಹಾಗೂ ಕೆಲವೊಮ್ಮೆ ಸ್ಫೋಟಗೊಳ್ಳುವ ಈ ಅಣುವು ಕೆಲ ಹಿಂದೂಗಳಲ್ಲಿ ನಿಷ್ಕ್ರಿಯವಾಗಿರುತ್ತದೆ ಹಾಗೂ ಕೆಲವರಲ್ಲಿ ಜಾಗೃತವಾಗಿರುತ್ತದೆ. ಮಹಾತ್ಮಾ ಗಾಂಧಿಯ ಹತ್ಯೆಯನ್ನು ಹಿಂದೂಧರ್ಮದಲ್ಲಿನ ಉದಾರವಾದಿಗಳು ಹಾಗೂ ಮತಾಂಧರ ನಡುವಣ ಕದನದ ಪ್ರಕರಣವೆಂದು ಚರಿತ್ರೆಯು ವಿಚಾರಣೆ ನಡೆಸಿದ್ದೇ ಆದರೆ, ಹಾಗೂ ಈ ಪ್ರಕರಣದಲ್ಲಿ ಜಾತಿವಿರೋಧಿಯಾದ, ಸ್ತ್ರೀ ಪರವಾದ, ಆಸ್ತಿ ವಿರೋಧಿಯಾದ ಹಾಗೂ ಸಹಿಷ್ಣುತೆಯ ಪರವಾದ ಗಾಂಧೀಜಿಯವರ ಪ್ರಯತ್ನಗಳು ಯಾರನ್ನು ಕೆರಳಿಸಿದವೋ ಅವರೆಲ್ಲರನ್ನೂ ತಪ್ಪಿತಸ್ಥರೆಂದು ತೀರ್ಪು ನೀಡಿದ್ದೇ ಆದರೆ, ಹಿಂದೂ ಧರ್ಮದ ನಿಷ್ಕ್ರಿಯತೆ ಹಾಗೂ ಔದಾಸೀನ್ಯವನ್ನು ಜಾಲಾಡಿಸಿದಂತಾಗಬಹುದು.

(ಕನ್ನಡಕ್ಕೆ: **ಹಸನ್ ನಯೀಂ ಸುರಕೋಡ**)

ಮಹಿಳಾ ವಿಶೇಷ ಪುಟಗಳು

ಮಾರ್ಚ್ ೮: ಅಂತಾರಾಷ್ಟ್ರೀಯ ಮಹಿಳಾ ದಿನ

# ಮಹಿಳೆಯ ಸಬಲೀಕರಣ ಮತ್ತು ಹೆಚ್ಚುತ್ತಿರುವ ಅತ್ಯಾಚಾರಗಳೂ : ಕೆಲ ಪ್ರಶ್ನೆಗಳು



ಈ ವರ್ಷದ ಮಾರ್ಚ್ ೮ ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಬಹುತಲೆಮಾರುಗಳ ಸಮಾನತೆಯ ವಿಷಯವನ್ನು ತನ್ನ ಪ್ರಚಾರಾಂದೋಲನದ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡಿದೆ. ೨೫ ವರ್ಷಗಳ ಹಿಂದೆ ಬೀಜಿಂಗ್ ಮಹಿಳಾ ಸಮಾವೇಶದಲ್ಲಿ ನಿರ್ಧರಿಸಿದ ಕ್ರಿಯಾ ಯೋಜನೆಯ ಮುಂದುವರಿಕೆಯಾಗಿ ವಿವಿಧ ತಲೆಮಾರುಗಳ ಮಹಿಳೆಯರ ನಡುವೆ ತಮ್ಮ ಹಕ್ಕು ಮತ್ತು ಅವಕಾಶಗಳ ಸಂಬಂಧವಾಗಿ ಪರಸ್ಪರ ತಿಳುವಳಿಕೆ ಮತ್ತು ಜಾಗೃತಿಗಳನ್ನು ಮೂಡಿಸುವುದು ಇದರ ಉದ್ದೇಶವಾಗಿದೆ.

ಆದರೆ ಇಂತಹ ಎಷ್ಟೇ ಮಹಿಳಾ ದಿನಾಚರಣೆಗಳು ನಡೆದುಹೋದರೂ, ಜಗತ್ತಿನಲ್ಲಿ, ವಿಶೇಷವಾಗಿ ನಮ್ಮಲ್ಲಿ ಸರಿಸುಮಾರು ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರನ್ನು ಕುರಿತ ತಾರತಮ್ಯ ಕಡಿಮೆಯಾದದ್ದಂತೂ ಕಾಣುತ್ತಿಲ್ಲ. ಅವಳು ತನ್ನ ಹಕ್ಕುಗಳಿಗಾಗಿ ಹೋರಾಡುತ್ತಿದ್ದಂತೆ ಮತ್ತು ಗಂಡಿನೊಡನೆ ಸಮಾನತೆಯನ್ನು ಪ್ರತಿಪಾದಿಸುತ್ತಿದ್ದಂತೆ ಅವಳ ಮೇಲೆ ದೈಹಿಕ ಹಲ್ಲೆಗಳ ಸಂಖ್ಯೆ ಮತ್ತು ಅವುಗಳ ಕ್ರೌರ್ಯ ಹೆಚ್ಚುತ್ತಿದೆ. ಅಂದರೆ ಮಹಿಳಾ ಸಬಲೀಕರಣದ ಪ್ರಸ್ತುತ ಮಾರ್ಗವನ್ನು ಗಂಡು ಸಮಾಜ ಅಸಹನೆಯಿಂದಲೇ ನೋಡುತ್ತಿದೆ. ಏಕೆ ಹೀಗೆ? ಮಹಿಳಾ ಹೋರಾಟಗಾರರು ಗಂಭೀರವಾಗಿ ಯೋಚಿಸಬೇಕಾದ ಸಂಗತಿ ಇದು.

ಈ ಗಾಯಕ್ಕೆ ಉಪ್ಪು ಸವರಿದಂತೆ ಮಹಿಳೆಯರ ಮೇಲಿನ ಹಲ್ಲೆ–ವಿಶೇಷವಾಗಿ ಲೈಂಗಿಕ ಅತ್ಯಾಚಾರಗಳ ಪೋಲೀಸ್ ತನಿಖೆ ಮತ್ತು ನ್ಯಾಯಾಲಯಗಳಲ್ಲಿನ ವಿಚಾರಣೆಗಳ ಪ್ರಕ್ರಿಯೆ ಅತಿ ವಿಳಂಬವಾಗುತ್ತಾ ಅಪರಾಧಿಗಳಿಗೆ ಶಿಕ್ಷೆಗಾಗಿ ಸಮಾಜ, ನಿರ್ದಿಷ್ಟವಾಗಿ ಮಹಿಳೆಯರು ಚಾತಕ ಪಕ್ಷಿಯಂತೆ ಕಾಯಬೇಕಾಗಿದೆ. ನಿರ್ದಿಷ್ಟ ಉದಾಹರಣೆ ಎಂದರೆ ಏಳು ವರ್ಷಗಳ ಹಿಂದಿನ ಎದೆ ನಡುಗಿಸುವ ನಿರ್ಭಯಾ ಪ್ರಕರಣದ ಅಪರಾಧಿಗಳಿಗೆ ಶಿಕ್ಷೆ ಪ್ರಕ್ರಿಯೆ ಈಗ ಅಂತಿಮ ಹಂತ ಜಾರಿಯಲ್ಲಿದೆ. ಹೀಗಾಗಿ ಜನ ಇಂತಹ ಪ್ರಕರಣಗಳ ಆರೋಪಿಗಳನ್ನು ವಿಚಾರಣೆಗೆ ಮುನ್ನವೇ ಪೋಲೀಸರು ಎನ್‌ಕೌಂಟರುಗಳಲ್ಲಿ ಕೊಲ್ಲುವ ಪ್ರವೃತ್ತಿಗೆ ಜನರ ಸಂಭ್ರಮದ ಮಾನ್ಯತೆ ದೊರೆಯುವಂತಹ ಆತಂಕಕಾರಿ ಅರಣ್ಯ ನ್ಯಾಯದ ದಿನಗಳು ನಮಗೆ ಎದುರಾಗುತ್ತಿವೆ.

ಈ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳ ಮತ್ತು ವಿವಿಧ ವಯೋಮಾನಗಳ ಕೆಲ ಮಹಿಳೆಯರಿಗೆ ಪತ್ರಿಕೆ ಮೂರು ಪ್ರಶ್ನೆಗಳನ್ನು ಕಳಿಸಿ ಅವರ ಉತ್ತರಗಳನ್ನು ನಿಮ್ಮ ಮುಂದಿಡುತ್ತಿದೆ. ಕೆಲವರು ಪ್ರಶ್ನೆವಾರು ಉತ್ತರ ನೀಡಿದ್ದರೆ ಇನ್ನು ಕೆಲವರು ಮೂರೂ ಪ್ರಶ್ನೆಗಳ ಹಿನ್ನೆಲೆಯಲ್ಲಿ ತಮ್ಮ ಅನಿಸಿಕೆಗಳನ್ನು ತಿಳಿಸಿದ್ದಾರೆ. ಈ ವರ್ಷದ ಮಹಿಳಾ ದಿನದ ಸಂದರ್ಭದಲ್ಲಿ ಓದುಗರ ಆಲೋಚನೆಗೆ ನಮ್ಮ ಆಹಾರವಿದು.

**'ಹೊಸ ಮನುಷ್ಯ' ಕೇಳಿದ ಮೂರು ಪ್ರಶ್ನೆಗಳೆಂದರೆ: ೧. ನಿಮ್ಮ ಪ್ರಕಾರ ಅತ್ಯಾಚಾರ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ನಿಜವಾಗಿಯೂ ಹೆಚ್ಚುತ್ತಿವೆಯೋ ಅಥವಾ ಹೆಚ್ಚು 'ಸುದ್ದಿ' ಮಾಡುತ್ತಿವೆ ಅನ್ನಿಸುವುದೋ? ೨. ಹೆಚ್ಚಿ, ಹೆಚ್ಚು ಬರ್ಬರವಾಗುತ್ತಿವೆ ಎಂದಾದರೆ ಅದಕ್ಕೆ ಕಾರಣಗಳೇನಿರಬಹುದು? ಮುಕ್ತ ಮಾರುಕಟ್ಟೆ ಆರ್ಥಿಕತೆ ಒಟ್ಟು ಸಮಾಜದಲ್ಲಿ ತಂದ ಹೆಚ್ಚಿನ 'ಮುಕ್ತತೆ', ಆರ್ಥಿಕ ಅನುಕೂಲತೆ ಮತ್ತು ಅದಕ್ಕಾಗಿ ಹೆಚ್ಚಿದ ಸ್ಪರ್ಧೆ–ಈರ್ಷ್ಯೆಗಳು ಕಾರಣವಾಗಿರಬಹುದೆ? ೩. ಇವನ್ನು ಕಾನೂನುಗಳ ಮೂಲಕವೇ ನಿಯಂತ್ರಿಸಲು ಸಾಧ್ಯವೆ? ಹಾಗಿಲ್ಲದಿದ್ದರೆ ನಿಮ್ಮ ಸಲಹೆಗಳೇನು?–ಸಂ.**

## ಮುಕ್ತ ಮಾರುಕಟ್ಟೆಯ ದೆಸೆಯಿಂದಾಗಿ...



ಇತ್ತೀಚಿನ ದಿನಗಳಲ್ಲಿ ದೇಶದಾದ್ಯಂತ ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿರುವುದೂ ನಿಜ ಮತ್ತು ಅವನ್ನು ರೋಚಕ ಸುದ್ದಿಗಳನ್ನಾಗಿಸುತ್ತಿರುವುದೂ ನಿಜ.

ಅತ್ಯಾಚಾರಗಳು ಅತ್ಯಂತ ಬರ್ಬರತೆಯಿಂದ ಮತ್ತು ಕ್ರೂರತೆಯಿಂದ ಕೂಡಿರುತ್ತದೆ ಇದು ಅತ್ಯಂತ ದುಃಖ ಮತ್ತು ವಿಷಾದದ ಸಂಗತಿ. ಈ ರೀತಿ ನಮ್ಮ ಸಮಾಜ ವರ್ತಿಸಲು ಮುಖ್ಯವಾಗಿ ಮುಕ್ತ ಮಾರುಕಟ್ಟೆಯ ದೆಸೆಯಿಂದ ಎಲ್ಲ ವರ್ಗದ ಜನರಲ್ಲಿ ಐಷಾರಾಮಿ ಜೀವನದ ಹಂಬಲ ಮಿತಿ ಮೀರಿದೆ. ಐಷಾರಾಮಿ ಜೀವನಕ್ಕಾಗಿ ಸಾಮಾಜಿಕ ಜೀವನದ ಮೌಲ್ಯಗಳ ಬಗ್ಗೆ ಅವಜ್ಞೆ, ಎಲೆಕ್ಟ್ರಾನಿಕ್ ಮೀಡಿಯಾ, ಜಾಲತಾಣಗಳ ಸೌಲಭ್ಯಗಳು, ಯುವಕ ಯುವತಿಯರ ಬೇಜವಾಬ್ದಾರಿ ನಡವಳಿಕೆ ಇಂದು ಬರ್ಬರತೆ, ಕ್ರೌರ್ಯಗಳನ್ನು ಮಿತಿ ಮೀರಿಸಿದೆ.

ಮಾನವನ ಮೂಲ ಸ್ವಭಾವ ಕ್ರೌರ್ಯವಾಗಿರುವುದೇ ಈಗ ಕಂಡುಬರುವ ಬರ್ಬರತೆಗೆ ಬಹುಮುಖ್ಯ ಕಾರಣ. ಈ ರೀತಿಯ ಬರ್ಬರತೆಯನ್ನು ಶಮನ ಮಾಡಲು ಮನೆಯಲ್ಲಿ ತಂದೆ ತಾಯಿಗಳು, ಶಾಲೆಯಲ್ಲಿ ಉಪಾಧ್ಯಾಯರುಗಳು ಶಿಸ್ತು ಸಂಯಮದ ಜೀವನವನ್ನು ಪ್ರಾರಂಭದಿಂದಲೇ ಕಲಿಸಬೇಕು ಮತ್ತು ತಾವೇ ಮಾದರಿಯಾಗಬೇಕು. ಇಂದಿನ ಯುವಜನಾಂಗವನ್ನು ನಿಯಂತ್ರಿಸಲು ಕಾನೂನು ಬೇಕು. ಜೊತೆಗೆ ಮನೆಯಲ್ಲಿ ಸ್ನೇಹಪೂರ್ಣ ವಾತಾವರಣ ಗುರುಹಿರಿಯರ ಮಾರ್ಗದರ್ಶನ ಖಂಡಿತ ಬೇಕಾಗಿದೆ

**–ಪದ್ಮಾ ಶ್ರೀರಾಮ್**, ಲೇಖಕಿ, ಚಿಂತಕಿ, ಮೈಸೂರು

## ಮನಸ್ಸುಗಳು ಉಸಿರಾಡುವುದನ್ನೆ ನಿಲ್ಲಿಸಿವೆ.

ಇದು ಯಾವುದೂ ಹೊಸತಲ್ಲ. ಲಾಗಾಯ್ತಿನಿಂದಲೂ ಇದೆಲ್ಲ ಇರುವುದೇ. ಹೆಣ್ಣನ್ನು ಚಿತೆಗೇರಿಸಿದ, ಜೀವಂತ ಸುಟ್ಟ, ಕತ್ತರಿಸಿದ, ಮೂಗುಕೊಯ್ದು ವಿಕಾರಗೊಳಿಸಿದ, ಹುಟ್ಟುವ ಹಕ್ಕನ್ನೇ ಕಸಿದ, ಜೀವವಿದ್ದಂತೆಯೆ ಹುಗಿದು ಸುತ್ತ ಕಲ್ಲುಕಟ್ಟಿದ, ದೈವತ್ವದ ಮೂಢಕಲ್ಪನೆಯಲ್ಲಿ ಸಹಗಮನವನ್ನು ವೈಭವೀಕರಿಸಿದ, ಒಟ್ಟಾರೆ ಹೆಣ್ಣು ಎಂಬುದು ಭೋಗಕ್ಕೂ ಲಾಭಕ್ಕೂ ಅಂತ್ಯವಿಲ್ಲದ ಜೀತಕ್ಕೂ ಅಧಿಕಾರದ ಮತ್ತಿಗೂ ಬಳಕೆಯಾದ ವಸ್ತುವೇ ಆಗಿದ್ದಳಲ್ಲವೆ? ಅವತ್ತಿನಿಂದ ಇವತ್ತಿನವರೆಗೂ



ಪುರಾಣ ಇತಿಹಾಸ ವರ್ತಮಾನ ಕಾಲದವರೆಗೂ! ಕಾಲ ಬದಲಾಗಿಯೇ ಇಲ್ಲ.

ಆದರೆ ಇವತ್ತು ದೌರ್ಜನ್ಯಗಳು ಹೊರಬೀಳುತ್ತಿವೆ. ಕಾಲಂಶವಾದರೂ ಬಹಿರಂಗಕ್ಕೆ ಬರುತ್ತಿವೆ. ರಾಜಪ್ರಭುತ್ವಕ್ಕಿಂತ ಪ್ರಜಾಪ್ರಭುತ್ವವು ದೌರ್ಜನ್ಯದ ಕುರಿತ ಪ್ರಶ್ನೆಗಳನ್ನು ಎತ್ತಲು ಅವಳಿಗೆ ಉಸಿರು ನೀಡಿದೆ. ಉತ್ತರ ಸಿಗುವುದೋ, ನ್ಯಾಯದಾನವಾಗುವುದೋ. ಕೊನೇಪಕ್ಷ ದೂರನ್ನಾದರೂ ಕೊಡುವ, ನಿಧಾನವಾಗಿ ಬಾಯಿತೆರೆಯುವ ಬೊಬ್ಬಿಡುವ ಧೈರ್ಯವನ್ನು ಕೆಲವರಾದರೂ ತಾಳುತಿದ್ದಾರೆ. ಕೇಳುವವರು ಜಾಣ ಕೆಪ್ಪರೇ ಇರಲಿ. ಧ್ವನಿ ಎತ್ತಲು ಎಲ್ಲಾದರೊಂದು ಜಾಗವಿದೆ.

ಸಲಹೆ ಅಂತ ಏನು ಹೇಳುವುದು? ಅತ್ಯಾಚಾರಕ್ಕೆ ಒಳಗಾದ ಹೆಣ್ಣಿಗೆ ನ್ಯಾಯಾಲಯದಲ್ಲಿ ಕೇಳುವ ಪ್ರಶ್ನೆಗಳನ್ನೊಮ್ಮೆ ನೆನೆಯಿರಿ. ಮಿಶನ್ನಿನಂತೆ ಜಡವಾಗಿ ಕೆಲಸಮಾಡುವ ಮನಸ್ಸುಗಳ ಉದಾಹರಣೆಗಳು ಇವೆಲ್ಲ. ಮನಸ್ಸುಗಳು ಉಸಿರಾಡುವುದನ್ನೆ ನಿಲ್ಲಿಸಿವೆ. ನ್ಯಾಯದಾನ ಮಾಡುವ ಸ್ಥಾನದಲ್ಲಿ ಕುಳಿತವರಿಗೆ ಕಾನೂನು ಇರುವುದು ಒಂದು ಮಾರ್ಗಸೂಚಿಯಾಗಿ ಮಾತ್ರ. ತಮ್ಮ ವಿವೇಚನೆಯನ್ನು ಬಳಸಲು ಒಂದು ಆಧಾರ ಮಾತ್ರ ಎಂಬುದರ ಅರಿವಿರಬೇಕು. ಯಾವುದೇ ಅತ್ಯಾಚಾರ ಪ್ರಕರಣದಲ್ಲಿ ಅದು ಯಾರದೋ ಅಲ್ಲ, ತಮ್ಮದೇ ಮನೆಮಗಳ (ಅಥವಾ ತಮ್ಮ ಪತ್ನಿಯ) ಮೇಲಾದ ದೌರ್ಜನ್ಯ ಎಂಬಂತೆ ಕಲ್ಪಿಸಿಕೊಂಡು ವಾದ ಪ್ರತಿವಾದ ಮತ್ತು ನ್ಯಾಯದಾನಕ್ಕೆ ಮುಂದಾಗಬೇಕು. ಅಂತಹ ಕಲ್ಪನೆಯೊಂದೇ ನಿಜವಾದ ದುರಂತವನ್ನು ಬುಡಮಟ್ಟ ಮನವರಿಕೆ ಮಾಡಿಸಬಲ್ಲುದು. ಕೆಲ ಸುಸ್ಪಷ್ಟ ಪ್ರಕರಣಗಳನ್ನು ವರ್ಷಗಟ್ಟಲೆ ಎಳೆಯಲು ಆಸ್ಪದವೇ ಇಲ್ಲದಂತಹ ಕಾನೂನುಗಳನ್ನು ಮಾಡಬೇಕು.

ಶಾಲೆಗಳಲ್ಲಿ ಮಾರ್ಶಲ್ ಆರ್ಟ್ಸ್ ಕಡ್ಡಾಯ ಮಾಡಬೇಕು. ಹೆಣ್ಣುಮಕ್ಕಳಿಗೆ ವಿಪತ್ತಿನ ಕಾಲದಲ್ಲಿ ನೆರವಾಗುವ ಆ್ಯಪ್‌ಗಳು ಸುಲಭದಲ್ಲಿ ಲಭ್ಯವಿರಬೇಕು. ಮನೆಮನೆಗಳಲ್ಲಿ ಗಂಡು ಹೆಣ್ಣು ಮಕ್ಕಳಿಗೆ ಭೇದವಿಲ್ಲದೆ ಎಚ್ಚರದ ಮಾತುಗಳನ್ನು 'ಕಾಣುವ ಕ್ರಮವನ್ನು' ಉಪದೇಶವೆನಿಸದೆ ಹಾಗೆ ಒಳಗಿಳಿಸಬೇಕು. ಗಂಡಾದ ಕಾರಣಕ್ಕೆ ತಮಗೆ ಕೆಲ ವಿಶೇಷಾಧಿಕಾರಗಳಿವೆ ಎಂಬ ಭ್ರಮೆಯಲ್ಲಿರುವ ಗಂಡನ್ನು ಆ ಭ್ರಮೆಯಿಂದ ಹೊರತಂದು ಮಿಥ್ಯಾದರ್ಶನ ಮಾಡಿಸಬೇಕು. ಶಾಲೆಗಳಲ್ಲಿ ನೀಡುವ ಉದ್ಯೋಗೋದ್ದೇಶ

ಶಿಕ್ಷಣಕ್ಕೆ ಈ ಕುರಿತು ತಿಳಿವು ಅರಳಿಸುವ ವಿಶೇಷ ಪಠ್ಯಗಳು ಸೇರ್ಪಡೆಯಾಗಲೇಬೇಕು.

ಮುಖ್ಯವಾಗಿ ಪುರುಷಲೋಕಕ್ಕೆ ಸ್ತ್ರೀಲೋಕವನ್ನು ಗ್ರಹಿಸುವ 'ದೃಷ್ಟಿ' ನೀಡಬಲ್ಲ ಗಾಂಭೀರ್ಯದಲ್ಲಿ ಧಾರಾವಾಹಿ, ಸಿನೆಮಾ, ಕಲೆ, ಸಾಹಿತ್ಯಗಳು ತೆರೆದುಕೊಳ್ಳಬೇಕು. ದೃಶ್ಯ ಮಾಧ್ಯಮಗಳು, ಸಂವಹನ ಮಾಧ್ಯಮಗಳು ಬೆಂಕಿಗೆ ಆಜ್ಯ ಸುರಿಯುವುದನ್ನು ತಕ್ಷಣ ನಿಲ್ಲಿಸಬೇಕು.

ಕಡೆಯಲ್ಲಿ – ಹೆಣ್ಣು ತನ್ನ ದೇಹದ ಕುರಿತು ಸೃಷ್ಟಿಯಾದ, ತಾನೆ ನಂಬಿಕೊಂಡು ಬಂದ ವಿವಿಧ ಅಪಕಲ್ಪನೆಗಳಿಂದ ಹೊರಬಂದು ತನ್ನ ಒಳಜೀವದ ಅರಿವಲ್ಲಿ ಬೆಳೆಯಬೇಕು.

**–ವೈದೇಹಿ,** ಕನ್ನಡದ ಹಿರಿಯ ಲೇಖಕಿ, ಮಣಿಪಾಲ

## ಬಂಡವಾಳವಾದಕ್ಕೆ ಮನುಷ್ಯ ದೇಹವೇ ಮಾರುಕಟ್ಟೆಯಾಗಿರುವಾಗ....



೧. 'ಭಾರತ ಮಹಿಳೆಯರಿಗೆ ಸುರಕ್ಷಿತವಲ್ಲ' ಎನ್ನುವಷ್ಟು ಪರಿಸ್ಥಿತಿ ಬಿಗಡಾಯಿಸಿದೆ. ಮಹಿಳಾ ದೌರ್ಜನ್ಯದ ಸೂಚ್ಯಂಕ ಏರುತ್ತಲೇ ಇದೆ. ಆದರಿದು ನಾಗರಿಕ ಸಮಾಜದ ರೋಗ ಮಾತ್ರವೇ ಅಲ್ಲ, ಎಂದಿನಿಂದಲೂ ಕುಟುಂಬ ಕಕ್ಷೆಯ ಒಳಹೊರಗುಗಳಲ್ಲಿ ಇಂತಹ ದಾಳಿಗೀಡಾಗುವ ಹೆಂಗಸರು ಆತ್ಮಹತ್ಯೆಯೇ ಪರಿಹಾರ ಎಂದುಕೊಂಡಿದ್ದರು. ಆದರೀಗ ಬದಲಾಗುತ್ತಿರುವ ಸಾಮಾಜಿಕ ದೃಷ್ಟಿಕೋನವು, ಈ ಅನ್ಯಾಯವನ್ನು ಬಹಿರಂಗಗೊಳಿಸುವಷ್ಟು, ನ್ಯಾಯಕ್ಕಾಗಿ ಹಕ್ಕೊತ್ತಾಯ ಮಂಡಿಸುವಷ್ಟು ಸಮರ್ಥವಾಗಿದೆ. ಅತ್ಯಾಚಾರದಂತಹ ದೌರ್ಜನ್ಯವು ಗುಟ್ಟಾಗಿಯೇ ಉಳಿದು ಗಂಡುಗರ್ವವನ್ನು ಸಂರಕ್ಷಿಸುತ್ತಿದ್ದ ಕಾಲವನ್ನು ದಾಟಿ, ಕನಿಷ್ಠ ಇದೊಂದು ಅಪರಾಧ ಎನ್ನುವಷ್ಟಾದರೂ ಅರಿವು ಮೂಡುತ್ತಿರುವುದು ಒಳ್ಳೆಯದೇ.

೨. ಅತ್ಯಾಚಾರದಂತಹ ಅಪರಾಧದಲ್ಲಿ, ಆ ಅಪರಾಧವು ಹೆಣ್ಣು ಜೀವದ ದೈಹಿಕ, ಮಾನಸಿಕ, ಕೌಟುಂಬಿಕ, ಸಾಮಾಜಿಕ ಅಸ್ತಿತ್ವವನ್ನು ಛಿದ್ರಗೊಳಿಸುವ ದೂರಗಾಮಿ ಪರಿಣಾಮಗಳನ್ನು ಗಮನಿಸಿದರೆ 'ಬರ್ಬರತೆ' ಎಂಬುದರ ಅಳತೆಪಟ್ಟಿ ಯಾವುದು? ತಂದೆಯಿಂದ ಗರ್ಭಿಣಿಯಾಗುವ ಮಗಳು, ಅಪರಿಚಿತ ಕಾಮುಕರಿಂದ ತೀವ್ರ ದೈಹಿಕ ಹಲ್ಲೆಗೊಳಗಾಗುವ ಹೆಣ್ಣು – ಈ ಎರಡರಲ್ಲಿ ಯಾವುದು ಹೆಚ್ಚು ಬರ್ಬರ ಎಂದು ಹೇಳಲಾಯಿತು? ಹೋಲಿಸಲಾದೀತು?

೩. ಬದಲಾಗುತ್ತಿರುವ ಅತಿನಾಗರಿಕವಾಗುತ್ತಿರುವ ಸಮಾಜ; ಜಾಗತೀಕರಣದ ಆರ್ಥಿಕ ವಹಿವಾಟಿನ ಕಾರಣದಿಂದ ಪಾರಂಪರಿಕ ಬದುಕಿನ ವಿಧಾನವನ್ನು ಕಳಚಿಕೊಂಡಿದೆ. ಗಂಡು–ಹೆಣ್ಣುಗಳ ಸಹಜ ಒಡನಾಟ ಅನಿವಾರ್ಯವಾಗಿದೆ. ಇದು ಪರಸ್ಪರ ಗೌರವಾದರಗಳು ಹೆಚ್ಚಲು ಕಾರಣವಾಗಬೇಕಿತ್ತು. ಆದರೆ, ಪುರುಷಶ್ರೇಷ್ಠತೆಯ ಹಳೆಯ ಬೀಜಗಳು ಹೊಸ ನಾಗರಿಕ ವಿನ್ಯಾಸದಲ್ಲಿ ಸೇರಿ ಹೊಸಕಸುವನ್ನು ಪಡೆದು ಬಂಡವಾಳವಾದಕ್ಕೆ ಮನುಷ್ಯ ದೇಹವೇ ಒಂದು ಮಾರುಕಟ್ಟೆ. ಅದನ್ನು ವೈಭವೀಕರಿಸುವ ಕಲಿಕೆಯೇ ಆಧುನಿಕ ಪ್ರಜ್ಞೆಯನ್ನು ಹೆಚ್ಚೆಚ್ಚು ದೇಹಬದ್ಧಗೊಳಿಸಿತು. ಹೆಣ್ಣನ್ನು ಪ್ರತಿಸ್ಪರ್ಧಿಯಾಗಿ ನೋಡುವ ತಪ್ಪು ಕೂಡ ಲೈಂಗಿಕ ಅತ್ಯಾಚಾರದ ಕಾರಣವಾಗಿರುತ್ತದೆ.

ಭಯವೊಡ್ಡಿ ಮನುಷ್ಯನ ಮನಸ್ಸನ್ನು ತಿದ್ದಬಹುದೆಂದಾದರೆ, ಕಾನೂನು ಪ್ರಯೋಜನಕಾರಿ ಎಂದುಕೊಳ್ಳಬಹುದು. ಆದರೆ, ಹಾಗಾಗುವುದಿಲ್ಲ. ಆಗಿಲ್ಲ. ಕಾನೂನು ಭಯವೊಡ್ಡುವ ಅಸ್ತ್ರ ಆದೀತು ಅಷ್ಟೇ. ಸಾಮಾಜಿಕ ರೋಗದ ವೈರಾಣುಗಳನ್ನು ನಿರ್ಮೂಲನ ಮಾಡುವ ಶಕ್ತಿ ಕಾನೂನಿಗಿಲ್ಲ. ಅತ್ಯಾಚಾರವು ಸಾಮಾಜಿಕ ಅಸಮಾನತೆಯ ಫಲಿತವಾಗಿದೆ. ಹೆಣ್ಣನ್ನು ಆಳುವ ಪುರುಷಾಹಂಕಾರದ ಮುಂದುವರಿಕೆಯಾಗಿದೆ! ಈ ಎರಡೂ ನಿರ್ಮೂಲನವಾಗದೆ ಹೆಣ್ಣು ಹಿಂಸಾಮುಕ್ತಳಾಗಲು ಸಾಧ್ಯವಿಲ್ಲ. ಬಾಲ್ಯದಿಂದಲೇ, ಸಮಾನತೆಯ ಸರಿಯಾದ ಮನವರಿಕೆ ಆಗಬೇಕು. ಪಠ್ಯ ಮತ್ತು ಪಠ್ಯಾನ್ವಯ, ಶಾಲೆಯ ಅಂಗಳ ಲಿಂಗಸೂಕ್ಷ್ಮಗೊಳ್ಳಬೇಕು. ಮನೆ ಸಹಯಾನದ ಮಗ್ಗುಲನ್ನು ತಿಳಿಸಬೇಕು. ಜಾಹೀರಾತು, ಬಂಡವಾಳೋದ್ಯಮಗಳು, ಮನರಂಜನಾ ಮಾಧ್ಯಮಗಳು–'ಇನ್ನಾದರೂ' ತಮ್ಮನ್ನು ಸಂಭಾಳಿಸಿಕೊಳ್ಳಬೇಕು. 'ಹೆಣ್ಣೆಂದರೆ ದೇಹ ಮಾತ್ರವೇ ಅಲ್ಲ' ಎನ್ನುವುದನ್ನು ಹೆಣ್ಣುಮಕ್ಕಳೂ; ನಿಜವಾದ ಗೆಲುವಿರುವುದು ಸಹಗೌರವದಿಂದ ಬೆರೆತು ಬಾಳುವುದರಲ್ಲಿ ಎಂಬ ರುಚಿಯನ್ನು ಗಂಡುಮಕ್ಕಳೂ ಪಡೆಯುವಂತಾಗಬೇಕು. ನಮ್ಮ ಪರಂಪರೆಯ ಬೇರಿಗೆ ಗೆದ್ದಲು ಹಿಡಿದಿದೆ. ಕತ್ತರಿಸಿ ಮರಳಿ ಊರದೇ ಗತ್ಯಂತರವಿಲ್ಲ.

**–ವಿನಯಾ,** ಲೇಖಕಿ ಮತ್ತು ಪ್ರಾಧ್ಯಾಪಕಿ ಧಾರವಾಡ

## ಬೆಕ್ಕಿಗೆ ಗಂಟೆ ಕಟ್ಟುವವರಾರು?

೧. ಹೌದು. ಇತ್ತೀಚಿನ ವರ್ಷಗಳಲ್ಲಿ ಮಹಿಳೆ ಮತ್ತು ಮಕ್ಕಳ ಮೇಲಾಗುತ್ತಿರುವ ಲೈಂಗಿಕ ಅತ್ಯಾಚಾರಗಳ ಸುದ್ದಿಗಳನ್ನು ಗಮನಿಸಿದರೆ ನಾವು ಎತ್ತ ಸಾಗುತ್ತಿದ್ದೇವೆಂದು ಗಾಬರಿಯಾಗುತ್ತದೆ. ಹೆಚ್ಚಿನವು ಸುದ್ದಿಯಾಗದೆಯೇ ಉಳಿದುಬಿಡುವ ಸಾಧ್ಯತೆಯೂ



ಇದೆ. ವಿಪರ್ಯಾಸವೆಂದರೆ ಅತ್ಯಾಚಾರದಂಥ ಸುದ್ದಿಗಳನ್ನು ಹಸಿಹಸಿಯಾಗಿ ನಮ್ಮ ಮಾಧ್ಯಮಗಳು ಬಾಯ್ತಾಂಬೂಲ ಮೆಲ್ಲುವಂತೆ ಬಿತ್ತರಿಸುವುದರ ಮೂಲಕ ಮತ್ತೆ ಮತ್ತೆ ಅತ್ಯಾಚಾರ ಗೈಯುವ ಪರಿಗೆ ಸಂಕಟವೆನಿಸುತ್ತದೆ. ನಮ್ಮ 'ಹೊರಗಿನ' ಸಾಧನಗಳೇ ನಮಗೆ, ಮುಳುವಾಯ್ತೆ?!

೨. ಮೇಲ್ನೋಟಕ್ಕೆ ಮುಕ್ತ ಮಾರುಕಟ್ಟೆ, ಆರ್ಥಿಕ ಮುಕ್ತತೆ, ಸ್ಪರ್ಧೆ– ಈರ್ಷೆಗಳೂ ಅತ್ಯಾಚಾರಕ್ಕೆ ಕಾರಣ ಎನಿಸುವುದು ಸಹಜ. ಕೆಲ ಮಟ್ಟಿಗೆ ಇದ್ದರೂ ಇರಬಹುದು. ಆದರೆ, ಇದಷ್ಟೇ ಕಾರಣವಲ್ಲವೆನಿಸುತ್ತದೆ. ಯಾಕೆಂದರೆ, ಯಾವುದೇ ಸಮಾಜ ಅಭಿವೃದ್ಧಿ ಕಂಡಂತೆ ಶಿಕ್ಷಣದ ಗುಣಮಟ್ಟವೂ ಸುಧಾರಿಸುತ್ತಿರುತ್ತದೆ. ಸುಧಾರಿಸಬೇಕು. ನಮ್ಮ ಭಾರತದಂಥ ರಾಷ್ಟ್ರದ ಸಮಸ್ಯೆ ಎಂದರೆ, ೭೫ ವರ್ಷಗಳಾದರೂ ಎಲ್ಲರಿಗೂ ಅವರವರ ಬದುಕುಗಳನ್ನು ರೂಪಿಸಿಕೊಳ್ಳುವ ಮತ್ತು ಮೌಲ್ಯಾಧಾರಿತ ಶಿಕ್ಷಣವನ್ನು ಇನ್ನೂ ಕೊಡಲಾಗುತ್ತಲೇ ಇಲವಲ್ಲ ಎನ್ನುವುದು!

ವ್ಯಕ್ತಿಯಿಂದ ಮೊದಲುಗೊಂಡು ಕುಟುಂಬ ಸಮಾಜ ದೇಶ ಹೀಗೆ ಪ್ರತಿ ಸಂಬಂಧಗಳ ಮೌಲ್ಯವನ್ನು ಕುರಿತು ಶಿಕ್ಷಣದ ಮೂಲಕ ಮಕ್ಕಳಿಗೆ ತಲುಪಿಸುವ ಮಾರ್ಗವಿತ್ತು. ಆ ಮೂಲಕ ಮಕ್ಕಳನ್ನು ಜವಾಬ್ದಾರಿಯುತರನ್ನಾಗಿ ಬೆಳೆಸುವ ಎಲ್ಲಾ ಸಾಧ್ಯತೆಗಳೂ ಇದ್ದವು. ಅದಾವುದನ್ನೂ ನಾವು ಮಾಡಲೇ ಇಲ್ಲ. ಇನ್ನು ಹೆಚ್ಚು ಜನರನ್ನು ತಲುಪುವ ಟಿವಿ, ಸಿನೆಮಾ, ಇನ್ನಿತರ ಸಾಮಾಜಿಕ ಮಾಧ್ಯಮಗಳು ಮಚ್ಚು ಲಾಂಗು ಗನ್ನುಗಳನ್ನು ಹಿಡಿದು ಹಿಂಸೆ ಬಿತ್ತಲು ಸ್ಪರ್ಧೆಗೆ ಬಿದ್ದಂತಿವೆ. ನಮ್ಮ ಬೇಜವಾಬ್ದಾರಿತನದಿಂದ ಮಕ್ಕಳನ್ನು ಅದೆಷ್ಟು ಗೊಂದಲಕ್ಕೆ ತಳ್ಳುತ್ತಿದ್ದೇವೆ! ಬೆಕ್ಕಿಗೆ ಗಂಟೆ ಕಟ್ಟುವವರಾರು?

೩. ಕೆಲವೊಮ್ಮೆ ಕಾನೂನುಗಳು ಸಹಾಯಕ್ಕೆ ನಿಲ್ಲಬಹುದು ಅಷ್ಟೇ. ಕಾನೂನೇ ಎಲ್ಲವೂ ಅಲ್ಲ. ಕಾನೂನನ್ನೇ ಕೊಳ್ಳುವವರೇ ಹೆಚ್ಚಾಗುತ್ತಿದ್ದಾರಲ್ಲ..ಮಕ್ಕಳನ್ನು ದೂರುವ ಮೊದಲು ಅವರ ಮನಸ್ಥಿತಿಯನ್ನು ಕುರಿತು ಸಂಯಮದಿಂದ ಚಿಂತಿಸುವ ಅಗತ್ಯವಿದೆ. ಇದಕ್ಕೂ ಮೊದಲು ದೊಡ್ಡವರೆನಿಸಿಕೊಂಡ ನಾವು ನಮ್ಮ ನಡಾವಳಿಗಳನ್ನು ಸಕಾರಾತ್ಮಕವಾಗಿ ಯೋಚಿಸಿ, ಸರಿಪಡಿಸಿಕೊಳ್ಳುವತ್ತಲೂ ಗಮನ ಹರಿಸಬೇಕಾಗಿದೆ. ನಮ್ಮ ಸಮಾಜದಲ್ಲಿ ಇನ್ನೂ ಮೌಲ್ಯಗಳು ಜೀವಂತವಾಗಿವೆ. ಖಂಡಿತವಾಗಿಯೂ ಸರಿಪಡಿಸಿಕೊಳ್ಳುವ ಎಲ್ಲ ಸಾಧ್ಯತೆಗಳೂ ಇವೆ.

**–ಡಿ.ಸಿ. ಗೀತಾ,** ಕವಯತ್ರಿ ಮತ್ತು ಪ್ರಾಧ್ಯಾಪಕಿ, ದೊಡ್ಡಬಳ್ಳಾಪುರ

## ಗಂಡುಮಕ್ಕಳನ್ನು ಲಿಂಗಸೂಕ್ಷ್ಮತೆಯೊಂದಿಗೆ ಬೆಳೆಸಬೇಕು



ಮಹಿಳೆಯರ ಮೇಲೆ ನಡೆವ ಅತ್ಯಾಚಾರ ಯಾವತ್ತಿನಿಂದಲೂ ಇವೆ. ಕಥೆ–ಕಾವ್ಯಗಳು ಅಂದಂದಿನ ಸಾಮಾಜಿಕ ಬದುಕಿನ ಛಿದ್ರ ಪ್ರತಿಬಿಂಬಗಳೇ ಎಂದು ನಂಬಿಕೊಂಡದ್ದಕ್ಕೆ ಹೇಳುತ್ತಿದ್ದೇನೆ; ಕುರುಕ್ಷೇತ್ರ ಯುದ್ಧದ ರಣಭೂಮಿಯಲ್ಲಿ ತಂತಮ್ಮ ಸೈನಿಕ ಗಂಡಂದಿರ ಮುಖವನ್ನು ಕೊನೆಯ ಬಾರಿ ಕಾಣಲು ಅಲೆಯುತ್ತಿದ್ದ ಹೆಂಗಳೆಯರ ಮೇಲೆ ಉಳಿದ ಸೈನಿಕರಿಂದಲೇ ಅತ್ಯಾಚಾರಗಳು ನಡೆದ ಕಥನ ನಮಗೆ ದೊರೆಯುತ್ತವೆ. ಇಂದು ಸೋಷಿಯಲ್ ಮಿಡಿಯಾಗಳು ತೀವ್ರವಾಗಿ ಬಳಕೆಯಲ್ಲಿರುವುದರಿಂದ ಅವು ಹೆಚ್ಚು ಸುದ್ದಿಗೆ ಬರುತ್ತಿವೆ ಮತ್ತು ಮಹಿಳೆ ತನ್ನ ಮೇಲೆ ನಡೆವ ದೌರ್ಜನ್ಯವನ್ನು ಅಭಿವ್ಯಕ್ತಿಸುವ ಧೈರ್ಯ ತೋರುತ್ತಿದ್ದಾಳೇನೋ. ನಮ್ಮ ಅಜ್ಜಿಯ ಕಾಲಕ್ಕಿಂತ ಚೂರು ಹೆಚ್ಚಿನ ಧೈರ್ಯ ಅಷ್ಟೇ ಅದು.

ನಮ್ಮ ಅಜ್ಜಿಗೆ ಹನ್ನೊಂದು ವರ್ಷದವಳಿರುವಾಗ ಮದುವೆಯಾಗಿತ್ತಂತೆ. ಹಿರಿಯಜ್ಜಿಗೆ ಮಕ್ಕಳಾಗಲಿಲ್ಲ ಅಂತ ಅವಳೇ ನಮ ಕಿರಿಯಜ್ಜಿಯನ್ನು ಮದುವೆ ಮಾಡಿಸಿದ್ದು. ಹದಿಮೂರು ತುಂಬಿ ಮೈ ನೆರೆದ ನಂತರ ಅವಳು ಗಂಡನ ಮನೆಗೆ ಬಂದಾಗ ಅಜ್ಜನಿಗೆ ಅಂದಾಜು ನಲವತ್ತು ವರ್ಷ ವಯಸ್ಸು ಇರಬಹುದು. ಕೋಣೆಯಲ್ಲಿ ರಾತ್ರೆ ಏನು ನಡೆಯುತ್ತದೆ ಎಂದು ಯಾರು ಬಲ್ಲರು? ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ನಡೆಯುವ ಇದು ಕೂಡ ಘೋರ ಅತ್ಯಾಚಾರವೇ ಅಲ್ಲವೇ? ಆದರೆ ಅಗಿನ ಕಾಲದಲ್ಲಿ ಅದು ಒಪ್ಪಿತ ಸಂಬಂಧ, ಅದನ್ನು ಪ್ರತಿಭಟಿಸಬೇಕು ಎಂಬ ತಿಳಿವಳಿಕೆ ಇರಲಿಲ್ಲ. ಈಗ ಹಾಗೆ ನಡೆದರೆ ಕಾನೂನು ತಿಳಿದ ನೆರೆಹೊರೆಗಾದರೂ ಆತ ಹೆದರುತ್ತಾನೆ. ಅಂದರೆ ಇಂಥವನ್ನು ಮಾಡಿದರೂ ಕದ್ದು ಮುಚ್ಚಿ ಮಾಡುತ್ತಾನೆ. ರಾಜಾರೋಷವಾಗಿ ನಡೆಸುವುದಕ್ಕೂ ಕದ್ದುಮುಚ್ಚಿ ನಡೆಸುವುದಕ್ಕೂ ನಡೆವ ಪ್ರಮಾಣದಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆ ಇರಬಹುದು. ಆ ಕಾರಣಕ್ಕಾಗಿ ನೂರಕ್ಕೆ ನೂರರಷ್ಟಿರುವ ಅತ್ಯಾಚಾರ ಪ್ರಕರಣಗಳು ಅಜ್ಜಿಯ ಕಾಲಕ್ಕಿಂತ ಇಂದು ಕಡಿಮೆಯಾಗಿದೆಯೇನೋ ಅನಿಸುತ್ತದೆ. ಯಾಕೆಂದರೆ ಕಾನೂನು ಇಲ್ಲದಾಗ

ಮನೆಮನೆಗಳಲ್ಲಿಯೂ ಅತ್ಯಾಚಾರ ನಡೆಯುತ್ತಿರಬಹುದು ಎಂಬ ಊಹೆ ನನ್ನದು. ಈ ಊಹೆಗೆ ಬೇರೆ ಆಯಾಮಗಳೂ ಇರಬಹುದು.

ಸಂಪ್ರದಾಯದ ಹೆಸರಿನಲ್ಲಿ ಕೇವಲ ಸಂತನೋತ್ಪತ್ತಿಗಾಗಿ ನಡೆವ ಮದುವೆಗಳಲ್ಲಿ ನಡೆವುದೆಲ್ಲವೂ ಅತ್ಯಾಚಾರವೇ ಎಂಬುದು ನನ್ನ ಭಾವನೆ. ಅತ್ಯಾಚಾರಕ್ಕೆ ಮೂಲ ಕಾರಣ ಗಂಡಸಿನ ವಿಕೃತಿಯೇ ಆಗಿದೆ. ಬೇರೆಲ್ಲವೂ ಅದಕ್ಕೆ ಸೇರಿ ಬರ್ಬರತೆಯನ್ನು ಹೆಚ್ಚಿಸಬಲ್ಲವು. ಇದು ಸೋಸಿಯಲ್ ಸಮಸ್ಯೆಯಾದುದರಿಂದ ಕೇವಲ ಕಾನೂನಿನ ಮೂಲಕ ಬಗೆಹರಿಸಲು ಅಸಾಧ್ಯ. ಮೂಲದಲ್ಲಿ ನಾವು ಗಂಡು ಮಕ್ಕಳನ್ನು ಬೆಳೆಸುವಾಗಲೇ ಲಿಂಗ ಸೂಕ್ಷ್ಮತೆಯನ್ನು ಫೀಡ್ ಮಾಡಬೇಕು. 'ದೈಹಿಕ ಸಂಬಂಧದಲ್ಲಿ ನಿನ್ನ ಸಹಚರಳ ಇಷ್ಟಾನಿಷ್ಟ ನಿನಗೆ ಬಹಳ ಮುಖ್ಯ' ಎಂಬ ಭಾವ ಅವನಲ್ಲಿ ರಕ್ತಗುಣವಾಗಿ ಹೊಮ್ಮುತ್ತಿರಬೇಕು. ಅಂಥ ಸಹಾನುಭೂತಿಯೊಂದು ಹೊರ ಪ್ರಪಂಚದ ಹೆಣ್ಣಗಳ ಮೇಲೆ ನಡೆಸುವ ಲೈಂಗಿಕ ಅಕ್ರಮಣದ ದೃಷ್ಟಿಯಲ್ಲಿಯೂ ಅವನನ್ನು ಜಾಗೃತವಾಗಿರಿಸಬಲ್ಲದು ಅನಿಸುತ್ತದೆ.

**–ಸುನಂದಾ ಆರ್. ಕಡಮೆ,** ಲೇಖಕಿ, ಸಂಘಟಕಿ, ಧಾರವಾಡ

## ಪುರುಷ ಪ್ರಧಾನ ವ್ಯವಸ್ಥೆಯನ್ನು ಅಪ್ರಸ್ತುತಗೊಳಿಸಬೇಕು



೧. ಅತ್ಯಾಚಾರ ಪ್ರಕರಣಗಳು, ಲೈಂಗಿಕ ದೌರ್ಜನ್ಯಗಳು, ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಅಸಹಾಯಕರನ್ನು ದುರ್ಬಲರನ್ನು ಯಾವ ರೀತಿಯಲ್ಲಾದರೂ ಹೆದರಿಸಿ ವಿಕೃತ ಖುಷಿಯನ್ನು ಅನುಭವಿಸುವ ನಮ್ಮ ಸಮಾಜದಲ್ಲಿ ಅನಾದಿ ಕಾಲದಿಂದಲೂ ಅತ್ಯಾಚಾರಗಳು ನಡೆಯುತ್ತಲೇ ಇವೆ. ಎಂದಿಗಿಂತಲೂ ಇಂದು ಹೆಣ್ಣು ಹೆತ್ತವರ ಕಳವಳ ಗಮನಿಸಿದರೆ ಈ ಅಪರಾಧಗಳು ಹೆಚ್ಚುತ್ತಿರುವುದು ನಿಜ.

೨: ಯಾರೂ ಹುಟ್ಟುತ್ತಲೇ ವಿಕೃತಿಗಳಾಗಿ ಹುಟ್ಟುವುದಿಲ್ಲ. ದಿನದ ೨೪ ಘಂಟೆಯೂ ದೃಶ್ಯಮಾಧ್ಯಮದಲ್ಲಿ ಬಿತ್ತರವಾಗುವ ಹಸಿಬಿಸಿ ದೃಶ್ಯಗಳು, ಬೇಕು ಬೇಡ ಎನ್ನುವ ಕಡಿವಾಣಗಳಿಲ್ಲದೆ ಎಲ್ಲವೂ ಬೆರಳ ತುದಿಯಲ್ಲೇ ಸಿಗುವಂತೆ ಮಾಡುವ ಜಾಲತಾಣಗಳು, ಒಂಟಿಯಾಗಿ ಬೆಳೆದವರು, ಪ್ರೀತಿಯಿಂದ ವಂಚಿತರಾದವರು, ಬಾಲ್ಯದಲ್ಲಿ ಲೈಂಗಿಕ ಶೋಷಣೆಗೆ ಒಳಗಾದವರು ಬಹಳಷ್ಟು ಜನ ಈ ತರಹದ ಬರ್ಬರತೆಯನ್ನು ಬೆಳೆಸಿಕೊಳ್ಳುತ್ತಾರೆ. ಇತ್ತೀಚೆಗೆ ಹೆಚ್ಚುತ್ತಿರುವ ಸಾಮೂಹಿಕ ಅತ್ಯಾಚಾರಗಳನ್ನು ಗಮನಿಸಿದರೆ ಇವುಗಳ ಹಿಂದೆ ಅಸಹನೆ, ಅಸಹಿಷ್ಣುತೆ, ಜನಾಂಗೀಯ ದ್ವೇಷ, ಜಾತಿದ್ವೇಷ, ಲಿಂಗದ್ವೇಷಗಳು ಎದ್ದು ಕಾಣುತ್ತಿವೆ.

೩: ಪುರುಷರಚಿತ, ಲಿಂಗ ಅಸೂಕ್ಷ್ಮ ಪುಸ್ತಕಗಳನ್ನು (ಉದಾ: ರಾಮಾಯಣ, ಮಹಾಭಾರತ ಇತ್ಯಾದಿ) ನಿರ್ದಾಕ್ಷಿಣ್ಯವಾಗಿ ಗೌಣಗೊಳಿಸುತ್ತಾ ಮಾನವ ಪ್ರೀತಿ, ಸಹಜೀವಿ ಗೌರವ, ಮನುಷ್ಯ ಘನತೆಯ ಬಗ್ಗೆ ಗೌರವ ಇರುವಂತಹ ಪಠ್ಯಗಳನ್ನು ಆಯಾ ವಯಸ್ಸಿಗನುಗುಣವಾಗಿ ಪ್ರಾಥಮಿಕ ಶಾಲೆಯಿಂದ ಕಾಲೇಜು ವಿದ್ಯಾಭ್ಯಾಸದವರೆಗೂ ಪಠ್ಯಕ್ರಮಗಳಲ್ಲಿ ಸೇರಿಸುವುದು.

ಜನಾಂಗೀಯ, ಜಾತಿ ದ್ವೇಷಗಳಿಗೆ ಕಾರಣವಾಗುತ್ತಿರುವ ಮತಧರ್ಮಗಳನ್ನು ಹೊಸಲಿನ ಒಳಗೆ, ತಮ್ಮ ವೈಯಕ್ತಿಕ ಆಚರಣೆಗಳಿಗೆ ಸೀಮಿತಗೊಳಿಸಿ, ಸಾಮಾಜಿಕವಾಗಿ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುವ ಮತ್ತು ಬದುಕಿನಲ್ಲಿ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಇಂದಿನ ಯುವಜನತೆ ಮತ್ತು ಸರ್ಕಾರದ ನಡೆಗಳು ಗಟ್ಟಿಗೊಳ್ಳಬೇಕು.

ಮಹಿಳಾ ಸಬಲೀಕರಣಕ್ಕೆ ಒತ್ತು ಕೊಡುವುದು, ಇರುವ ಕಾನೂನುಗಳನ್ನು ಬಿಗಿಯಾಗಿ ಅನುಷ್ಠಾನಗೊಳಿಸುವುದು, ಶಿಕ್ಷಕರು ಮತ್ತು ಘನತೆವೆತ್ತ ನ್ಯಾಯಾಧೀಶರು, ವಕೀಲರಲ್ಲಿ ಲಿಂಗಸಮಾನತೆ, ಲಿಂಗಸೂಕ್ಷ್ಮತೆಯ ಬಗ್ಗೆ ಸೂಕ್ತ ತರಬೇತಿಯನ್ನು ನೀಡುವುದು ಹಾಗೂ ಪುರುಷಪ್ರಧಾನ ವ್ಯವಸ್ಥೆ ಅಪ್ರಸ್ತುತಗೊಳ್ಳುವಂತೆ ಸಾಮಾಜಿಕ ಚಳುವಳಿಗಳು, ಸಾಹಿತಿಗಳು, ಸಮಾಜ ಸುಧಾರಕರು ಕಾರ್ಯೋನ್ಮುಖರಾಗಬೇಕಿದೆ.

**–ಡಿ. ಅರುಂಧತಿ,** ವೈದ್ಯರು ಮತ್ತು ಲೇಖಕಿ, ತುಮಕೂರು

## ಮಹಿಳೆಯರ ಹೆಚ್ಚಿನ ರಾಜಕೀಯ ಪ್ರವೇಶ ಅಗತ್ಯ

ಇತ್ತೀಚಿನ ದಿನಗಳಲ್ಲಿ ಲೈಂಗಿಕ ಅತ್ಯಾಚಾರಗಳು ಹೆಚ್ಚಾಗಿವೆ ಎನ್ನುವುದಕ್ಕೆ ಸಮೀಕ್ಷೆಗಳು ಸಾಕ್ಷಿಯಾಗಿವೆ. ೨೦೧೮ರ ಥಾಮ್ಸನ್ ರ್ಯೂಟರ್ಸ್ ಸಮೀಕ್ಷೆಯ ಪ್ರಕಾರ ಮಹಿಳೆಯರಿಗೆ ಅಸುರಕ್ಷಿತ ದೇಶಗಳಲ್ಲಿ ಭಾರತ, ಅಫ್ಘನಿಸ್ತಾನ, ಸಿರಿಯಾಗಳನ್ನೂ ಹಿಂದಿಕ್ಕಿ ಮೊದಲನೇ ಸ್ಥಾನ ಪಡೆದಿದೆ. ಹಾಗಾಗಿ ಅತ್ಯಾಚಾರಗಳು ಮಾಧ್ಯಮಗಳ ಸುದ್ದಿಗಳಿಂದಾಗಿ ಹೆಚ್ಚಾದಂತೆ ತೋರುತ್ತದೆ ಎಂದು ಹೇಳಲಾಗದು.

ಮುಕ್ತ ಮಾರುಕಟ್ಟೆಯ ಆಯಾಮಗಳು ಎಷ್ಟೇ ಇರಲಿ ಒಂದು ಸಮಾಜದಲ್ಲಿ ಜೀವಿಸುವ ವ್ಯಕ್ತಿಗೆ ವೈಜ್ಞಾನಿಕವೂ, ಆರೋಗ್ಯಕರವೂ ಆದ ಮನಸ್ಥಿತಿಯನ್ನು ಸೃಷ್ಟಿಸುವ ಶಕ್ತಿ ಆ ಸಮಾಜವನ್ನು ರೂಪಿಸುವ ಸಾಂಸ್ಕೃತಿಕ–ರಾಜಕೀಯ ನೀತಿ ರಿವಾಜುಗಳಿರುತ್ತದೆ.



ಉದಾಹರಣೆಗೆ, ೨೦೧೯ರ ಸರ್ಕಾರದ ಮಹಿಳಾ ಆರ್ಥಿಕ ಒಳಗೊಳ್ಳುವಿಕೆಯ ವರದಿಯ ಪ್ರಕಾರ ೨೦೧೭ಕ್ಕೆ ಹೋಲಿಸಿದರೆ ಆಕೆಯ ಆರ್ಥಿಕ ಕ್ಷಮತೆ ಹೆಚ್ಚಾಗಿದೆ. ಆದರೆ, ಭಾರತದ ಒಬ್ಬ ಹೆಣ್ಣುಮಗುವಿಗೆ ಸಿಗುವ ಸರಾಸರಿ ಶಿಕ್ಷಣ ಕೇವಲ ೪.೩ ವರ್ಷಗಳಿಗೆ ಇಳಿದಿದೆ. ನೆರೆ ದೇಶವಾದ ಶ್ರೀಲಂಕಾದಲ್ಲಿ ಇದು ೧೦.೩ ಇದೆ.. ಹಾಗೆಯೇ, ಇದೇ ಅವಧಿಯಲ್ಲಿ ಮಹಿಳೆಯ ಉದ್ಯೋಗಾವಕಾಶಗಳು ೨೦೧೭ರಲ್ಲಿ ೨೯.೪% ಇದ್ದರೆ ೨೦೧೯ರಲ್ಲಿ ೨೬.೫%ಗೆ ಇಳಿದಿದೆ. ಹೀಗಾಗಿ ಅತ್ಯಾಚಾರಗಳ ಹೆಚ್ಚಳಕ್ಕೂ ಆರ್ಥಿಕತೆಗೂ ತಳಕು ಹಾಕಲಾಗದು. ಇವನ್ನು ಕಾನೂನುಗಳ ಮೂಲಕವೇ ನಿಯಂತ್ರಿಸಲು ಸಾಧ್ಯವೆ? ಹಾಗಿಲ್ಲದಿದ್ದರೆ ನಿಮ್ಮ ಸಲಹೆಗಳೇನು?

ಕಾನೂನುಗಳು ಮುಖ್ಯ ಪಾತ್ರ ವಹಿಸಿದರೂ ಇದರ ಅನುಷ್ಠಾನಕ್ಕೆ ಸಮಾಜದ ಮನಸ್ಥಿತಿ ಸುಧಾರಿಸಬೇಕಾಗಿದೆ. ಸರ್ಕಾರದ ಆಡಳಿತ ಸ್ವರೂಪ ಮತ್ತು ಉದ್ದೇಶಗಳು ಮಹಿಳಾಪರವಾಗಬೇಕಾಗಿದೆ. ಇದಕ್ಕಾಗಿ ಮಹಿಳೆಯ ರಾಜಕೀಯ ಪ್ರವೇಶ ಮುಖ್ಯವಾಗುತ್ತದೆ. ಜೊತೆಗೆ ಈ ಕಾಲದ ಜೈವಿಕ–ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನದ ಹಿಡಿತವಿಲ್ಲದ ಆವಿಷ್ಕಾರಗಳ ನಡುವೆ ನಮಗೆ ಸರಿಯಾದ ದಿಕ್ಕು ತೋರಿಸುವ ಹೊಸ ಜೀವನ ಮಾರ್ಗಸೂಚಿಗಳು ಬೇಕಾಗಿವೆ. ಶಿಕ್ಷಣದ ಸ್ವರೂಪವು ಈ ನಿಟ್ಟಿನಲ್ಲಿ ಆಮೂಲಾಗ್ರವಾಗಿ ಪರಿಷ್ಕರಣೆಗೆ ಒಳಪಡಬೇಕಾಗಿದೆ. ಇಂತಹ ಶಿಕ್ಷಿತ ಸಮಾಜವು ಆರ್ಥಿಕ ಅನುಕೂಲಗಳನ್ನು ಅಥವಾ ಮುಕ್ತ ಮಾರುಕಟ್ಟೆಯ ಅನಾನುಕೂಲಗಳನ್ನು ಜವಾಬ್ದಾರಿಯಿಂದ ನಿಭಾಯಿಸುವ ಕ್ಷಮತೆಯನ್ನು ತಾನೆ ರೂಪಿಸಿಕೊಳ್ಳುತ್ತದೆ. ಇಂತಹ ಸಮಾಜಕ್ಕೆ ಜೀವಪರ–ವೈಜ್ಞಾನಿಕ ರಾಜಕೀಯ ಚಿಂತನೆಗಳು ಅತ್ಯಗತ್ಯ.

**–ಸುಶಿ ಕಾಡನಕುಪ್ಪೆ.** ದಂತವೈದ್ಯ ಶಾಸ್ತ್ರಜ್ಞೆ, ಲೇಖಕಿ, ಬೆಂಗಳೂರು.

## ಎಲ್ಲರಲ್ಲಿ ವೈಚಾರಿಕತೆ ಮೂಡಿಸುವುದೊಂದೇ ಪರಿಹಾರ



**ನ**ನಗನ್ನಿಸುವ ಪ್ರಕಾರ ಮಹಿಳೆ ಮತ್ತು ಮಕ್ಕಳ ಮೇಲಿನ ಲೈಂಗಿಕ ಅತ್ಯಾಚಾರಗಳು ಹಿಂದೆಯೂ ಬಹುಷ: ಇಷ್ಟೇ ಪ್ರಮಾಣ ಅಥವಾ ಇದಕ್ಕಿಂತಲೂ ಹೆಚ್ಚು ನಡೆಯುತ್ತಿದ್ದವು. ಧರ್ಮ ಮತ್ತು ಸಂಪ್ರದಾಯಗಳ ಹೆಸರಿನಲ್ಲಿ/ಸೋಗಿನಲ್ಲಿ ವ್ಯವಸ್ಥಿತವಾಗಿಯೂ ಅತ್ಯಾಚಾರಗಳನ್ನು ನಮ್ಮ ಸಮಾಜದ ಕೆಲ ಸಮುದಾಯಗಳು ಮಾಡುತ್ತಿದ್ದವು. ಅಧಿಕಾರ ಹೊಂದಿದ ಮತ್ತು 'ಪ್ರಬಲ' ಸಮುದಾಯದ ಪುರುಷರು ತಾವೇ ಮಾಡಿಕೊಂಡಿದ್ದ ಕಾನೂನುಗಳಲ್ಲಿ ಅಂತಹ ವ್ಯವಸ್ಥಿತ ಅತ್ಯಾಚಾರಗಳಿಗೆ ಶಿಕ್ಷೆಯೇ ಇರುತ್ತಿರಲಿಲ್ಲ..

ಮಹಿಳಾ ಹೋರಾಟದ ಫಲವಾಗಿ ಕೆಲ ಹೊಸ ಕಾನೂನುಗಳು ಬಂದ ಕಾರಣ, ಮಹಿಳೆಯರು ವಿಚಾರವಂತರಾಗಿ, ಧೈರ್ಯದಿಂದ ಅತ್ಯಾಚಾರಗಳನ್ನು ಬಯಲಿಗೆಳೆಯುತ್ತಿರುವುದರಿಂದ ಮತ್ತು ಕೆಲಮಟ್ಟಿಗೆ ಜನರಿಗೆ ನಿಲುಕುತ್ತಿರುವ ಮಾಧ್ಯಮಗಳ ಕಾರಣದಿಂದಾಗಿ ಅವು ಸುದ್ದಿಯಾಗುತ್ತಿವೆ. ಇನ್ನು ಲೈಂಗಿಕ ಅತ್ಯಾಚಾರಿಗಳು, ತಾವು ಸಿಕ್ಕಿಹಾಕಿಕೊಂಡರೆ ಕಾನೂನಿನ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂಬ ಭಯಕ್ಕೆ ಸಾಕ್ಷಿ ನಾಶಪಡಿಸಲು ಅತ್ಯಾಚಾರಕ್ಕೆ ಬಲಿಯಾದ ಮಹಿಳೆ/ ಹುಡುಗಿ/ಮಗುವನ್ನು ಕೊಲೆ ಮಾಡುತ್ತಿದ್ದಾರೆ.

ಮಹಿಳೆ ಎಲ್ಲ ಕ್ಷೇತ್ರಗಳಲ್ಲೂ ಕಾಲಿಡುತ್ತಿದ್ದಾಳೆ. ಹಗಲು–ರಾತ್ರಿ ಎನ್ನದೆ, ತಾಂತ್ರಿಕ–ಗ್ರಾಂಥಿಕ ಎನ್ನದೇ, ವೈಚಾರಿಕ–ದೈಹಿಕ ಶ್ರಮಗಳೆನ್ನದೇ, ಸಾಮಾಜಿಕ–ಧಾರ್ಮಿಕ–ರಾಜಕೀಯದಂತಹ ಎಲ್ಲದರಲ್ಲಿಯೂ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಿದ್ದಾಳೆ. ಆದರೆ ಇದನ್ನು ಈ ಪುರುಷಪ್ರಧಾನ ಸಮಾಜಕ್ಕೆ ಒಪ್ಪಿಕೊಳ್ಳಲು ಆಗುತ್ತಲೇ ಇಲ್ಲ. 'ಮುಕ್ತತೆ', ಒಂದು ಕಡೆ ಮಹಿಳೆಗೆ ಈ ಅವಕಾಶಗಳನ್ನು ಒದಗಿಸಿಕೊಳ್ಳಲು ಸಹಕಾರಿಯೂ ಆಗುತ್ತಿದೆ. ಅದರ ಜೊತೆಗೇ ಹೆಚ್ಚಿನ ಯುವ ಸಮುದಾಯವನ್ನು ಹೆಚ್ಚು materialistic ಜನರನ್ನಾಗಿಸುತ್ತಿದೆ ಮತ್ತು intellectual ಕಡೆಗಿನ ಒಲವನ್ನು ಕಡಿಮೆಯಾಗಿಸುತ್ತಿದೆ ಎನಿಸುತ್ತದೆ. ಹಾಗಾಗಿ ಮಹಿಳಾ ಸಮಾನತೆ ಎನ್ನುವ ಪರಿಕಲ್ಪನೆ ನಮ್ಮ ಜನರ ಬುದ್ಧಿಗೆ ನಿಲುಕದಂತಾಗಿದೆ.

ಇದಕ್ಕೆ ಪರಿಹಾರವೆಂದರೆ, ಎಲ್ಲ ಸಮುದಾಯಗಳಲ್ಲಿಯೂ ವೈಚಾರಿಕತೆಯನ್ನು ಮೂಡಿಸುವುದೇ ಆಗಿದೆ. ಕುಟುಂಬ, ಶಿಕ್ಷಣ ಸಂಸ್ಥೆಗಳು, ಮಾಧ್ಯಮಗಳು, ಮತ್ತು ಇತರ ಎಲ್ಲಾ ಸರ್ಕಾರಿ ಹಾಗೂ ಸರ್ಕಾರೇತರ ಸಂಘ–ಸಂಸ್ಥೆಗಳು ಜನರಲ್ಲಿ ವೈಚಾರಿಕತೆಯನ್ನು ಮೂಡಿಸಲು ಟೊಂಕಕಟ್ಟಿ ನಿಲ್ಲಬೇಕಿದೆ. ಇದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೂ ಸಹ.

**–ಅಖಿಲಾ,** ಮಹಿಳಾ ಸಬಲೀಕರಣ ಸಲಹಾಕಾರ್ತಿ, ಬೆಂಗಳೂರು.

ಯುವ ಲಹರಿ

# ಹಳ್ಳಿ ಹೆಣ್ಮಕ್ಕಳ ಹದಿನೆಂಟರ ಹೊಯ್ದಾಟ

–ಎನ್. ಆರ್ ಸ್ನೇಹಾ

**ಮೈ**ಸೂರು ಜಿಲ್ಲೆಯ ಅತ್ಯಂತ ಹಿಂದುಳಿದ ತಾಲೂಕು ಹೆಗ್ಗಡದೇವನ ಕೋಟೆಯ ಸಣ್ಣ ಹಳ್ಳಿಯೊಂದರಲ್ಲಿ ಹನ್ನೆರಡು ವರ್ಷಗಳಿಂದ ಹದಿಹರೆಯದ ವಿದ್ಯಾರ್ಥಿಗಳೊಂದಿಗೆ ಕೆಲಸಮಾಡುತ್ತಿರುವ ನನಗೆ, ಅವರ ಬದುಕಿನಲ್ಲಿ ಎದುರಾಗುವ ಕೌಟುಂಬಿಕ ಮತ್ತು ಸಾಮಾಜಿಕವಾದ ಸಂಕೀರ್ಣ ಸನ್ನಿವೇಶಗಳ ಆಳವನ್ನು ಅರ್ಥೈಸಿಕೊಳ್ಳುವುದು ಇವತ್ತಿಗೂ ಸವಾಲಿನ ಸಂಗತಿ. ನಾವು ಉಪನ್ಯಾಸಕರು ತರಗತಿ ಸಮಯದಲ್ಲಷ್ಟೆ ಅವರೊಂದಿಗೆ ಇರುತ್ತೇವೆ. ಮೇಲ್ನೋಟಕ್ಕೆ ವ್ಯಕ್ತವಾಗುವ ಅವರ ಕೆಲವು ಸಮಸ್ಯೆಗಳಿಗೆ ಸಾಂದರ್ಭಿಕ ನೆರವು ದೊರಕಿಸಲು ಪ್ರಯತ್ನಿಸುತ್ತೇವೆ. ಆದರೆ, ಹದಿಹರೆಯದವರ ಅದೆಷ್ಟೋ ಗಹನವಾದ ಸಾಮಾಜಿಕ ಸಮಸ್ಯೆಗಳು ಅವರ ಬದುಕಿನ ದಿಕ್ಕನ್ನೇ ಬದಲಿಸುತ್ತಿರುತ್ತವೆ ಎಂಬ ಅಂಶವನ್ನು ಅರಿಯಲು; ಆ ಕುರಿತು ಅವರಲ್ಲಿ ಸಾವಕಾಶವಾಗಿ ಮಾತನಾಡಲು ಪ್ರಯತ್ನಿಸುವುದು ವಿರಳ. ಅವರ ಮನೆಗಳಲ್ಲಂತೂ ಇಂತಹ ಯಾವುದೇ ವಿಚಾರ ಚರ್ಚೆಯ ವಿಷಯವೇ ಆಗಿರುವುದಿಲ್ಲ. ಹೀಗೆ, ಅವರ ಬದುಕಿನ ದಿಕ್ಕು ಬದಲಿಸುವ ಅಂಶಗಳಲ್ಲಿ 'ಬಾಲ್ಯವಿವಾಹ'ವೂ ಒಂದು. ಕೆಲವು ಪ್ರಕರಣಗಳಲ್ಲಿ ಅದೇ ಪ್ರಮುಖವಾದುದು.

ಬಾಲ್ಯವಿವಾಹದ ಅನಾಹುತಗಳ ಕುರಿತು ನಿರಂತರ ಜಾಗೃತಿ ಮೂಡಿಸುವ 'ನಂದಿಸದಿರಿ ನಂದಾದೀಪ' ಎನ್ನುವ ಆಕಾಶವಾಣಿಯ ಸರಣಿ ಕಾರ್ಯಕ್ರಮ ಮತ್ತು ಬಾಲ್ಯವಿವಾಹದ ಸುತ್ತಲೇ ಹೆಣೆದಿರುವ 'ಜೀರ್ಜಿಂಬೆ' ಎಂಬ ಚಲನಚಿತ್ರದ ಕುರಿತು ಈಚೆಗೆ ಸಾಂದರ್ಭಿಕವಾಗಿ ತರಗತಿಯಲ್ಲಿ ಹೇಳಿದ್ದೆ. ಈ ಸಿನಿಮಾದಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ '೧೦೯೮' ಹೇಗೆ ಸದ್ಬಳಕೆಯಾಗಿದೆ ಎನ್ನುವುದನ್ನೂ ಉಲ್ಲೇಖಿಸಿದ್ದೆ.

ಅದಾಗಿ ಒಂದೆರೆಡು ದಿನಗಳ ಬಳಿಕ, ವಿದ್ಯಾರ್ಥಿಯೊಬ್ಬ ನನ್ನಲ್ಲಿಗೆ ಬಂದು ತನ್ನ ಸಹಪಾಠಿಯೊಬ್ಬಳು ಬಾಲ್ಯವಿವಾಹಕ್ಕೆ ಒಳಗಾಗಲಿರುವ ಮಾಹಿತಿ ನೀಡಿದ. ತರಗತಿಯಲ್ಲಿ ನಾನು ಮಾತನಾಡಿದ್ದು ಆ ಹುಡುಗನನ್ನು ಅಷ್ಟುಬೇಗ ಪ್ರಭಾವಿಸಿದ್ದು ಕಂಡು ಬೆರಗಾದೆ. ಆ ವಿದ್ಯಾರ್ಥಿನಿಯನ್ನು ಕರೆದು ವಿಚಾರಿಸಲಾಗಿ, ಪೋಷಕರು ಮದುವೆ ನಿಶ್ಚಯಿಸಿರುವುದನ್ನು ಖಾತ್ರಿ ಪಡಿಸಿದಳು. ಅವಳ ಕಣ್ಣುಗಳು ಅಸಹಾಯಕತೆಯನ್ನು ಬಿಂಬಿಸಿದವು. ಮೊದಲು ಪೋಷಕರಿಗೆ ತಿಳಿ ಹೇಳಿ ನೋಡೋಣವೆಂದು, ಅವರನ್ನು ಕಾಲೇಜಿಗೆ ಕರೆತರುವಂತೆ ಆಕೆಗೆ ಸೂಚಿಸಿದೆವು.

ಅದಾದ ಒಂದೆರಡು ದಿನ ನಾನು ಕಾಲೇಜಿಗೆ ಹೋಗಿರಲಿಲ್ಲ. ಅಷ್ಟರಲ್ಲಿ ನನ್ನ ಸಹೋದ್ಯೋಗಿಯೊಬ್ಬರಿಗೆ ಸ್ಥಳೀಯ ಮಕ್ಕಳ ಸಹಾಯವಾಣಿಯವರು ಕರೆಮಾಡಿ, ತಾವು ದೂರೊಂದರ ವಿಚಾರಣೆಗಾಗಿ ಕಾಲೇಜಿಗೆ ಬರುತ್ತಿರುವುದಾಗಿ ತಿಳಿಸಿದ್ದರು. ನಾವೆಲ್ಲರೂ ಕೊಂಚ ಗಲಿಬಿಲಿಗೊಂಡೆವು. ಈ ವಿಷಯ ಇಷ್ಟು ಬೇಗ ಅವರಿಗೆ ತಲುಪಿದ್ದಾದರೂ ಹೇಗೆ ಎನ್ನುವ ಪ್ರಶ್ನೆ ಮೂಡಿತು. ಪರಿಸ್ಥಿತಿಯ ಗಂಭೀರತೆಯನ್ನು ನಮಗಿಂತ ಹೆಚ್ಚು ಅರಿತಿದ್ದ ಆ ನಮ್ಮ ವಿದ್ಯಾರ್ಥಿ '೧೦೯೮'ಕ್ಕೆ ಅದಾಗಲೇ ಕರೆಮಾಡಿದ್ದ ! ಆಕೆಯ ವಿಚಾರಣೆ ನಡೆಯುತ್ತಿರುವಾಗ ಇನ್ನೂ ಮೂರ್ನಾಲ್ಕು ವಿದ್ಯಾರ್ಥಿನಿಯರು ಇದೇ ರೀತಿ 'ಅಸಹಾಯಕ' ಸನ್ನಿವೇಶಕ್ಕೆ ಸಿಲುಕಿರುವ ಅಂಶ ಬೆಳಕಿಗೆ ಬಂದಿತು. ಅವರನ್ನೆಲ್ಲ ಕಲೆ ಹಾಕಿ ಮಾಹಿತಿ ಸಂಗ್ರಹಿಸಿದೆವು. ಒಬ್ಬೊಬ್ಬರದೂ ಒಂದೊಂದು ಕತೆ.

ಮೊದಲ ವಿದ್ಯಾರ್ಥಿನಿಯ ಕುಟುಂಬ ಕಡುಬಡತನದಲ್ಲಿದೆ. '೧೮ ತುಂಬಿ ಬಿಟ್ಟರೆ ಮದುವೆಗೆ ಖರ್ಚು ಹೆಚ್ಚುತ್ತದೆ. ಹುಡುಗನನ್ನು ಹುಡುಕುವುದು ತ್ರಾಸದಾಯಕ. ಕದ್ದು ಮುಚ್ಚಿ ಮದುವೆ ಮಾಡಿ ಮುಗಿಸಿದರೆ ತಮ್ಮ ತಲೆಯ ಮೇಲಿನ ಜವಾಬ್ದಾರಿ ಇಳಿದಂತಾಗುತ್ತದೆ' ಎಂದು ಆಲೋಚಿಸಿದ್ದರು ಪೋಷಕರು. ಎರಡನೆಯ ವಿದ್ಯಾರ್ಥಿನಿಗೆ ತಂದೆ ತೀರಿಹೋಗಿದ್ದರು. ತಾಯಿ ತನ್ನ ಮಗಳ ಜವಾಬ್ದಾರಿಯನ್ನು ಆದಷ್ಟು ಬೇಗ ಕಳೆದುಕೊಳ್ಳಬಯಸಿದ್ದಳು. ನೆರೆ–ಹೊರೆ, ನೆಂಟರಿಷ್ಟರೂ ಅದೇ 'ಉಪದೇಶ' ಮಾಡಿದ್ದರಂತೆ. ಹೆಚ್ಚು ಓದಲು ಕಳುಹಿಸಿದರೆ ಪ್ರೇಮದ ಬಲೆಗೆ ಬಿದ್ದು ಬೇರೆ ಜಾತಿಯ ಗಂಡನ್ನು ಮದುವೆಯಾಗುವ ಹಠ ಹಿಡಿದರೆ ಏನು ಗತಿ ಎನ್ನುವುದು ಆ ತಾಯಿಯ ಮತ್ತೊಂದು ಭಯ. ಸುತ್ತಮುತ್ತಲಲ್ಲೇ ಕೆಲವು ಇಂಥ ನಿದರ್ಶನಗಳು 'ಸೃಷ್ಟಿ'ಯಾಗಿದ್ದು ಆಕೆಯ ಭಯದ ಮೂಲ! ಮೂರನೆ ವಿದ್ಯಾರ್ಥಿನಿಯನ್ನು ಮದುವೆಯಾಗಲಿರುವ ಗಂಡು, ಮದುವೆ ನಂತರವೂ ಆಕೆಗೆ ಪರೀಕ್ಷೆ ಬರೆಯಲು ಅನುವು ಮಾಡುವ ಭರವಸೆ ನೀಡಿದ್ದಾನಂತೆ !!

ಈ ಮೂವರು ವಿದ್ಯಾರ್ಥಿನಿಯರಿಗೂ ಮದುವೆ ಅವರ ಆಯ್ಕೆಯಾಗಿರಲಿಲ್ಲ ಎನ್ನುವುದು ಮೇಲ್ನೋಟಕ್ಕೇ ಕಂಡಿತು. ಪೋಷಕರ ಅವಸರಕ್ಕೆ ಅವರು ತಮ್ಮ ಭವಿಷ್ಯ ಬಲಿಕೊಡಲು ಸಜ್ಜಾಗಿದ್ದರು. ೧೮ ತುಂಬಿದ ದಿನವೇ ಕದ್ದು ಮುಚ್ಚಿ ಮದುವೆ ಶಾಸ್ತ್ರ ಮಾಡಿ, ಕೈತೊಳೆದುಕೊಳ್ಳಬೇಕೆನ್ನುವುದು ಹೆತ್ತವರ ಹವಣಿಕೆ. '೧೮ ತುಂಬುವ ಮೊದಲು ಮದುವೆ ಕುರಿತು ಮಕ್ಕಳೊಂದಿಗೆ ಯಾವುದೇ ರೀತಿ ಮಾತುಕತೆ ನಡೆಸುವುದು ಕೂಡ ಅಪರಾಧ' ಎಂದು ಕಾನೂನು ಹೇಳುತ್ತದೆಯಾದರೂ, ಇವರಿಗೆ ಅದ್ಯಾವುದರ ಅಂಜಿಕೆ ಇಲ್ಲ. ಮಾತ್ರವಲ್ಲ, ಬೇಗ ಮದುವೆ ಮಾಡಿ ಮುಗಿಸಲು ತಮ್ಮದೇ ಕಾರಣ, ಸಬೂಬುಗಳನ್ನು ಮುಂದೊಡ್ಡುತ್ತಾರೆ. ಈ ಭಾಗದ ಕೆಲವು ಜಾತಿ–ಸಮುದಾಯಗಳಲ್ಲಿರುವ 'ನಂಬಿಕೆ'ಯ ಹೆಸರಿನ ಮೂಢ ನಂಬಿಕೆಗಳ ಪಾಲೂ ಇದರಲ್ಲಿ ದೊಡ್ಡದಿದೆ.



ಚಿತ್ರ : ಗುಜ್ಜಾರ್

ಬಾಲ್ಯ ವಿವಾಹದ ತಡೆಗೆ ಪ್ರಯತ್ನಗಳು (೧೯೨೯– ಬ್ರಿಟಿಷರ ಆಳ್ವಿಕೆ ಕಾಲದಲ್ಲಿ) ಪ್ರಾರಂಭವಾಗಿ, ಶತಮಾನ ಸಮೀಪಿಸುತ್ತಿದೆ. ೧೯೭೮ರಲ್ಲಿ ಈ ಕಾನೂನು ತಿದ್ದುಪಡಿಗೊಂಡು, ಮದುವೆ ವಯಸ್ಸನ್ನು ಹೆಣ್ಣಿಗೆ ೧೮ – ಗಂಡಿಗೆ ೨೧ ಎಂದು ನಿಗದಿ ಪಡಿಸಲಾಯಿತು. ಇತ್ತೀಚಿನ ದಶಕಗಳಲ್ಲಂತೂ ಜಾಥಾ, ಕಠಿಣ ಕಾನೂನು ಕ್ರಮ ಮತ್ತು ಮಾಧ್ಯಮ ಜಾಹೀರಾತುಗಳ ಮೂಲಕ ಅರಿವು ಮೂಡಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ. ಆದಾಗ್ಯೂ, ಗ್ರಾಮೀಣ ಪರಿಸರ ಮತ್ತು ಕೆಲವು ನಿರ್ದಿಷ್ಟ ಜಾತಿ– ಸಮುದಾಯಗಳಲ್ಲಿ ಈ ಪಿಡುಗು ನಿರಂತರ. ಯುನಿಸೆಫ್ ಅಂಕಿ ಅಂಶಗಳ ಪ್ರಕಾರವೇ ಭಾರತದಲ್ಲಿ ನಡೆಯುವ ಮೂರು ಮದುವೆಗಳಲ್ಲಿ ಒಂದು ಬಾಲ್ಯವಿವಾಹವಾಗಿರುತ್ತದೆ !

ಸಹಪಾಠಿಗಳು, ನೆರೆಹೊರೆಯವರು ಮುಂತಾಗಿ ಯಾವುದೋ ಮೂಲದಿಂದ ಸಹಾಯವಾಣಿ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ಕರೆ ಹೋಗಿ, ಅವರು ಬಂದು ತಡೆಯೊಡ್ಡುವ, ಎಚ್ಚರಿಕೆ ನೀಡಿ ಮುಚ್ಚಳಿಕೆ ಬರೆಸಿಕೊಳ್ಳುವ ಪ್ರಕರಣಗಳಲ್ಲಷ್ಟೆ ಸದರಿ ಮಕ್ಕಳ 'ಬಾಲ್ಯ'ದ ಖುಷಿ ಮತ್ತಷ್ಟು ವಿಸ್ತರಿಸುತ್ತದೆ. ಆದರೆ, ಅದು ಕೂಡ 'ಹದಿನೆಂಟು' ತುಂಬುವವರೆಗಷ್ಟೆ. ಈ ಹದಿವಯಸ್ಸಿನಲ್ಲಿ ಹೆಣ್ಮಕ್ಕಳು ಅದಾಗ ತಾನೆ ಪಿಯುಸಿ ಮುಗಿಸಿ, ಪದವಿಗೆ ಸೇರಬೇಕು. ಅಷ್ಟರಲ್ಲಾಗಲೆ ಮದುವೆಯ ಬಂಧನಕ್ಕೆ ಬಿದ್ದರೆ, ಹೆಚ್ಚಿನ ಪ್ರಕರಣಗಳಲ್ಲಿ ಮುಂದಿನ ಓದು ಅಲ್ಲಿಗೇ ನಾಸ್ತಿ.

'ಯಾವುದೇ ಸಮುದಾಯದ ಏಳ್ಗೆಯನ್ನು ಅಳೆಯಬೇಕಾದರೆ ಆ ಸಮುದಾಯದ ಸ್ತ್ರೀಯರ ಏಳ್ಗೆಯನ್ನು ಪರಿಗಣಿಸಬೇಕು' ಎಂದಿದ್ದರು ಅಂಬೇಡ್ಕರ್. ಕಳೆದ ನಾಲ್ಕೈದು ದಶಕಗಳಲ್ಲಿ ಆಧುನಿಕ ಭಾರತದ ನಗರವಾಸಿ ಮಹಿಳೆಯರ ಬದುಕಿನ ರೀತಿಯಲ್ಲಿ ಎಷ್ಟೆಲ್ಲಾ ಏಳ್ಗೆ; ಬದಲಾವಣೆ ಸಂಭವಿಸಿದ್ದರೂ, ಗ್ರಾಮೀಣ ಹೆಣ್ಣುಮಕ್ಕಳ ಬದುಕು ನಿರೀಕ್ಷಿತ ಪ್ರಮಾಣದಲ್ಲಿ ಸುಧಾರಿಸದಿರಲು ಬಾಲ್ಯ ವಿವಾಹ ಅಥವಾ ವ್ಯಾಸಂಗ ಮೊಟಕುಗೊಳಿಸುವ 'ಅವಸರದ ಮದುವೆ'ಗಳೇ ಮುಖ್ಯ ಕಾರಣ. ನನ್ನ ವಿದ್ಯಾರ್ಥಿನಿಯರಾಗಿದ್ದು, ಪಿಯುಸಿ ಮುಗಿಸಿದ ಒಂದೆರಡು ವರ್ಷಗಳಲ್ಲೇ ಎರಡೆರಡು ಮಕ್ಕಳನ್ನು ಹೆತ್ತು, ಕಂಕುಳಲ್ಲಿ ಹೊತ್ತುಕೊಂಡು ಬದುಕಿನ ಭರವಸೆಯನ್ನೇ ಕಳೆದುಕೊಂಡವರಂತೆ ಓಡಾಡುವ ಹೆಣ್ಮಕ್ಕಳನ್ನು ಕಂಡಾಗಲೆಲ್ಲ ಮನಸ್ಸಿನ ಮೂಲೆಗೆ ಮುಳ್ಳು ಚುಚ್ಚಿದ ಅನುಭವವಾಗುತ್ತದೆ.

ಹಿಂದಿನ ಕಾಲದಂತೆ ಹೆಚ್ಚು ನಿರೀಕ್ಷೆ ಇಲ್ಲದ, ಹೆಣ್ಣುಮಕ್ಕಳ ಬದುಕು ನಾಲ್ಕು ಗೋಡೆಗೆ ಸೀಮಿತವಾಗಿರುವ ಕಾಲ ಇದಲ್ಲ. ಈ ಕಾಲದ ನಿರೀಕ್ಷೆಗಳು ಬೇರೆಯೇ ಆಗಿವೆ. ಎಲ್ಲಾ ಕ್ಷೇತ್ರದಲ್ಲಿ ಹೆಣ್ಣು ಪುರುಷನನ್ನು ಸರಿಗಟ್ಟಿ ನಿಂತಿದ್ದಾಳೆ. ಗ್ರಾಮೀಣ ಹೆಣ್ಣುಮಕ್ಕಳೂ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಸಾಧನೆಯ ಪತಾಕೆ ಹಾರಿಸಿದ್ದಾರೆ. ಹೀಗೆಯೇ, ಸ್ವಾವಲಂಬಿ ಮತ್ತು ಆತ್ಮಸ್ಥೈರ್ಯದ ಬದುಕು ಕಟ್ಟಿಕೊಳ್ಳುವ ಸಾಧ್ಯತೆ ಇದ್ದ ಅದೆಷ್ಟೋ ಹೆಣ್ಮಕ್ಕಳು ಪೋಷಕರ 'ಮದುವೆ ಅವಸರ'ಕ್ಕೆ ತಮ್ಮ ಭವಿಷ್ಯ ಬಲಿಕೊಟ್ಟಿದ್ದಾರೆ. ಹದಿನೆಂಟು ದಾಟುವುದನ್ನು ಕಾಯುವ ಸಲುವಾಗಿಯೇ

(೧೭ನೇ ಪುಟಕ್ಕೆ

# ಕಸ್ತೂರಬಾ ಗಾಂಧಿ-೧೫೦



ಮಹಾತ್ಮ ಗಾಂಧಿಯವರಿಗಿಂತ ಐದಾರು ತಿಂಗಳು ಹಿರಿಯರೇ ಆಗಿದ್ದ ಅವರ ಪತ್ನಿ ಕಸ್ತೂರ ಬಾ ತಮ್ಮ ಪತಿಯ ಮಹಾ ಹೋರಾಟದಲ್ಲಿ ಸಹಭಾಗಿಯಾದ ಮಹಾ ಮಹಿಳೆ. ಆದರೂ ಅವರು ತಮ್ಮ ಸಾಂಪ್ರದಾಯಿಕ ಹಿನ್ನೆಲೆಯನ್ನು ತೊರೆದು ತೀವ್ರ ಗತಿಯಲ್ಲಿ ಬದಲಾಗುತ್ತಿದ್ದ ಗಾಂಧಿಯವರ ಬದುಕಿನ ಲಯದೊಂದಿಗೆ ಹೊಂದಿಕೊಳ್ಳುವಾಗ ಸಾಕಷ್ಟು ಪಾಡು ಪಡಲೇ ಬೇಕಾಯಿತು. ಬಹುಶಃ ಇದನ್ನೇ ಗಾಂಧಿ ತಮಗೆ ಸತ್ಯಾಗ್ರಹದ ಪಾಠ ಕಲಿಸಿದವಳು ತಮ್ಮ ಪತ್ನಿಯೇ ಎಂದಿರುವುದು! ಕುಟುಂಬದ ಮಮಕಾರ ಮತ್ತು ಸಾರ್ವಜನಿಕ ಜೀವನದ ಒತ್ತಾಯಗಳು ಇವುಗಳ ನಡುವೆ ಅನುಸಂಧಾನಗೈಯುತ್ತಾ ಕಸ್ತೂರಬಾ ಅವರ ಬದುಕು ಮಾಗಿದ ಕಥೆ ಕುತೂಹಲ ಹುಟ್ಟಿಸುವಂಥದ್ದು. ಪತಿಯ ೧೫೦ನೇ ಜಯಂತಿಯ ಜೊತೆಗೆ ತಮ್ಮ ೧೫೦ನೇ ಜಯಂತಿಗೂ ಬಾಧ್ಯರಾಗಿರುವ ಬಾ ಅವರ ಈ ಕಥೆಯನ್ನು ಇಲ್ಲಿ ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ'ದಿಂದ ಆಯ್ದ ಪ್ರಸಂಗಗಳ ಮೂಲಕ ಪೋಣಿಸಿ ನೀಡಲಾಗುತ್ತಿದ್ದು ಅದರ ಮೊದಲ ಭಾಗ ಇದು.–ಸಂ.

## ವಿವಾಹ ಬಂಧನ

ಗಾಂಧಿಗೆ ಹದಿಮೂರು ವರ್ಷವಾಗಿದ್ದಾಗ, ಆ ಕಾಲದ ಸಂಪ್ರದಾಯದಂತೆ ಅವರಿಗೆ ಮದುವೆ ಮಾಡಲಾಯಿತು. ವಧು ಅದೇ ವಯಸ್ಸಿನ ಕಸ್ತೂರಬಾಯಿ. ಈ ಬಾಲಕಿ ಪೋರ್‌ಬಂದರಿನ ವ್ಯಾಪಾರಿ ಗೋಕುಲದಾಸ್ ಎಂಬುವವರ ಅನಕ್ಷರಸ್ಥ ಮಗಳು. ಮುಂದೆ ತಮ್ಮ ಆತ್ಮಚರಿತ್ರೆಯಲ್ಲಿ ಗಾಂಧಿ ದಾಖಲಿಸಿರುವಂತೆ ಈ ಬಾಲ್ಯ ವಿವಾಹ ಭಾರತೀಯ ಸಂಪ್ರದಾಯದ ಒಂದು 'ಕ್ರೂರ ಆಚರಣೆ'ಯಾಗಿತ್ತು. ಮದುವೆ ಎಂದರೆ ಏನು ಮತ್ತು ಗಂಡ–ಹೆಂಡತಿ ಎಂದರೆ ಸಾಯುವವರೆಗೂ ಒಟ್ಟಿಗೆ ಜೀವನ ನಡೆಸಬೇಕಾದ ಸಂಗಾತಿಗಳು ಎಂಬ ಕಲ್ಪನೆ ಇಲ್ಲದ ವಯಸ್ಸಿನಲ್ಲಿ ಈ ಸಂಬಂಧವನ್ನು ಅವರ ಮೇಲೆ ಹೇರುವುದು ಕ್ರೂರವಲ್ಲದೆ ಮತ್ತೇನು? ಕರಮಚಂದ್ ಗಾಂಧಿ ಕುಟುಂಬದ ಎಲ್ಲ ಸದಸ್ಯರೂ, ಹತ್ತಿರದ ನೆಂಟರೂ ಒಂದೇ ಮನೆಯಲ್ಲಿ ಒಟ್ಟಿಗೆ ಬದುಕುತ್ತಿದ್ದರು. ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿದ್ದ ಈ ಜನರ ನಡುವೆ ಮದುವೆಯಾದ ಈ ಮಕ್ಕಳೂ ಮಕ್ಕಳಂತೆಯೇ ಆಡುತ್ತಾ, ಕಿತ್ತಾಡುತ್ತಾ ಬಾಳತೊಡಗಿದರು. ಗಾಂಧಿ ತಮ್ಮ ಆತ್ಮ ಚರಿತ್ರೆಯಲ್ಲಿ ಬರೆದುಕೊಂಡಿರುವಂತೆ ಅವರು ಪತ್ನಿಯ ಮೇಲೆ ಒಡೆತನ ಸಾಧಿಸಲು ಪ್ರಯತ್ನಿಸಿದಷ್ಟೂ ಕಸ್ತೂರ ಬಾ ಅವರ ಸ್ವಾತಂತ್ರ್ಯಪ್ರಿಯತೆ ಹೆಚ್ಚುತ್ತಾ ಹೋಯಿತು!

## ಜೀವನ ಪೂರ್ತಿ ಕಾಡಿದ ಪಾಪಪ್ರಜ್ಞೆ

ಇದೇ ಸಂದರ್ಭದ ಗಾಂಧಿ ಬದುಕಿನ ಇನ್ನೊಂದು ನಿರ್ಣಾಯಕ ಘಟನೆ ಎಂದರೆ ಕರಮಚಂದರ ಸಾವು. ಅನಾರೋಗ್ಯ ಪೀಡಿತರಾಗಿದ್ದ ತಂದೆಯವರನ್ನು ಬಾಲಕ ಮೋಹನದಾಸ ಪ್ರೀತಿಯಿಂದ ಆರೈಕೆ ಮಾಡುತ್ತಿದ್ದನಾದರೂ, ಆಗಾಗ್ಗೆ ಅವನ ಮನಸ್ಸು ತನ್ನ ಪ್ರೀತಿಯ ಹೆಂಡತಿಯ ಕಡೆಗೂ ಹರಿಯುತ್ತಿತ್ತು. ಆಗ ತನ್ನ ಚಿಕ್ಕಪ್ಪನಿಗೋ, ಅಣ್ಣನಿಗೋ ತಂದೆಯ ಬಳಿ ಇರಲು ಹೇಳಿ ಆತ ಹೆಂಡತಿಯ ಬಳಿ ಹೋಗುತ್ತಿದ್ದ. ಆಗ ಹದಿನೈದು ವರ್ಷ ವಯಸ್ಸಿನ ಕಸ್ತೂರಬಾ ತುಂಬು ಗರ್ಭಿಣಿ. ಆದರೂ, ಹದಿನಾರು ವರ್ಷ ವಯಸ್ಸಿನ ಗಾಂಧಿ ಒಂದು ರಾತ್ರಿ ತಂದೆಯನ್ನು ನೋಡಿಕೊಳ್ಳಲು ತನ್ನ ಚಿಕ್ಕಪ್ಪನಿಗೆ ಹೇಳಿ ಹೆಂಡತಿಯ ಕೋಣೆಗೆ ಹೋದ. ಸ್ವಲ್ಪ ಹೊತ್ತಿನಲ್ಲೆ ಮನೆಯಾಳು ಕೋಣೆಯ ಬಾಗಿಲು ಬಡಿದು ತಂದೆ ಕರಮಚಂದರ ಪ್ರಾಣಪಕ್ಷಿ ಹಾರಿಹೋದ ಸುದ್ದಿಯನ್ನು ಹೇಳಿದ. ಮೋಹನದಾಸ ಆಘಾತಗೊಂಡ. ತಾನು ತನ್ನ ಜೀವನದ ಒಂದು ದೊಡ್ಡ ಪಾಪ ಮಾಡಿದ್ದೇನೆಂದು ಮನೋವಿಹ್ವಲತೆಗೆ ಈಡಾದ. 'ಈ ಸಂದರ್ಭದ ನನ್ನ ಕಾಮದಾಹದಿಂದ ಉಂಟಾದ ನಾಚಿಕೆಗೇಡಿನ ಆಘಾತ ಎಂದೂ ನನ್ನ ಮನಸ್ಸಿನಿಂದ ಮಾಸಿ ಹೋಗಲಿಲ್ಲ' ಎಂದು ಮುಂದೆ ಗಾಂಧಿ ತಮ್ಮ ಆತ್ಮಚರಿತ್ರೆಯಲ್ಲಿ ಬರೆದಿದ್ದಾರೆ. ಆಗ ಪತ್ನಿಯ ಹೊಟ್ಟೆಯಲ್ಲಿದ್ದ ಮಗು ಹುಟ್ಟಿದ ಮೂರು ದಿನಗಳಲ್ಲೇ ಮರಣ ಹೊಂದಿದ್ದು ಅವರ ನಾಚಿಕೆಯನ್ನು ಘೋರಗೊಳಿಸಿತು.

ಈ ಘಟನೆಯನ್ನು ಗಾಂಧಿ ತಮ್ಮ ಆತ್ಮಕಥೆ ಮತ್ತು ಇತರ ಬರಹಗಳಲ್ಲಿ ಮತ್ತೆ ಮತ್ತೆ ನೆನಪಿಸಿಕೊಂಡು ಗಂಡು–ಹೆಣ್ಣಿನ ನಡುವಣ ದೈಹಿಕ ಆಕರ್ಷಣೆಯ ಬಗ್ಗೆ ಹಲವು ವ್ಯಾಖ್ಯಾನಗಳನ್ನು ಮಾಡುತ್ತಾರೆ. ಕಾಮ ಅವರ ಜೀವನದುದ್ದಕ್ಕೂ ಬಿಡಿಸಲಾಗದ ಪ್ರಶ್ನೆಯಾಗಿ ಅವರನ್ನು ಕಾಡತೊಡಗುತ್ತದೆ. ಅದನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸಿದಷ್ಟೂ ಅದು ಹೆಚ್ಚೆಚ್ಚು ಕಾಡತೊಡಗುವುದನ್ನು ಅವರು ತಮ್ಮ ಜೀವನದ ಅನೇಕ ಪ್ರಸಂಗಗಳಲ್ಲಿ ಕಂಡು ಅದನ್ನು ಸಂಪೂರ್ಣ ನಿಷೇಧಿಸುವ ಪ್ರಯತ್ನವನ್ನು ಅವರು ಮಾಡುವುದನ್ನು ನಾವು ನೋಡಬಹುದು. ಅವರು ಮುಂದೆ ಪ್ರತಿಪಾದಿಸಿದ ಹೋರಾಟಗಾರನೊಬ್ಬನ ಶಿಸ್ತಿನ ಜೀವನದ ಪಾಠಗಳಲ್ಲಿ ಬ್ರಹ್ಮಚರ್ಯ ಪಾಲನೆಯ ಪಾಠವನ್ನು ಸೇರಿಸಿದ್ದರ ಹಿಂದೆ ಇರುವುದು ಇದೇ ಮಾನಸಿಕತೆ ಎಂದು ಹೇಳಲಾಗುತ್ತದೆ. ಗಾಂಧಿಯವರ ಜೀವನದ ಈ ಘಟನೆಗಳ ಬಗ್ಗೆ ಎರಿಕ್ ಎರಿಕ್ಸನ್ ಮಾಡಿರುವ ಒಂದು ಮನೋವೈಜ್ಞಾನಿಕ ವಿಶ್ಲೇಷಣೆ ಜಗತ್ತಿನ ಗಮನ ಸೆಳೆದಿದ್ದು ಆಸಕ್ತರು ಅದನ್ನು ಅಭ್ಯಸಿಸಬಹುದು.

## ಗಾಂಧಿ ಕಣ್ಣು ತೆರೆಸಿದ ಕಸ್ತೂರಬಾ

ದ.ಆಫ್ರಿಕಾದ ವಾಸ್ತವ್ಯದ ಮೊದಲ ದಿನಗಳಲ್ಲಿ ಗಾಂಧಿಯವರ ತಾತ್ವಿಕ ಬದ್ಧತೆ ಮತ್ತು ಇನ್ನೂ ಮಾಗದ ಅವರ ವ್ಯಕ್ತಿತ್ವದ ಪರಿಚಯ ಮಾಡಿಕೊಡುವ ಒಂದು ಘಟನೆಯನ್ನು ಇಲ್ಲಿ ನಿರೂಪಿಸಬೇಕು. ಗಾಂಧಿಯವರ ವಕೀಲಿಕೆಗೆ ನೆರವಾಗುತ್ತಿದ್ದ ಒಂದಿಬ್ಬರು ಗುಮಾಸ್ತರು ಅವರ ಮನೆಯಲ್ಲಿಯೇ ವಾಸಿಸುತ್ತಿದ್ದರು. ಅಂಥವರಲ್ಲಿ ಹೊಸದಾಗಿ ಬಂದವರೊಬ್ಬರು ಮೂಲದಲ್ಲಿ ಅಸ್ಪೃಶ್ಯ ಜಾತಿಗೆ ಸೇರಿದ್ದ ಕ್ರಿಶ್ಚಿಯನ್ ಆಗಿದ್ದರು. ಆಗ ಆಧುನಿಕ ಶೌಚ ವ್ಯವಸ್ಥೆ ಇಲ್ಲದಿದ್ದುದರಿಂದ ಶೌಚ ಗೃಹದಲ್ಲಿ ಪ್ರತಿದಿನ ಸ್ವಚ್ಛಗೊಳಿಸಬೇಕಿದ್ದ ಶೌಚದ ಮಡಿಕೆಯೊಂದಿರುತ್ತಿತ್ತು. ಹೊಸಬನಾದ ಈ ಕ್ರಿಶ್ಚಿಯನ್ ಗುಮಾಸ್ತನಿಗೆ ಈ ವ್ಯವಸ್ಥೆಯ ಪರಿಚಯವಿಲ್ಲದಿದ್ದರಿಂದಾಗಿ ಗಾಂಧಿ ಕುಟುಂಬವೇ ಆಗ ಅದನ್ನು ಮಾಡಬೇಕಾಗಿತ್ತು. ಆದರೆ ಕಸ್ತೂರಬಾ ಆತ ಮೂಲತಃ ಅಸ್ಪೃಶ್ಯನಾದದ್ದರಿಂದ ಅವನ ಶೌಚದ ಮಡಿಕೆಯನ್ನು ಸ್ವಚ್ಛಗೊಳಿಸಲು ಹಿಂಜರಿದು ಗಾಂಧಿಯವರೊಂದಿಗೆ ವಾದಕ್ಕಿಳಿದರು. ಕೊನೆಗೆ ಮುನಿಸಿಕೊಂಡೇ ಆ ಮಡಿಕೆಯನ್ನೆತ್ತಿಕೊಂಡು ಮಹಡಿಯಿಂದ ಇಳಿಯುತ್ತಿದ್ದಾಗ ವಾದದಿಂದ ಬೇಸತ್ತಿದ್ದ ಗಾಂಧಿ 'ನಿನ್ನದು ಇದೇ ಮನೋಭಾವವಾದರೆ ಈ ಮನೆಯಲ್ಲಿ ನಿನಗೆ ಜಾಗವಿಲ್ಲ' ಇಂದು ಆರ್ಭಟಿಸಿದರು. ಇದರಿಂದ ಇನ್ನಷ್ಟು ಸಿಟ್ಟುಕೊಂಡ ಬಾ, 'ಇದು ನಿಮ್ಮ ಮನೆ ಮಾತ್ರವಾಗಿದ್ದರೆ ನಾನಿಲ್ಲಿ ಇರಲಾರೆ' ಎಂದು ಮಡಿಕೆಯನ್ನು ಅಲ್ಲೇ ಬಿಟ್ಟು ನಿಂತರು. ಇದನ್ನು ನೋಡಿ ಕೋಪೋದ್ರಿಕ್ತರಾದ ಗಾಂಧಿ ಪತ್ನಿಯ ರಟ್ಟೆ ಹಿಡಿದು ಅವರನ್ನು ದರದರನೆ ಎಳೆದುಕೊಂಡು ಮನೆಯ ಮುಂಬಾಗಿಲತ್ತ ನಡೆದಂತೆ ಗಾಬರಿಗೊಂಡ ಕಸ್ತೂರಬಾ 'ಅಯ್ಯೋ ನಿಮಗೇನಾಗಿದೆ? ನಾನು ನಿಮ್ಮ ಪತ್ನಿ. ನನಗೆ ಇಲ್ಲಿ ಆಶ್ರಯದಾತರು ಯಾರಿದ್ದಾರೆ? ನಾನು ಎಲ್ಲಿಗೆ ಹೋಗಲಿ? ಹೊರಗಿನವರು ನೋಡುವ ಮುನ್ನ ಬಾಗಿಲು ಮುಚ್ಚಿರಿ' ಎಂದು ಕೂಗಿದರು.

ಗಾಂಧಿ ಎಚ್ಚರಗೊಂಡರು. ಕ್ಷಣದ ಮೈಮರೆವಿನಲ್ಲಿ ತಾನೆಂತಹ ಕ್ರೌರ್ಯಕ್ಕೆ ಕೈಹಾಕಿದ್ದೇನೆ ಎಂಬ ಅರಿವಾಗಿ ಅವರು ಅವಮಾನದಿಂದ ಬೆವೆತುಹೋದರು. ಕೂಡಲೇ ಪತ್ನಿಯ ಕ್ಷಮೆ ಕೋರಿ ಅವರನ್ನು ಒಳಗೆ ಕರೆದುಕೊಂಡು ಬಂದು ಪಶ್ಚಾತ್ತಾಪದ ಬೇಗೆಯಿಂದ ಕುಸಿದು ಕುಳಿತರು. ಇಂತಹ ಹಲವು ಪಶ್ಚಾತ್ತಾಪಗಳ ಕ್ಷಣಗಳೇ ಎಚ್ಚತ್ತ ಗಾಂಧಿಯವರನ್ನು ರೂಪಿಸುತ್ತಾ ಹೋದದ್ದು ಎನ್ನಬಹುದು.

## ಭವಿಷ್ಯದ ಚಿಂತೆ: -ಒಂದು ವಾಗ್ವಾದ

ಗಾಂಧಿ ನೆಟಾಲ್‌ನಲ್ಲಿ ಹೋರಾಟ ಸಂಘಟಿಸಿ ಅಲ್ಲಿಂದ ಹಿಂದಿರುಗುವ ಮುನ್ನ ನೆಟಾಲ್‌ನಲ್ಲಿನ ಭಾರತೀಯ ಸಮುದಾಯ ಅವರಿಗೊಂದು ಭವ್ಯ ವಿದಾಯ ಸಮಾರಂಭವನ್ನು ಆಯೋಜಿಸಿ ಬೆಲೆಬಾಳುವ ಉಡುಗೊರೆಗಳನ್ನು ನೀಡಿದರು. ಇದರಲ್ಲಿ ಚಿನ್ನ ಬೆಳ್ಳಿಯ ವಸ್ತುಗಳೂ ಸಾಮಗ್ರಿಗಳೂ ಸೇರಿದ್ದವು. ಇದನ್ನು ಕಂಡು ಗಾಂಧಿ ಗಾಬರಿಯಾದರು. ಈ ಹಿಂದೆ ಭಾರತಕ್ಕೆ ಹೊರಟ ಸಂದರ್ಭದಲ್ಲೂ ಗಾಂಧಿಗೆ ಉಡುಗೊರೆಗಳು ಸಂದಿದ್ದವು. ಅವುಗಳು ತಮ್ಮದಲ್ಲ ಮತ್ತು ಅವು ತಾವು ಹಿಡಿದಿರುವ ಬದುಕಿನ ಹಾದಿಗೆ ಪೂರಕವಲ್ಲ ಎಂದು ಗಾಂಧಿ ಅವನ್ನೆಲ್ಲ ಒಟ್ಟುಗೂಡಿಸಿ ದ. ಆಫ್ರಿಕಾದಲ್ಲಿನ ಭಾರತೀಯರ ಹೋರಾಟ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗಾಗಿ ಒಂದು ನಿಧಿಯಾಗಿ ಸ್ಥಾಪಿಸಿ ಹೋಗಲು ಅವರು ನಿರ್ಧರಿಸಿದರು.

ಆದರೆ ಕಸ್ತೂರಬಾ ಪ್ರತಿಭಟಿಸಿದರು. ಮಕ್ಕಳನ್ನು ಭಿಕಾರಿಗಳನ್ನಾಗಿ ಮಾಡುವ ಹುನ್ನಾರವೇ ನಿಮ್ಮದು? ಇವರಿಗೆ ಮದುವೆಯಾದಾಗ ಸೊಸೆಯಂದಿರಿಗೆ ಚಿನ್ನ ಹಾಕಬೇಡವೇ? ನಿಮ್ಮಂತೆ ಎಲ್ಲರೂ ಸಂನ್ಯಾಸಿಗಳಾಗಿರುವುದಿಲ್ಲ ಎಂದು ಛೇಡಿಸಿದರು. ಅದಕ್ಕೆ ಗಾಂಧಿ ಆ ಕಾಲ ಬಹು ದೂರವಿದೆ. ಹಾಗೆ ಬೇಕಾದರೆ ತಂದು ಕೊಡಲು ನಾನಿಲ್ಲವೇ? ಎಂದು ಗಾಂಧಿ ಸಮಾಧಾನ ಮಾಡಲು ಯತ್ನಿಸಿದರು.

ಇದರಿಂದ ಸಮಾಧಾನಗೊಳ್ಳುವ ಬದಲು ಕಸ್ತೂರಬಾ ಸಿಡಿದೆದ್ದರು. ಹಿಂದೂ ಪತ್ನಿಯ ಸತಿಧರ್ಮದ ಸೈರಣೆಯೆಲ್ಲ ಮೀರಿತ್ತು. ಅವರಿಗೂ ಗಂಡ ಕುಟುಂಬದ ಮೇಲೆ ಹೇರುತ್ತಿರುವುದಾಗಿ ಅನಿಸಿ ತನ್ನ ಆದರ್ಶ ಬದುಕಿನ ಭಾರಗಳಿಂದ ನೊಂದವರಂತೆ ಕೂಗಿದರು: 'ನೀವು ಚಿನ್ನ ಮಾಡಿಸಿ ತಂದುಕೊಡುವವರು? ನನ್ನ ಚಿನ್ನವನ್ನೆಲ್ಲ ಹೊತ್ತೊಯ್ದವರು ನೀವಲ್ಲವೇ? ಈ ಸರವನ್ನು ಜನ ಉಡುಗೊರೆಯಾಗಿ ಕೊಟ್ಟಿರುವುದು ಮಹಿಳೆಯಾದ ನನಗೆ. ಅಷ್ಟೂ ಗೊತ್ತಾಗುವುದಿಲ್ಲವೇ ನಿಮಗೆ?'

ಗಾಂಧಿ ಹೆಂಡತಿಯಿಂದ ಇಷ್ಟು ಬಲವಾದ ಪ್ರತಿರೋಧವನ್ನು ಎದುರಿಸಿದ್ದು ಆಗಲೇ. ಅವರು ವಾದದ ದಾರಿ ಬದಲಿಸಿದರು: 'ನೋಡು ಅದನ್ನು ಕೊಟ್ಟಿರುವುದು ನನ್ನ ಸಾರ್ವಜನಿಕ ಸೇವೆಗೆ ಪ್ರತಿಫಲವಾಗಿ!'

ಕಸ್ತೂರಬಾ ತಿರುಗಿ ಹೇಳಿದರು: 'ನಿಮ್ಮ ಸಾರ್ವಜನಿಕ ಸೇವೆ ನಾನಿಲ್ಲದಿದ್ದರೆ ನಿಮ್ಮಿಂದ ಆಗುತ್ತಿತ್ತೇ? ಅದರಲ್ಲಿ ನನ್ನದೂ ಪಾಲಿದೆ!'

ಗಾಂಧಿ ಮಾತಿಗೆ ಹುಡುಕಾಡಿದರು. ಕೊನೆಗೆ ತಮ್ಮ ಮನಸ್ಸಿನಲ್ಲಿದ್ದುದನ್ನು ಹೇಳಿದರು: 'ಸೇವೆಗೆ ಪ್ರತಿಫಲ ಪಡೆಯುವುದು ಅನೈತಿಕ. ಆಗ ಅದು ಸೇವೆ ಅನ್ನಿಸಿಕೊಳ್ಳುವುದಿಲ್ಲ.'

ಈ ಚರ್ಚೆಯಲ್ಲಿ ಎಂದಿನಂತೆ ಗಾಂಧಿಯ ಈ ಮಾತೇ ಕೊನೆಯ ಮಾತಾಯಿತು. ಗಾಂಧಿ ಹಳೆಯ ಉಡುಗೊರೆಗಳೂ ಸೇರಿದಂತೆ ಎಲ್ಲ ಉಡುಗೊರೆಗಳನ್ನೂ ಸೇರಿಸಿ ಮೌಲ್ಯಮಾಪನ ಮಾಡಿಸಿ ತಮ್ಮ ಬಯಕೆಯಂತೆ ಒಂದು ಕ್ಷೇಮನಿಧಿ ಮಾಡಿ ಅದರ ಉಸ್ತುವಾರಿಗಾಗಿ ಒಂದು ಟ್ರಸ್ಟ್‌ನ್ನು ಸ್ಥಾಪಿಸಿದರು.

## ಗಾಂಧಿ ಬ್ರಹ್ಮಚರ್ಯ ವ್ರತ: ಕಸ್ತೂರಬಾ ಒಪ್ಪಿಗೆ

ಝುಲು ದಂಗೆ ನಡೆದ ಝುಲುಲ್ಯಾಂಡ್ ಜನಸಂಖ್ಯೆ ವಿರಳವಾದ ಗಿರಿ ಕಣಿವೆಗಳ ಪ್ರದೇಶವಾಗಿದ್ದು ನಿಶ್ಶಬ್ದತೆಯಲ್ಲಿ ಗಾಯಾಳುಗಳೊಂದಿಗೆ ದೀರ್ಘ ದೂರಗಳನ್ನು ಕ್ರಮಿಸಬೇಕಾದ ಹಲವು ಸಂದರ್ಭಗಳು ಒದಗಿ ಗಾಂಧಿ ಮನುಷ್ಯನ ಬದುಕಿನ ಬಗ್ಗೆ, ತಮ್ಮ ಬದುಕಿನ ಬಗ್ಗೆ ಆಳವಾದ ಆಲೋಚನೆಗಳಲ್ಲಿ ತೊಡಗುವ ಅವಕಾಶ ಉಂಟಾಯಿತು. ಗೀತೆ ಅವರಲ್ಲಿ, ಮನುಷ್ಯನ ಬದುಕಿನ ಗುರಿ, ಸತ್ಯದರ್ಶನ ಅಥವಾ ಸ್ವಸ್ವರೂಪ ದರ್ಶನ ಎಂಬುದನ್ನು ಮತ್ತೆ ಮತ್ತೆ ನೆನಪಿಸಿತು. ಸತ್ಯದರ್ಶನಕ್ಕೆ ಸಾಧನವಾದ ಅಂತಃಕರಣವನ್ನು ಪೂರ್ಣವಾಗಿ ತೆರೆಯುವ ಮಾನವ ಸೇವೆಗೆ ಬೇಕಾದ ಏಕಾಗ್ರತೆ ಸಾಧಿಸಲು ಮತ್ತು ಇದಕ್ಕೆ ಅಡೆತಡೆಯಾಗುವ ಕ್ಲೇಶಗಳನ್ನು ಸೃಷ್ಟಿಸುವ ಸಂತಾನವೃದ್ಧಿಗೆ ಕಡಿವಾಣ ಹಾಕಲು ಬ್ರಹ್ಮಚರ್ಯವೇ ಮದ್ದೆಂಬ ದೃಢನಿಶ್ಚಯಕ್ಕೆ ಅವರು ಬಂದರು. ಜೊತೆಗೆ ಕಸ್ತೂರಬಾ ರಕ್ತಹೀನತೆಯಿಂದ ಬಳಲಿ ಬೆಂಡಾಗಿ ಒಮ್ಮೆ ಪ್ರಾಣಾಪಾಯದಿಂದ ಪಾರಾಗಿದ್ದರು. ಹೀಗಾಗಿ ಬಹುಕಾಲ ಅವರ ಮನಸ್ಸನ್ನು ಆವರಿಸಿ ಅಂತಿಮ ತೀರ್ಮಾನಕ್ಕೆ ಬರಲಾಗದಿದ್ದ ಬ್ರಹ್ಮಚರ್ಯ ಪಾಲನೆಯ ಪ್ರತಿಜ್ಞೆ ಸ್ವೀಕರಿಸಲು ಅವರು ಸಿದ್ಧರಾದರು. ಫೀನಿಕ್ಸ್‌ಗೆ ಬಂದು ಪತ್ನಿ ಕಸ್ತೂರಬಾರೊಂದಿಗೆ ಸಮಾಲೋಚಿಸಿದರು. ಬಾ 'ನಿಮ್ಮಿಚ್ಛೆ' ಎಂದು ಇದಕ್ಕೆ ಒಪ್ಪಿಗೆ ನೀಡಿದರು. ಆಗ ಅವರಿಬ್ಬರಿಗೂ ಮುವ್ವತ್ತೇಳರ ಪ್ರಾಯ.

## ಕಸ್ತೂರಬಾಗೆ ಗೋಮಾಂಸ ಕಷಾಯ: ಗಾಂಧಿ ವಿಧಿಸಿದ ಪಥ್ಯ

ಕೆಲ ದಿನಗಳ ಹಿಂದಷ್ಟೇ ಸೆರೆಮನೆವಾಸ ಮುಗಿಸಿ ಬಂದು ಸತ್ಯಾಗ್ರಹಿಗಳ ಬಾಕಿ ಮೊಕದ್ದಮೆಗಳ ಕಡೆ ಗಮ,ನ ಹರಿಸಿದ್ದ ಹೊತ್ತಿನಲ್ಲೇ ಕಸ್ತೂರಬಾ ಅವರ ಸ್ಥಿತಿ ಚಿಂತಾಜನಕವಾಗಿ ಅವರಿಗೆ ಮದ್ಯ ಮತ್ತು ಗೋಮಾಂಸ ಕಷಾಯ ಕುಡಿಸದಿದ್ದರೆ ಉಳಿಯುವುದು ಕಷ್ಟವೆಂದು ಡಾ. ನಂಜಿ ಗಾಂಧಿಯವರಿಗೆ ದೂರವಾಣಿ ಕರೆ ಮಾಡಿ ತಿಳಿಸಿದರು. ಕೂಡಲೇ ಡರ್ಬಾನ್‌ಗೆ ಧಾವಿಸಿ ಬಂದರು ಗಾಂಧಿ. ಆ ಹೊತ್ತಿಗಾಗಲೇ ಬಾ ಅವರಿಗೆ ಗೋಮಾಂಸ ಕಷಾಯ ಕುಡಿಸಿರುವುದನ್ನು ತಿಳಿದ ಅವರು ಬೇಸರಗೊಂಡು ವೈದ್ಯರ ವರ್ತನೆಯನ್ನು ಆಕ್ಷೇಪಿಸಿದರು. ಆದರೆ ವೈದ್ಯರು ತಮ್ಮ ಮಾತು ಕೇಳಲು ಸಿದ್ಧವಿಲ್ಲದಿದ್ದರೆ ತಾವು ಬಾರನ್ನು ತಮ್ಮ ಚಿಕಿತ್ಸಾಲಯದಲ್ಲಿ ಇರಿಸಿಕೊಳ್ಳಲು ಸಾಧ್ಯವಿಲ್ಲ ಎಂದರು. ಬಾ ಅವರ ಅಭಿಪ್ರಾಯ ಕೇಳಿದರು. ಬಾ ಮದ್ಯ ಅಥವಾ ಗೋಮಾಂಸ ಸೇವಿಸುವ ಬದಲು ಪತಿಯ ತೊಡೆಯ ಮೇಲೆ ಸಾಯಲು ಸಿದ್ಧ ಎಂದರು. ಗಾಂಧಿ ತಮ್ಮ ಜೊತೆಗಿದ್ದ ಮಗ ಮಣಿಲಾಲನ ಅಭಿಪ್ರಾಯ ಕೇಳಿದರು. ಆತನೂ ಒಪ್ಪಿಗೆ ನೀಡಲಿಲ್ಲ. ಈಗ ಗಾಂಧಿ ಬಾ ಅವರನ್ನು ಫೀನಿಕ್ಸ್‌ಗೆ ಒಯ್ಯಲು ತೀರ್ಮಾನಿಸಿದರು. ಫೀನಿಕ್ಸ್ ರೈಲ್ವೇ ನಿಲ್ದಾಣಕ್ಕೆ ಡೋಲಿಯವರೊಂದಿಗೆ ಬರಲು ವೆಸ್ಟ್ ಅವರಿಗೆ ಕಾಗದ ಕಳಿಸಿ, ಡಾ. ನಂಜಿಯವರು ಪದೇ ಪದೇ ಮಾಡಿದ ಮನವಿಯನ್ನು ಮಾನ್ಯ ಮಾಡದೆ ಪತ್ನಿಯನ್ನು ಸುರಿಯುತ್ತಿದ್ದ ಮಳೆಯಲ್ಲಿ ಒಂದು ರಿಕ್ಷಾದಲ್ಲಿ ಕೂರಿಸಿಕೊಂಡು ಡರ್ಬಾನ್ ನಿಲ್ದಾಣಕ್ಕೆ ಹೊರಟರು. ಅಲ್ಲಿ ರೈಲ್ವೇ ಡಬ್ಬಿಯ ಬಳಿಗೆ ಗಾಂಧಿ ಮಗನ ನೆರವಿನೊಂದಿಗೆ ಬಾರನ್ನು ಹೊತ್ತೇ ತಂದು ಡಬ್ಬಿಯಲ್ಲಿ ಕೂರಿಸಿ ಫೀನಿಕ್ಸ್ ತಲುಪಿದರು.

ಫೀನಿಕ್ಸ್ ಆಶ್ರಮದ ತಮ್ಮ ಕುಟೀರದಲ್ಲಿ ಗಾಂಧಿ ಪತ್ನಿಗೆ ನಿಸರ್ಗ ಚಿಕಿತ್ಸೆ ಆರಂಭಿಸಿದರು. ಅವರ ಜಲಚಿಕಿತ್ಸೆಯಿಂದ ಬಾ ಅವರ ಸಾಮಾನ್ಯ ಆರೋಗ್ಯ ಕೊಂಚ ಸುಧಾರಿಸಿತಾದರೂ, ರಕ್ತಸ್ರಾವ ನಿಲ್ಲಲಿಲ್ಲ. ಕೊನೆಗೆ ಗಾಂಧಿ, ಬಾ ಅವರಿಗೆ ಉಪ್ಪು ಮತ್ತು ಬೇಳೆಯನ್ನು ಬಿಡಲು ಸೂಚಿಸಿದರು. ಬಾ ಅದು ಕಷ್ಟ, ನಿಮಗೆ ಯಾರಾದರೂ ಹೇಳಿದರೆ ನೀವು ಬಿಡುವಿರಾ? ಎಂದು ಮರುಪ್ರಶ್ನೆ ಹಾಕಿದರು. ಕೂಡಲೇ ಗಾಂಧಿ ಉಪ್ಪು ಮತ್ತು ಬೇಳೆಗಳನ್ನು ಒಂದು ವರ್ಷದ ಕಾಲ ತ್ಯಜಿಸುವ ಪ್ರತಿಜ್ಞೆಯನ್ನು ಪ್ರಕಟಿಸಿಬಿಟ್ಟರು. ಇದರಿಂದ ಆಘಾತಗೊಂಡ ಬಾ ಪರಿಪರಿಯಾಗಿ ಬೇಡಿಕೊಂಡರೂ ಗಾಂಧಿ ತಮ್ಮ ಪ್ರತಿಜ್ಞೆಯನ್ನು ಹಿಂತೆಗೆದುಕೊಳ್ಳಲು ನಿರಾಕರಿಸಿ ಬಾರಿಂದ 'ಕೆಟ್ಟ ಹಠವಾದಿ' ಎಂದು ಛೇಡಿಸಿಕೊಂಡರು. ಒಂದು ವರ್ಷ ಮಾತ್ರವಲ್ಲ, ಹತ್ತು ವರ್ಷ ಗಾಂಧಿ ಬೇಳೆ ತಿನ್ನಲಿಲ್ಲ.

ಗಾಂಧಿಯ ಪ್ರತಿಜ್ಞೆಯ ಪರಿಣಾಮವಾಗಿ ಕೊನೆಗೂ ಉಪ್ಪು ಮತ್ತು ಬೇಳೆ ತ್ಯಜಿಸಿದ ಬಾ, ಪತಿಯ ಉಪಚಾರದಲ್ಲಿ ನಿಧಾನವಾಗಿ ಚೇತರಿಸಿಕೊಂಡರು. ಹಣ್ಣು ಮತ್ತು ತರಕಾರಿ ತಿನ್ನಲು ಆರಂಭಿಸಿದರು. ಮುಗಿದ ಕಥೆಯೆಂದು ವೈದ್ಯರಿಂದ ಕೈಬಿಡಲ್ಪಟ್ಟಿದ್ದ ಬಾ ಅವರು ಸಾಮಾನ್ಯ ಊಟ ಮಾಡಬಲ್ಲಷ್ಟು ಗುಣಮುಖರಾಗತೊಡಗಿದ್ದು ಎಲ್ಲರ ಸಂತೋಷಕ್ಕೆ ಕಾರಣವಾಯಿತು. ಇದು ೧೯೧೦ರ ಹೊಸ ವರ್ಷದ ಸಂದರ್ಭದಲ್ಲಿ ಸಂಭ್ರಮದಿಂದ ಆಚರಿಸಲರ್ಹವಾದ ಪವಾಡವೇ ಆಗಿತ್ತು. ಆದರೆ ಗಾಂಧಿ ಕಸ್ತೂರಬಾರ ಅಪೇಕ್ಷೆಗೆ ವಿರುದ್ಧವಾಗಿ ಅವರನ್ನು ಬಿಟ್ಟು ಸತ್ಯಾಗ್ರಹದ ಕೆಲಸಗಳಿಗಾಗಿ ಜೊಹಾನ್ಸ್‌ಬರ್ಗ್‌ಗೆ ಹೊರಡಲೇಬೇಕಾದ ತುರ್ತು ಸಂದರ್ಭ ಸೃಷ್ಟಿಯಾಗಿತ್ತು.

## ವಿವಾಹ ಶಾಸನದ ವಿವಾದ : ಸೆರೆಮನೆ ಸೇರಿದ ಕಸ್ತೂರಬಾ

ತೀರ್ಪು ನೀಡಿದ ನ್ಯಾ. ಸರ್ಲೆ ಪ್ರಕಾರ ಬಹುಪತ್ನಿತ್ವಕ್ಕೆ ಅವಕಾಶವಿರುವ ಎಲ್ಲ ಧಾರ್ಮಿಕ ವಿವಾಹಗಳೂ ದ.ಆಫ್ರಿಕಾದಲ್ಲಿ ಅಸಾಧು ಎನಿಸುತ್ತವೆ. ಅಂದರೆ ಅಧಿಕೃತ ನೋಂದಣಿಯ ಕ್ರೈಸ್ತ ವಿವಾಹಗಳ ಹೊರತಾಗಿ ಮಿಕ್ಕೆಲ್ಲವೂ ಅನೂರ್ಜಿತವಾಗುತ್ತವೆ. ಇದು ಬಹುಧರ್ಮೀಯರಿದ್ದ ಭಾರತೀಯ ಸಮುದಾಯದಲ್ಲಿ ಕೋಲಾಹಲವನ್ನೇ ಉಂಟುಮಾಡಿತು. ವಿವಾಹಿತ ಭಾರತೀಯ ಮಹಿಳೆಯರು, 'ಹಾಗಾದರೆ ನಾವು ನಮ್ಮ ಗಂಡಂದಿರಿಗೆ ಏನಾಗಿದ್ದೇವೆ? ನಮ್ಮ ಮಕ್ಕಳು ಹಾಗಾದರೆ ಅನೈತಿಕ ಸಂಬಂಧದ ಮಕ್ಕಳೇ?' ಎಂಬ ಪ್ರಶ್ನೆ ಕೇಳತೊಡಗಿದರು. ಕಸ್ತೂರಬಾ ತಮ್ಮ ಮಕ್ಕಳ ಹಿತದೃಷ್ಟಿಯಿಂದಲಾದರೂ ತಾವು ಭಾರತಕ್ಕೆ ಹಿಂದಿರುಗುವುದು ಒಳಿತು ಎಂದು ಗಾಂಧಿಯನ್ನು ಒತ್ತಾಯಿಸತೊಡಗಿದರು. ಇದಕ್ಕೆ ಗಾಂಧಿ ಇದು ಹೇಡಿತನವೆನ್ನಿಸಿಕೊಂಡೀತು ಎಂದು ಉತ್ತರಿಸಿದಾಗ ಕಸ್ತೂರಬಾ, 'ಹಾಗಾದರೆ ಸತ್ಯಾಗ್ರಹ ಆರಂಭಿಸಿ; ನಾನೂ ಅದರಲ್ಲಿ ಸೇರುವೆ' ಎಂದರು. ಈ ಹೊತ್ತಿಗಾಗಲೇ ಬಾ ತಮ್ಮ ಇತರ ಆಶ್ರಮವಾಸಿ ಮಹಿಳೆಯರೊಂದಿಗೆ ಚರ್ಚಿಸಿ ಅವರನ್ನೂ ಪ್ರತಿಭಟನೆಗೆ ಸಿದ್ಧಗೊಳಿಸಿದ್ದರು. 'ಸೆರೆಮನೆವಾಸ ಕಷ್ಟ; ಒಮ್ಮೆ ಸತ್ಯಾಗ್ರಹಕ್ಕೆ ಇಳಿದರೆ ಕಷ್ಟವೆನಿಸಿದಾಗ ಹಿಂತಿರುಗುವಂತಿಲ್ಲ!' ಎಂಬ ಗಾಂಧಿ ಎಚ್ಚರಿಕೆಯ ಮಾತಿನ ಹೊರತಾಗಿಯೂ ಅವರು ಸೆರೆಮನೆವಾಸಕ್ಕೆ ಸಿದ್ಧರಾದರು.

ಹೊಸ ಶಾಸನದ ಪ್ರಕಾರ ಏಷ್ಯನ್ನರು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ರಹದಾರಿ ಪತ್ರವಿಲ್ಲದೆ ಪ್ರವೇಶಿಸುವುದು ಅಪರಾಧವಾಗಿತ್ತು. ಫೀನಿಕ್ಸ್‌ನಿಂದ ಹೊರಟ ಹದಿನಾರು ಸದಸ್ಯರ ತಂಡದಲ್ಲಿ ಕಸ್ತೂರಬಾ ಮಗ ರಾಮದಾಸ್ ಸೇರಿದಂತೆ ಹದಿನಾರು ಜನ ಸ್ತ್ರೀ–ಪುರುಷ ಸದಸ್ಯರಿದ್ದರು, ಅದು 'ಕಾಫಿರ'(ಕೆಳ ವರ್ಗದವರು–ಆಫ್ರಿಕಾದ ಕಪ್ಪು ಜನ)ರಿಗೆಂದೇ ಸರ್ಕಾರ ಓಡಿಸುತ್ತಿದ್ದ ಮೂರನೇ ದರ್ಜೆ ರೈಲು ಗಾಡಿ ಹತ್ತಿ ಗಡಿ ಪಟ್ಟಣ ವೋಲ್ಕ್ಸ್‌ರಸ್ಟ್‌ನಲ್ಲಿ ಇಳಿದಾಗ ಅವರನ್ನೆಲ್ಲ ಬಂಧಿಸಿ ವಿಚಾರಣೆಗೊಳಪಡಿಸಲಾಯಿತು. ಎಲ್ಲರೂ ತಾವು ಸ್ವಯಂಪ್ರೇರಿತ ಅಪರಾಧಿಗಳೆಂದು ಹೇಳಿದ್ದರಿಂದ ಅವರೆಲ್ಲರಿಗೂ ಮೂರು ತಿಂಗಳ ಸಶ್ರಮ ಶಿಕ್ಷೆ ವಿಧಿಸಿ ಮರಿಟ್ಜ್‌ಬರ್ಗ್‌ನ ಸೆರೆಮನೆಗೆ ದೂಡಲಾಯಿತು. ಇದು ಪ್ರಾಂತ್ಯದೆಲ್ಲೆಡೆ ಸುದ್ದಿಯಾಗಿ ಭಾರತೀಯ ಸಮುದಾಯದ ಮಧ್ಯೆ ತಲ್ಲಣವನ್ನು ಉಂಟುಮಾಡಿತು

***

ಡಿಸೆಂಬರ್ ೧೮ರಂದು ಗಾಂಧಿ ಮತ್ತು ಪೊಲಾಕ್–ಕಲೆನ್‌ಬಾಕ್ ಅವರನ್ನು ಬಿಡುಗಡೆ ಮಾಡಿದರೆ ೨೧ರಂದು ಕಸ್ತೂರಬಾ ಮತ್ತವರ ಜೊತೆಯ ಮಹಿಳಾ ಕೈದಿಗಳನ್ನು ಬಿಡುಗಡೆ ಮಾಡಲಾಯಿತು. ಕಸ್ತೂರಬಾ ಅವರನ್ನು ಸ್ವಾಗತಿಸಲು ಸೆರೆಮನೆ ಬಳಿ ಹೋಗಿದ್ದ ಪೊಲಾಕ್‌ರ ಪತ್ನಿ ಮಿಲಿ ಪೊಲಾಕ್ ಬಾ ಅವರು ಗುರುತು ಸಿಗದಷ್ಟು ಕೃಶವಾಗಿ ಮೂಳೆ ಚಕ್ಕಳದಂತೆ ಕಾಣುತ್ತಿದ್ದರು ಎಂದು ತಮ್ಮ ನೆನಪುಗಳಲ್ಲಿ ದಾಖಲಿಸಿದ್ದಾರೆ. ಎಂಟು ವಾರಗಳ ಸಶ್ರಮ ಶಿಕ್ಷೆಯ ಆ ಅವಧಿಯಲ್ಲಿ ತಮಗೊಲ್ಲದ ಆಹಾರವನ್ನು ತ್ಯಜಿಸಿ ಮತ್ತು ಸತತವಾಗಿ ದುಡಿದು ಹಣ್ಣಾಗಿ ಹೋಗಿದ್ದರು ಎಂದವರು ಬರೆದಿದ್ದಾರೆ.

ಕತೆ

# ಚುಕ್ಕಿ ಮತ್ತು ಬಯಲು

–ಗೀತಾ ವಸಂತ



ಚಿತ್ರ : ಗುಜ್ಜಾರ್

ಉರಿಬಿಸಿಲಲ್ಲಿ ಬೃಹತ್ ಪೆಂಡಾಲಿನ ಕೆಳಗೆ ಬೇಯುತ್ತ ಕುಳಿತಿದ್ದಳು ಸುನೀತಾ. ಕೆನ್ನೆಗುಂಟ ಇಳಿಯುತ್ತಿದ್ದ ಬೆವರನ್ನು ಕರ್ಚೀಫಿನಲ್ಲಿ ಒತ್ತಿ ಒತ್ತಿ ನಿಲ್ಲಿಸುವ ಸನ್ನಾಹದಲ್ಲಿದ್ದಳು. ರಾಜಕಾರಣಿಗಳ ಭಾಷಣ, ಸನ್ಮಾನ, ಕೊಂಬು, ಕಹಳೆ ಎಲ್ಲ ಮುಗಿದು ಜನ ಅವರ ಹಿಂದೇ ಕಿತ್ತೆದ್ದುಹೋದ ಮೇಲೆ 'ಇದೀಗ ಕವಿಗೋಷ್ಠಿ' ಎಂದು ನಿರೂಪಕಿ ಗಂಟಲಾರಿದ ಧ್ವನಿಯಲ್ಲಿ ಕಿರುಚುವುದು ಯಾರಿಗೂ ಕೇಳಿಸಲಿಲ್ಲ. ಆದರೆ ಅದಾಗಲೇ ನೇಪಥ್ಯದಲ್ಲಿ ನಿಂತು ಕಾಯುತ್ತಿದ್ದ ಕವಿ–ಕವಯತ್ರಿಯರೆಲ್ಲ ಲಗುಬಗೆಯಿಂದ ಎಲ್ಲರಿಗೂ ಕಾಣಿಸುವಂತೆ ಮುಂದಿನ ಸಾಲಿನಲ್ಲಿ ಆಸೀನರಾಗಲು ದೌಡಾಯಿಸಿದರು. ಕೀಚಲು ದನಿಯ ನಿರೂಪಕಿ ಕವಿಗಳನ್ನು ಅವರ ಮಹಾತ್ಮೆಗಳೊಂದಿಗೆ ಪರಿಚಯಿಸುವುದು, ಅವರೆಲ್ಲ ಹೆಮ್ಮೆಯಿಂದ ಬೀಗುತ್ತ ಕವಿತೆಯೋದುವುದು, ಅದಕ್ಕೆ ಚಪ್ಪಾಳೆಯ ಅಲೆಯೇಳುವುದು.. ಈ ಎಲ್ಲವೂ ಹಿಂದಿನ ಸಾಲಲ್ಲಿ ಕುಳಿತ ಸುನೀತಾಳ ಕಿವಿದೆರೆಯ ಮೇಲೆ ಹಾಯ್ದು ಹೋಗುತ್ತಿದ್ದರೂ ಒಳಗಿಳಿಯುತ್ತಿರಲಿಲ್ಲ. ಇಂಥದೊಂದು ಬೃಹತ್ ಸಮಾವೇಶದಲ್ಲಿ ಕವಿತೆಯೋದಬೇಕೆಂಬ ಅವಳ ಕಿಶೋರದ ಕನಸು ನನಸಾಗುತ್ತಿರುವ ಈ ಕ್ಷಣವು ಅವಳೊಳಗೊಂದು ವಿಚಿತ್ರ ಹುಯಿಲನ್ನೇ ಸೃಷ್ಟಿಸಿತ್ತು.

ಕವಿತೆಯೆಂದರೆ ಅವಳಿಗೆ ಯಾವತ್ತೂ ನೆನಪಾಗುವುದು ಬೆಂಕಿ. ಧೋಧೋ ಮಳೆಹೊಯ್ಯುವಾಗ ಅಖಂಡ ಕತ್ತಲು ಕವಿದು ಜಿರ್ರೆನ್ನುವ ಜೀರುಂಡೆಗಳ ಸದ್ದಿನಲ್ಲಿ ಜಗತ್ತು ಸ್ತಬ್ಧವಾಗಿದೆಯೆನಿಸುವಾಗ ಹೊಡತಲ ಬೆಂಕಿಯ ಮುಂದೆ ಮೈಕಾಸುತ್ತ ಮೈಮರೆಯುವ ಬಾಲ್ಯದ ದಿನಗಳು ಚಿತ್ತಭಿತ್ತಿಯಲ್ಲಿ ಮೂಡುತ್ತ ಹೋದವು. ಆ ಕ್ಷಣಕ್ಕೆ ಅವಳು ಕೂತ ವೇದಿಕೆಯ ವಿದ್ಯಮಾನಗಳೆಲ್ಲ ಬರೀ ಭ್ರಮೆಯೆಂದು ಅನಿಸುತ್ತಾ ಆ ಕಾಡು ಕಣಿವೆಗಳ ಆಳದಲ್ಲಿ ವಿಸ್ಮೃತಿಗೆ ಜಾರಿದ್ದ ಹೊಡತಲಿನ ಬೆಂಕಿಯ ಚಟಚಟ ಶಬ್ದವೇ ಸತ್ಯವೆನಿಸತೊಡಗಿತು. ಬೆಂಕಿಗೆ ಬೆಚ್ಚಗಾಗುತ್ತ ಅರೆನಿದ್ದೆ ಅರೆ ಉನ್ಮಾದದ ಸುಷುಪ್ತಿಯೊಳಗೊಳಗೆ ಇಳಿದು ಹೋಗಿ ಹೊರಬಂದ ಅನುಭವ. ಆಗೆಲ್ಲ ಅವಳಿಗೆ ಮಾಯಕವೆನಿಸುತ್ತಿತ್ತು. ಈ ಮೈಮರೆಯುವಿಕೆಯ ಆಳದಲ್ಲಿ ಚೇತನವೊಂದು ಎಚ್ಚರಾಗುವ ಈ ಹೊಸ ಸುಖವು ಅವಳನ್ನು ಆಕರ್ಷಿಸುತ್ತಲೇ ಹೋಯಿತು. ರಾತ್ರಿಯೆಲ್ಲ ಬೆಂಕಿಯ ನೆರಳು ಬೆಳಕಿನಾಟ ಕನಸಲ್ಲೂ ಸುಳಿಯುತ್ತಿತ್ತು. ಆಗೆಲ್ಲ ಬೆಳಿಗ್ಗೆಯಾಯಿತೆಂದರೆ ಸುನೀತಾಳಿಗೆ ತೆಳ್ಳವ್ವು ಎರೆಯುವ ಕೆಲಸ. ಕಾದ ಹೆಂಚಿನ ತುದಿಗೆ ಹಿಟ್ಟುಹೊಯ್ದು ಅದನ್ನು ಬಾಳೆಲೆಯಲ್ಲಿ ತೀಡಿ ಆಕಾಶದಂತೆ ವಿಸ್ತರಿಸುತ್ತಾ ತೆಳ್ಳಗಿನ ಆ ದೋಸೆಯನ್ನು ನಾಜೂಕಾಗಿ ಎತ್ತಿ ನೀಡುವ ಕೆಲಸದಲ್ಲವಳು ನಿಪುಣೆ. ಬೆಂಕಿಯ ಮುಂದೆ ಕೂಡುವ ಹಿತಾನುಭವದಿಂದ ಆಕೆ ತಪ್ಪಿಸಿಕೊಂಡವಳಲ್ಲ.

ಅಂದು ಅವಳ ಬದುಕಿನ ಮೊದಲ ಕವಿಗೋಷ್ಠಿಯ ದಿನ. ಒಲೆಯ ಉರಿ ಜಾಸ್ತಿಯಾಗಿ ತೆಳ್ಳವ್ವು ಕೆಂಪಾಗಿ ಸೀದುಹೋಗಲು ಶುರುವಾದರೂ ಅವಳ ಗ್ಯಾನ ಎಲ್ಲೋ ತಾಳ ತಪ್ಪಿದಂತಿತ್ತು. ಒಂಭತ್ತರ ಬಸ್ಸು ತಪ್ಪಿಹೋದರೆ ಎಂಬ ಧಾವಂತ. ತೋಟದಸಾಲು ದಾಟಿ ಆ ದೊಡ್ಡ ಗುಡ್ಡ ಹತ್ತಿ ಮೂರ್ನಾಲ್ಕು ತಿರುವುಗಳಲ್ಲಿ ತಿರುಗಿ ಬಸ್ ನಿಲುಗಡೆಯ ಸ್ಥಳಕ್ಕೆ ಹೋಗಬೇಕು. ಎಷ್ಟೋ ಸಲ ಕೊನೇ ತಿರುವಿನ ಹತ್ತಿರಹತ್ತಿರ ಹೋಗುತ್ತಿದ್ದಾಗ ಬಸ್ ತಪ್ಪಿದ್ದೂ ಇದೆ. ಈ ಕವಿಗೋಷ್ಠಿ ತಪ್ಪಿಹೋದರೆ ತನ್ನ ಕನಸುಗಳೆಲ್ಲ ತೆಳ್ಳವ್ವಿನಂತೆ ಕರಕಲಾಗಿ ಹೋಗುವುದೇ ಸೈ ಅನಿಸಿತ್ತವಳಿಗೆ. ರಾತ್ರಿಯಿಡೀ ಕವಿತೆಯನ್ನು ತಿದ್ದಿತೀಡಿ ಬರೆದಿಟ್ಟುಕೊಂಡಿದ್ದಳು. ಬಿಳಿಹಾಳೆಯ ಸುತ್ತ ಕಪ್ಪು ಬಾರ್ಡರ್ ಹಾಕಿ ಶೃಂಗರಿಸಿದ್ದೇನು.. ಕೆಂಪುಶಾಯಿಯಲ್ಲಿ ಹೆಡ್ಡಿಂಗ್ ಬರೆದ್ದೇನು... ಅದೇ ಕೆಂಪಿನಲ್ಲಿ ಕವಿತೆಯ ಕೆಳಗೆ ತನ್ನ ಹೆಸರು ಮೂಡಿಸುವಾಗ ವಿಚಿತ್ರ ರೋಮಾಂಚನವಾಗಿತ್ತು. ಹೆಸರಿನ ಕೊನೆಯಲ್ಲಿ ಅಚಾನಕ್ಕಾಗಿ ಇಟ್ಟ ಚುಕ್ಕಿ ಅವಳನ್ನು ಚಕಿತಗೊಳಿಸಿತ್ತು. ಆ ಚುಕ್ಕಿ ತನ್ನದೇ ಪ್ರತಿರೂಪವೆನಿಸತೊಡಗಿತ್ತು.

> ಸುನೀತಾಗೆ ತೊಗಲು ಬೇಯುವ ವಾಸನೆ ಅಡರತೊಡಗಿತು. 'ಕುಂಭ ಬೆಂದಿತ್ತು ಹಂಸೆ ಹಾರಿತ್ತು ಗುಹೇಶ್ವರಾ' ಎಂಬ ಅಲ್ಲಮನ ನುಡಿ, ಪ್ರಜ್ಞೆಯ ತೆಳವನ್ನೆಲ್ಲ ಆವರಿಸತೊಡಗಿತು. ಇದ್ದ ಕಸುವನ್ನೆಲ್ಲ ಒಟ್ಟುಗೂಡಿಸಿ ರೆಕ್ಕೆ ಬಿಚ್ಚಿ ಹಾರಲೇಬೇಕೆಂಬ ಯಾವುದೋ ಮೊರೆತ ತೀವ್ರವಾಗುತ್ತಲೇ ಹೋಯಿತು. ಅವಳು ಮೆಲ್ಲಗೆ ಅಲ್ಲಿಂದ ಎದ್ದು ಬಂದದ್ದು ಯಾರಿಗೂ ತಿಳಿಯಲಿಲ್ಲ.

ಕವಿತೆಯೆನ್ನುವುದೇ ಒಂದು ರಹಸ್ಯವಾಗಿರುವಾಗ ಹೀಗೆ ತಿದ್ದಿ ತೀಡಿದ ಕವಿತೆಗಳನ್ನು ಯಾರಿಗೂ ಕಾಣದಂತೆ ಕಾಯ್ದಿಡುವುದೇ ಸುನೀತಾಗೆ ಸವಾಲಾಗತೊಡಗಿತು. ತನ್ನೊಳಗಿನ ಬೆಂಕಿ ಯಾರಿಗೂ ಕಾಣಬಾರದು. ಕಂಡರೆ ಸುಟ್ಟುಕೊಂಡಾರು ಎಂಬ ಆತಂಕ ಅವಳಿಗೆ. ಮರಿ ಹಾಕಿದ ಬೆಕ್ಕು ಮರಿಗಳನ್ನು ಬೆಚ್ಚಗೆ ಯಾರಿಗೂ ಕಾಣದಂತೆ ಅವಿತಿಡಲು ಪಡುವ ಪಡಿಪಾಟಲು ಅವಳಿಗೆ ನೆನಪಾಗುವುದು. ಕವಿತೆಯು ಆರಾಮಾಗಿ ಮೈಚಾಚಿಕೊಂಡು ಬಿದ್ದುಕೊಂಡ ಹಾಳೆಯನ್ನು ಮಡಚಿ ಮಡಚಿ ಒಂದು ಚುಕ್ಕೆಯಂತಾಗಿಸಿ ಅವಿತಿಟ್ಟರೂ ಆ ಚುಕ್ಕಿಯೇ ಚಂದ್ರನಾಗಿ, ಸೂರ್ಯನಾಗಿ, ನದಿಯಾಗಿ, ಪರ್ವತವಾಗಿ ಆಕಾಶವಾಗಿ ಹಿಗ್ಗುತ್ತ ಹರಿಯುತ್ತ ತನ್ನ ಅಳತೆಯನ್ನೇ ಮೀರಿ ಹೋಗುವುದು ಕವಿತೆಯಲ್ಲಿ ಮಾತ್ರವೆಂಬ ಸೋಜಿಗ ಅವಳ ಅನುಭವಕ್ಕೆ ಬಂದಿತ್ತು. ಸೃಷ್ಟಿಯೂ ಹೀಗೆಯೇ ಅಲ್ಲವೇ? ಏನೂ ಇಲ್ಲದ ಶೂನ್ಯವೊಂದು ಚುಕ್ಕಿಯಾಗಿ ಅದು ತನ್ನನ್ನೇ ನೋಡುವ ಬಯಕೆಯಿಂದ ಹೀಗೆಲ್ಲ ತನ್ನನ್ನು ಬಗೆಬಗೆಯಾಗಿ ರೂಪಿಸಿಕೊಳ್ಳುವುದಲ್ಲವೇ?. ಸೃಷ್ಟಿಯು ತನ್ನನ್ನೇ ತಾನು ನುಂಗಿಕೊಂಡಿರಬಲ್ಲ ಈ ಬೃಹತ್ ಚೋದ್ಯಕ್ಕೆ ಮರುಳಾದ ಸುನೀತಾಳಿಗೆ ಅಂದು ಒಲೆಯ ಮುಂದೆ ಕವಿದ ಮಾಯೆಯಲ್ಲಿ ತೆಳ್ಳವ್ವು ಕರಕಾಗಿಹೋದದ್ದೇ ತಿಳಿಯಲಿಲ್ಲ.

ಸೀಟು ಸಿಗದ ಬಸ್ಸಲ್ಲಿ ಜೋಲಿಹೊಡೆಯುತ್ತ ನಿಂತು, ಐದು ರಸ್ತೆ ಕತ್ರಿಯಲ್ಲೇ ಇಳಿದ ಸುನೀತಾ ಕಾರ್ಯಕ್ರಮದ ಸ್ಥಳವನ್ನು ಹುಡುಕಿ ಬೆವರುತ್ತಾ ಬಂದು ಕುಳಿತಾಗ 'ಇನ್ನೂ ಕೆಲವೇ ನಿಮಿಷಗಳಲ್ಲಿ ಕಾರ್ಯಕ್ರಮ ಆರಂಭವಾಗಲಿದೆ'ಯೆಂಬ ಉದ್ಘೋಷಣೆ ಅವಳ ಎದೆಯಲ್ಲಿ ಅವಲಕ್ಕಿ ಕುಟ್ಟುವಂತೆ ಮಾಡಿತು. ಪಕ್ಕಕ್ಕೆ ಕುಳಿತವರೆಲ್ಲ ಪರಸ್ಪರ ಪರಿಚಿತರಂತೆ ಉಭಯಕುಶಲೋಪರಿಯಲ್ಲಿ ತೊಡಗಿದ್ದರು. ತಮ್ಮ ಕವಿತೆ ಯಾವ ಪತ್ರಿಕೆಗಳಲ್ಲಿ ಪ್ರಕಟವಾಗಿದೆ, ಎಷ್ಟು ಸಂಕಲನಗಳು ಪ್ರಕಟವಾಗಿವೆ, ಯಾವ್ಯಾವ ಪ್ರಶಸ್ತಿಗಳು ಬಂದಿವೆ. ಯಾವ್ಯಾವುದು ಬರದೇ ಕೈತಪ್ಪಿಹೋಗಿವೆ ಎಂದೆಲ್ಲಾ ಮಾತಾಡಿಕೊಳ್ಳುತ್ತಿದ್ದರು. ಮುನ್ನುಡಿ ಬೆನ್ನುಡಿಗಳನ್ನು ಬರೆಸಲು ತಾವು ಮಾಡಿದ ಸಾಹಸಗಳನ್ನೆಲ್ಲ ರಸವತ್ತಾಗಿ ಬಣ್ಣಿಸುತ್ತಿದ್ದರು. ಇಂದಿನ ಕಾರ್ಯಕ್ರಮದ ಕವಿಗೋಷ್ಠಿಯ ಅಧ್ಯಕ್ಷರಾಗಿ ಬರಲಿರುವ ಪ್ರಖ್ಯಾತ ಕವಿ ಅಭಯಚಂದ್ರರೇ ತನ್ನ ಪುಸ್ತಕಕ್ಕೆ ಮುನ್ನುಡಿ ಬರೆದಿರುವುದಾಗಿಯೂ, ಅದು ತನ್ನ ಅದೃಷ್ಟವಂತಲೂ ಹೆಂಗಸೊಬ್ಬಳು ಮತ್ತೆ ಮತ್ತೆ ಹೇಳುತ್ತಿದ್ದಳು. ಅಭಯಚಂದ್ರರನ್ನೇ ನಿರೀಕ್ಷಿಸುತ್ತಿದ್ದ ಸಂಘಟಕರು ಅವರು ಆಗಮಿಸಿದಾಗ ವಿದ್ಯುತ್ ಸಂಚಾರವಾದವರಂತೆ ಓಡಾಡಿದರು.

ಬಿಳಿಯ ಪೈಜಾಮ ಕಡುನೀಲಿಬಣ್ಣದ ಜುಬ್ಬಾ ಧರಿಸಿದ್ದ ಅವರು ಅವಳೆಂದೂ ನೋಡಿರದ ವಿಶಿಷ್ಟ ಠೀವಿಯಲ್ಲಿ ಬಂದು ಕುಳಿತಾಗಲಂತೂ ಸುನೀತಾಳ ಕೈಯೊಳಗಿನ ಕವಿತೆ ಕಂಪಿಸುತ್ತಿತ್ತು. ಟೇಬಲ್ಲಿನ ಮೇಲೆ ಹಾಕಿದ್ದ ಕಸೂತಿವಸ್ತ್ರ, ಉದ್ಘಾಟನೆಗೆ ಸಿದ್ಧಗೊಂಡು ಮೈತುಂಬಾ ಹೂಮುಡಿದು ನಿಂತ ದೀಪದಕಂಬ, ಬತ್ತಿಯ ತುದಿಗೆ ಸುಟ್ಟುಕೊಂಡು ಕರಗಲು ಸಜ್ಜಾಗಿ ನಿಂತ ಕರ್ಪೂರ, ಇದನ್ನೆಲ್ಲಾ ನೋಡುತ್ತ ತಳಮಳ ಅದುಮಿಟ್ಟುಕೊಳ್ಳಲು ಪ್ರಯತ್ನಿಸಿದಳು. ಮೈಕಲ್ಲಿ ತನ್ನ ಹೆಸರನ್ನು ತಾನೇ ಕೇಳುವ ಸಂಭ್ರಮಕ್ಕಾಗಿ ಮೈಯೆಲ್ಲ ಕಿವಿಯಾಗಿ ಕಾದಳು. ಸಮಾಜ, ಜಾತಿ ವ್ಯವಸ್ಥೆ, ಚುನಾವಣಾ ರಾಜಕೀಯ ಇಂಥ ವಿಷಯಗಳನ್ನೊಳಗೊಂಡ ಕವಿತೆಗಳು ಜೋರಾಗಿ ಶಿಳ್ಳೆ, ಚಪ್ಪಾಳೆಗಳನ್ನು ಗಿಟ್ಟಿಸಿಕೊಳ್ಳುತ್ತಿದ್ದವು. ತನ್ನ ಕವಿತೆ ಯಾರಿಗೂ ಹಿಡಿಸದಿದ್ದರೆ ಎಂಬ ಅಳುಕೊಂದು ಏಕಾಏಕಿ ಅವಳಲ್ಲಿ ಹೊಕ್ಕಿತು. ಅವಳ 'ಹಕ್ಕಿ ಮತ್ತು ಬೆಂಕಿ' ಕವಿತೆ ಮುಷ್ಠಿಯೊಳಗೇ ಚಡಪಡಿಸುತ್ತಿತ್ತು.

ಇವಳ ಹೆಸರು ಕರೆದಾಗ ಮಡಚಿ ಮುದ್ದೆಯಾದ ಕವಿತೆಯನ್ನು ಬಿಡಿಸಲು ತಾನು ತಡಕಾಡುವುದನ್ನು ನೋಡಿ ಅಭಯಚಂದ್ರರು ಗಡ್ಡದ ಮರೆಯಲ್ಲೇ ನಕ್ಕಂತೆ ಅವಳಿಗೆ ಭಾಸವಾಯಿತು. ಆದರೆ ಅಧ್ಯಕ್ಷೀಯ ಭಾಷಣದಲ್ಲಿ ಅಭಯಚಂದ್ರರು 'ಹಕ್ಕಿ ಮತ್ತು ಬೆಂಕಿ' ಕವಿತೆಯ ರೂಪಕಗಳನ್ನು ವಿಶೇಷವಾಗಿ ಗಮನಿಸಬೇಕು, ಇದು ಮಹಿಳಾ ಸಾಹಿತ್ಯವನ್ನು ಬೇರೆಯದೇ ಆದ ಎತ್ತರಗಳಿಗೆ ತೆಗೆದುಕೊಂಡು ಹೋಗಬಲ್ಲ ಕವಿತೆ ಎಂದೆಲ್ಲ ಹೊಗಳಿದ್ದು ಅವಳೊಳಗಿನ ಕಿಡಿಯನ್ನು ಪುಟಗೊಳ್ಳುವಂತೆ ಮಾಡಿತ್ತು. ವೇದಿಕೆಯಿಂದಿಳಿದ ಮೇಲೆ ಕೈಕುಲುಕಿ, ಬೆನ್ನು ಸವರಿ, ಕೆನ್ನೆತಟ್ಟಿ ಕವಿಗಳನ್ನು ಮಾತಾಡಿಸುತ್ತಿದ್ದ ಅಭಯಚಂದ್ರರು ಸುನೀತಾಳಿಗೆ 'ಹೀಗೆ ಗುಬ್ಬಚ್ಚಿಯಂತೆ ಅಡಗಿದರೆ ಹೇಗೆ ಹುಡುಗೀ! ಬಿ ಬ್ರೇವ್!!' ಎಂದು ಹೆಗಲು ಅದುಮಿದ್ದು ಅಪ್ಯಾಯಮಾನವೆನಿಸಿತ್ತು.

ಅದೇ ಮೂಡಿನಲ್ಲಿ ಬಸ್‌ಸ್ಟಾಂಡಿಗೆ ಬರಬರನೇ ಬಂದು ಬಸ್ಸೇರಿ ಅಲ್ಲಿರುವ ಬೇರೆ ಯಾರನ್ನೂ ನೋಡದೇ ತನ್ನೊಳಗೇ ತಾನು ಹುದುಗಿಹೋದಳು. ದಣಪೆ

ದಾಟಿ ಮನೆಯೊಳಗೆ ಬರುವಾಗ ಏನೋ ಗೆದ್ದ ಸಂಭ್ರಮ. ಸಂಜೆ ಹೊಸಿಲ ಬಳಿ ದೀಪ ಹಚ್ಚುತ್ತಿದ್ದ ಆಯಿ 'ಕೂಸೇ ಅಂತೂ ಬಂದ್ಯಲ್ಲೇ. ದಾರಿ ಕಾಣದಷ್ಟು ಕತ್ಲಾಗೋಜು. ಅಪ್ಪಯ್ಯ ಕಂಡ್ರೆ ಬಯ್ತ್ರಾ. ಲಗೂ ಒಳಗೆ ನಡಿ' ಎಂದು ಅಟ್ಟಿದ್ದಳು. 'ಹೊಸಿಲ ಬಳಿ ದೀಪ ಹಚ್ಚಿಟ್ಟ ಅವಳ ಮುಖದ ಕತ್ತಲು' ಎಂದೇನೋ ಸಾಲುಗಳು ಹೊಳೆದಂತಾಗಿ ಅದನ್ನು ಹಾಗೇ ನುಂಗಿಕೊಂಡು ಹಾಡಿನಂತೆ ಗುನುಗುತ್ತಾ ಒಳನಡೆದಳು ಸುನೀತಾ. ಕಾಣದ ಕತ್ತಲನ್ನು, ಕತ್ತಲೊಳಗಿನ ಕಿಡಿಗಳನ್ನು ಫಕ್ಕನೆ ಕಾಣುತ್ತ ಅದನ್ನು ಆಯ್ದು ಕಟ್ಟುವ ಕವಿತೆಯ ಮೋಹಕ ಗೀಳಿಗೆ ಬಿದ್ದಳು ಸುನೀತಾ.

ಅಭಯಚಂದ್ರರೊಡನೆ ಪತ್ರ ವ್ಯವಹಾರದಲ್ಲಿ ಕವಿತೆಯೆಂದರೇನು? ಎಂಬ ಪ್ರಶ್ನೋತ್ತರ ಮಾಲಿಕೆಗಳೇ ಹೆಣೆದುಕೊಂಡವು. ಆಂತರ್ಯವನ್ನು ಬಿಚ್ಚುತ್ತ ಹೋಗುವ ಈ ಹೊಸಬಗೆಯ ಅನುಭೂತಿಯಲ್ಲಿ ಸದಾ ಕಳೆದುಹೋದವಳಂತೆ ಇರುತ್ತಿದ್ದ ಸುನೀತಾಳನ್ನು ಕಂಡು, ಇದ್ಯಾಕೋ ನೆಟ್ಟಗೆ ಸಂಸಾರ ಮಾಡುವ ಹೆಣ್ಣಿನ ಛಂದಸ್ಸಿಗೆ ಒಗ್ಗುವ ನಮೂನೆಯಲ್ಲ ಎನಿಸಿ ಅಮ್ಮ ಗಾಬರಿಯಾಗಿದ್ದಳು. ಮದುವೆಯ ಪ್ರಸ್ತಾಪಗಳು ಸಾಲಾಗಿ ಬರತೊಡಗಿದವು. ಕನಸಿನಂಥ ನಿಗೂಢ ಕಣ್ಣುಗಳ, ಮೋಹಕ ನಗೆಯ, ಸೂಕ್ಷ್ಮ ನಡೆ ನುಡಿಯ ಅಭಯಚಂದ್ರರಂಥ ಸಂಗಾತಿ ತನಗೂ ಸಿಗಬಹುದೇ? ಎಂದು ಕನಸು ಹೆಣೆಯುತ್ತಿದ್ದಾಗಲೇ ಅದು ತುಂಡಾದಂತೆ ಅವಳಿಗೆ ಧನಂಜಯನೊಡನೆ ಮದುವೆಯಾಯಿತು. ಕವಿತೆಯೆಂದರೆ ಕರಗುವುದು ಎಂದಿದ್ದರು ಅಭಯಚಂದ್ರ. ಆದರೆ ಎಲ್ಲಿ ಹೇಗೆ ಕರಗುವುದೆಂಬ ಅಂತಪಾರ ತಿಳಿಯಲಿಲ್ಲ ಸುನೀತಾಗೆ. ಅವಳು ತಾನೆಲ್ಲಿರುವೆನೆಂದೇ ತಿಳಿಯದಷ್ಟು ಕರಗಿ ಚಪ್ಪಟೆ ಚುಕ್ಕಿಯಾಗಿ ಹೋದಳು. ಅಡಿಗೆ, ಊಟ, ಬೇಟ, ಸೀಮಂತ, ಹೆರಿಗೆ ಎಲ್ಲ ರೂಢಿಯಂತೆ ಸುಸೂತ್ರವಾಗಿಯೇ ನಡೆಯಿತು. ಆದರೆ ತಾನು ಎಲ್ಲೂ ಕರಗದ ಘನಪದಾರ್ಥವಾಗಿಬಿಟ್ಟಂತೆ ಅವಳಿಗೆ ಭಾಸವಾಗುತ್ತಿತ್ತು.

ಕವಿತೆಗಳನ್ನು ಹುದುಗಿಸಿಡುವ ಕಷ್ಟ ಧನಂಜಯನೊಡನೆ ಬದುಕುವಾಗ ಇನ್ನಷ್ಟು ಸಂಕೀರ್ಣವಾಯಿತು. ಅಡಿಗೆಮನೆ, ಮಲಗುವಮನೆ, ಎಲ್ಲೂ ಮೈಮರೆಯಲಾಗದು ಈಗ. ಧನಂಜಯ ಒಳ್ಳೆಯವನೇ. ಅವನ ಹೊರತಾಗಿ ತನಗೊಂದು ಅಸ್ತಿತ್ವವೇ ಇಲ್ಲ ಎಂಬಂತೆ ಹೆಜ್ಜೆ ಹೆಜ್ಜೆಗೆ ತನ್ನನ್ನು ಅವನು ಸ್ಥಾಪಿಸಿಕೊಳ್ಳುತ್ತಾ ನಡೆದದ್ದು ಸುನೀತಾಗೆ ಇದು ಪ್ರೀತಿಯ ಅದ್ವೈತ ಸ್ಥಿತಿಯೆಂದೇ ಅನಿಸಿತ್ತು. ತನ್ನ ದೇಹದ ಇಂಚಿಂಚೂ ಪರಿಚಿತ ಅವನಿಗೆ. ದೇಹ, ಮನಸ್ಸು, ಪ್ರಜ್ಞೆ ಎಲ್ಲವನ್ನೂ ಇಣುಕಿ ಅಲ್ಲೊಂದು ಹಿಡಿತ ಸ್ಥಾಪಿಸುವುದು ಅವನಿಗೆ ಹಕ್ಕಿನ ಸಂಗತಿ ಎಂಬುದು ತಿಳಿಯುವಾಗ ಬಹಳ ತಡವಾಗಿತ್ತು. ತನ್ನ ಖಾಸಗಿ ಸ್ಪೇಸಿನ ಅಗತ್ಯವೇ ಮರೆತುಹೋದಂತಾದ ಅವಳು ತನ್ನ ದೇಹವೂ ತನ್ನದಲ್ಲ ಎನಿಸುವಷ್ಟು ತನ್ನಿಂದ ಹೊರ ನಡೆದುಬಿಟ್ಟಳು. ಅವಳ ಭಣಭಣ ಜಗತ್ತನ್ನು ವಾಟ್ಸಾಪು ಎಂಬ ಗಲಗಲಿಸುವ ಜಗತ್ತು ಒಮ್ಮೆ ತೆಕ್ಕೆ ಹಾಯುವವರೆಗೆ ಅವಳು ಸಂಸಾರದ ಛಂದಸ್ಸಿನೊಳಗೆ ಚಂದವಾಗೇ ಇದ್ದಳು. ಯಾವುದೋ ಒಂದೆರಡು ಗ್ರೂಪುಗಳಲ್ಲಿ ಅವಳನ್ನು ಕಾಣದ ಕೈಗಳು ಸೆಳೆದುಕೊಂಡುಬಿಟ್ಟವು. ಅಲ್ಲಿ ಬುಳುಬುಳನೇ ಹರಿವ ಕವಿತೆಗಳು, ಮರುಕ್ಷಣವೇ ಅದಕ್ಕೆ ವಾವ್, ಸೂಪರ್ ಎಂದು ಹಲ್ಕಿರಿವ ಸ್ಮೈಲಿಗಳು, ಪರಿಮಳವಿಲ್ಲದ ಹೂಗುಚ್ಛಗಳು, ಥಮ್ಸ್‌ಅಪ್ ಶೈಲಿಯ ಕೈಯೆತ್ತುವಿಕೆ ಎಲ್ಲ ಕಿರಿಕಿರಿಯಾಗತೊಡಗಿತು. ಯಾರೋ ಒಬ್ಬರು ಅವಳ ಹಳೆಯ ಕವಿತೆಯೊಂದನ್ನು ಎತ್ತಿ ಅಲ್ಲಿ ಪ್ರಕಟಿಸಿಬಿಟ್ಟಾಗ ಅದು ನದಿಯಂತೆ ಎಲ್ಲೆಡೆ ಹರಿಯತೊಡಗಿತು.

ಅಲ್ಲೇ ಅದ್ಯಾವುದೋ ನದಿತೀರದಲ್ಲಿ ಮತ್ತೆ ಅಭಯಚಂದ್ರರು ಪ್ರತ್ಯಕ್ಷರಾದರು. 'ಎಲ್ಲಿದ್ದೆ ಇಲ್ಲಿಯ ತನಕ?' ಎಂದು ಕೇಳಿದರು. ಹೌದು.. ತಾನೆಲ್ಲಿದ್ದೆ? ಹುಡುಕ ತೊಡಗಿದಳು ಸುನೀತಾ. ನಿಧಾನಕ್ಕೆ ಘನವಾಗಿದ್ದ ಬರ್ಫ ಕರಗಿದಂತೆ ಕಲಕಲನೆ ಹರಿಯತೊಡಗಿದ್ದಳು. ತಾನು ಹರಿಯುವ ಸದ್ದು ತನಗೇ ಕೇಳುವ ದಿವ್ಯಾನುಭೂತಿಗೆ ಮುದಗೊಂಡಳು. ಒಮ್ಮೆ ಕಿತ್ತೆದ್ದು ಹರಿವು ಆರಂಭವಾದ ಮೇಲೆ ಅದನ್ನು ನಿಲ್ಲಿಸಲಿಕ್ಕೆ ಅವಳಿಗೂ ಸಾಧ್ಯವಿಲ್ಲ. ತನ್ನಿಂದ ಮರೆಮಾಚಿದ್ದ ಲೋಕವೊಂದು ಇವಳೊಳಗೆ ಇತ್ತೆಂದು ತಿಳಿದು ಧನಂಜಯ ಶಾಕ್ ಆದಂತಿದ್ದ. ಈ ಅವ್ಯಕ್ತ ಬುದ್ಬುದಗಳನ್ನು ನಿಯಂತ್ರಿಸುವುದು ಹೇಗೆಂಬ ತಯಾರಿ ಪಾಪ ಅವನಿಗೂ ಇರಲಿಲ್ಲ. ಅಲ್ಲಿ ಹೋಗಬೇಡ, ಇಂಥ ಡ್ರೆಸ್ ಹಾಕಬೇಡ ಅಂದಷ್ಟು ಸಲೀಸಾಗಿ ಒಳಗಿನ ರೂಹುಗಳನ್ನು ಆಲಿಸಲಾದೀತೆ? ಆಲಿಸಿ ಅಳಿಸಲಾದೀತೆ? ಅವಳು ಸ್ನಾನಕ್ಕೆ ಹೋದಾಗ ಅವಳ ಮೊಬೈಲ್ ಇಣುಕತೊಡಗಿದ, ಮೆಸೇಜ್‌ಗಳ ಅರ್ಥ ಕೆದಕತೊಡಗಿದ. ಇದೊಂದು ಬಿಡಿಸಲಾಗದ ಒಗಟಿನಂತೆ ಅವನಿಗೆ ತೋರಿತು. ಅದೊಂದು ದಿನ ಪಬ್‌ನಲ್ಲಿ ಕುಳಿತು ಬಿಯರ್ ಹೀರುತ್ತಿರುವಾಗ 'ನಿಮ್ಮ ಹೆಂಡತಿ ಸಖತ್ ಹಾಟ್ ಕವಿತೆ ಬರೀತಾಳೆ..' ಅಂತ ಗೆಳೆಯನೊಬ್ಬ ಕಾಮೆಂಟ್ ಪಾಸ್ ಮಾಡಿದ್ದು ಧನಂಜಯನನ್ನು ಕನಲಿಸಿಬಿಟ್ಟಿತ್ತು. ಸದಾ ನೈಟಿಗೆ ಅರಿಶಿನ ಕಲೆ ಮೆತ್ತಿಕೊಂಡು, ಶುಂಠಿ ಬೆಳ್ಳುಳ್ಳಿ ಪೇಸ್ಟಿನ ವಾಸನೆ ಇಟ್ಟುಕೊಂಡು, ತನ್ನ ಕಣ್ಣಳತೆಯಲ್ಲೇ ಇದ್ದ ತೀರ ಆರ್ಡಿನರಿಯಾದ ಈ ಇವಳೊಳಗೆ ಅದೆಂಥ ಕಾವು ಇದೆ ತಾನು ಕಾಣದ್ದು? ಅದ್ಯಾವ ಪರಿಮಳಗಳು ಕರಗಿಕೊಂಡಿವೆ ಘಾಟುವಾಸನೆಯ ಕೆಳಪದರದಲ್ಲಿ... ಅಂತೆಲ್ಲ ಯೋಚಿಸಿ ಹೈರಾಣಾದ.

ಅವತ್ತು ಅವಳು ಬರೆಯುತ್ತ ಕೂತಿದ್ದಳು. ಒಲೆಯ ಮೇಲಿಟ್ಟ ಹಾಲು ಉಕ್ಕುಕ್ಕಿ ಪಾತ್ರೆ ತಳಸೀದ ವಾಸನೆ ಅಡರಿಕೊಂಡರೂ ಗೊತ್ತಾಗದಂತಿದ್ದಳು. ಧನಂಜಯನೊಳಗೆ ಸ್ಫೋಟಕ್ಕೆ ಕಾದಿದ್ದ ಶಬ್ದಗಳೆಲ್ಲ ಹೊರಬರಲು ಈ ವಾಸನೆಯೇ ಕಾರಣವಾಯಿತು. ಅಷ್ಟರಲ್ಲಿ ಬ್ಯಾಟೆಸೆದು ಒಳಬಂದ ಪಿ.ಯು.ಸಿ ಓದುತ್ತಿದ್ದ ಮಗರಾಯ 'ಅಮ್ಮ ನೀನೇನೋ ಬರೆಯುತ್ತಿದ್ದೀ ಎಂದು ಎಚ್ಚರಿಸಲಿಲ್ಲ. ಕಾಲೇಜಿಂದ ಬಂದವನೇ ಆಡಲು ಹೋದೆ. ಅಲ್ಲೇ ಮಸಾಲ್‌ಪೂರಿ ತಿಂದು ಬಂದೆ, ಕೈ ನೋಡು ಘಂ ಅಂತಿದೆ' ಎಂದು ಮೂಗಿಗೆ ಹಿಡಿದ. ಅಷ್ಟಕ್ಕೆ ಬೆಂಕಿಗೆ ತುಪ್ಪ ಸುರಿದಂತೆ ಧನಂಜಯನ ಕೋಪ ಉಲ್ಬಣಿಸಿತು. 'ಥೂ, ಮಗ ವಯಸ್ಸಿಗೆ ಬರುತ್ತಿರುವಾಗ ನಿನ್ನದೆಂಥಾ ಹೊಸ ಅವತಾರ ಇದು? ಅವನ ಹೊಟ್ಟೆ ಹಸಿವೂ ಕಾಣದಾಯ್ತಾ ನಿಂಗೆ? ನೀನೆಂಥಾ ಅಮ್ಮ? ಆ ದರಿದ್ರ ಕವಿತೆಗಳನ್ನೆಲ್ಲ ಬೆಂಕಿಗೆ ಹಾಕು' ಎಂದು ಧುಮು ಧುಮಿಸಿ ಹೊರಟುಹೋದ. ಮಗ ಬೆಪ್ಪಾಗಿ ನಿಂತ.

ಅವಳು ಸ್ಟವ್ವಿಗೆ ಹಿಡಿದ ಜಿಡ್ಡು ಒರೆಸುತ್ತಾ, ಸೀದ ಪಾತ್ರೆಯನ್ನು ಕರಕರನೆ ತೊಳೆದಳು. ಆದರೂ ವಾಸನೆ ಹಾಗೆಯೇ ಇತ್ತು. ಕವಿತೆಗಳನ್ನು ಬೆಂಕಿಗೆ ಹಿಡಿದು ಉರಿಯ ವಾಸನೆ ಕೊಳುತ್ತಾ ಸುನೀತಾ ಯೋಚಿಸಿದಳು. ಅದೇ ಬೆಳಗು ಅದೇ ರಾತ್ರಿಗಳು. ಉಂಡ ಪಾತ್ರೆ ತೊಳೆದು, ಹೇತ ಟಾಯ್ಲೆಟ್ ತೊಳೆದು, ರಾತ್ರಿಯ ಸ್ಖಲನದ ಕಲೆಯುಂಟಿದ ಬೆಡ್‌ಶೀಟ್ ನೆನೆಯಿಟ್ಟು, ತೊಗಲವಾಸನೆಗೆ ಹೇವರಿಸಿಕೊಂಡು, ಮುಟ್ಟಿನ ಕಲೆಗಳನ್ನು ಉಜ್ಜುತ್ತಾ...ಛೇ! ಈ ವಾಸನೆಗಳಿಂದ ಆಚೆ ಬರುವ ದಾರಿಯಾದರೂ ಯಾವುದು ಎಂದು ತಳಮಳಿಸಿದಳು. ಇಲ್ಲಿಂದ ಪಾರಾಗಲೆಂದೇ ತಾನು ಕವಿತೆಯ ತೆಕ್ಕೆಗೆ ಹೋಗುವುದಲ್ಲವಾ.. ಅರೆ! ಹೌದು.. ಕವಿತೆಯೆಂದರೆ ಇಲ್ಲಿಂದ ಪಾರುಗೊಳಿಸಿ ಅಸೀಮ ನೆಲೆಗಳಿಗೆ ಕೊಂಡೊಯ್ಯಬಲ್ಲ ರೆಕ್ಕೆ. ಆದರೆ ತಾನು ರೆಕ್ಕೆ ಬಿಚ್ಚುವುದನ್ನೇ ಮರೆತಿದ್ದೆ. ಈಗ ಹಾರಲು ಕಲಿತಿದ್ದರೂ ಇಲ್ಲಿನ ಗುರುತ್ವ ಮೀರಲಾಗುತ್ತಿಲ್ಲ. ಮತ್ತೆ ಮತ್ತೆ ಇದೇ ಒಲೆಯೊಳಗೆ ರೆಕ್ಕೆ ಸುಟ್ಟುಕೊಳ್ಳುವ ತನಗೆ ಆಕಾಶಗಾಮಿಯಾಗುವ ಕಸುವೇ ಇಲ್ಲವೆನಿಸಿತು. ರಾತ್ರಿಯೆಲ್ಲ ಸುಟ್ಟಹಕ್ಕಿಯಂತೆ ಒರಲುತ್ತಾ ಮಲಗಿದವಳಿಗೆ ಹಾಗೇ ನಿದ್ದೆ, ಎಚ್ಚರದ ಕಲಸುಮೇಲೋಗರ. ಧನಂಜಯ ಫಾರ್ವರ್ಡ್ ಜೋಕುಗಳನ್ನು ತನ್ನ ಬಳಗಕ್ಕೆ ಕಳಿಸುತ್ತಾ ಮೊಬೈಲಲ್ಲಿ ಕಣ್ಣು ಕೀಲಿಸಿ ಮುಗುಳ್ನಗುತ್ತಿದ್ದ. ಅವಳಿಗೂ ಥಟ್ಟನೇ ನೆನಪಾಯ್ತು ಸುಟ್ಟಕವಿತೆಗಳೆಲ್ಲಾ ಮೊಬೈಲ್‌ನಲ್ಲಿ ಸೇವಾಗಿ ಸೇಫ್ ಆಗಿದೆಯೆಂದು!.

ಪೆಂಡಾಲಿನ ಕಾವಿನಲ್ಲಿ ಬೇಯುತ್ತ ತನ್ನ ಸ್ಮೃತಿಗಳಲ್ಲಿ ಕಳೆದುಹೋದ ಸುನೀತಾಳಿಗೆ ಯಾವುದೋ ಮರಿಕವಿ 'ಕವಿತೆಯೆಂದರೆ ಬೆಂಕಿ. ಧಗಧಗಿಸದೇ ಬದಲಾವಣೆಯಿಲ್ಲ'. ಎಂದು ಜೋರಾಗಿ ಅರಚತೊಡಗಿದಾಗ ಥಟ್ಟನೆ ಎಚ್ಚರವಾಯ್ತು. ಪಕ್ಕದಲ್ಲಿ ಕುಳಿತವರೆಲ್ಲ ಅವರವರ ಮೊಬೈಲುಗಳಲ್ಲಿ ಗರ್ಕಾಗಿದ್ದರು. ಇಬ್ಬರು ಎಳೆ ಹುಡುಗಿಯರು ಮಾತಲ್ಲಿ ಮಗ್ನರಾಗಿದ್ದರು. ಒಬ್ಬಳು 'ನನ್ನ ಕವಿತೆಗೆ ಫೇಸ್‌ಬುಕ್‌ನಲ್ಲಿ ಒಂಭೈನೂರ ತೊಂಬತ್ತೊಂಬತ್ತು ಲೈಕುಗಳು.. ಹೇಯ್ ಒಂದು ಸಾವಿರದ ಲೈಕನ್ನು ತಾನೇ ಒತ್ತುತ್ತೇನೆಂದು ಅವನು ಹೇಳಿದ್ದ!' ಎಂದು ಕಿಲಕಿಲ ನಗುತ್ತಿದ್ದಳು. 'ಈ ಅಭಯಚಂದ್ರ ಇದ್ದಾರಲ್ಲ.. ಇನ್ನೂ ಹುಡುಗಿಯರೊಂದಿಗೆ ಫ್ಲರ್ಟ್ ಮಾಡುವುದು ಬಿಟ್ಟಿಲ್ಲ. ಮನೆಯಲ್ಲಿ ಹೆಂಡತಿಗೆ ವಿಪರೀತ ಹೊಡೆಯುತ್ತಾರಂತೆ. ಇಷ್ಟು ವರ್ಷ ಸಹಿಸಿದ ಅವಳು ಈಗ ಮಹಿಳಾ ಆಯೋಗಕ್ಕೆ ದೂರು ಸಲ್ಲಿಸಿದ್ದಾಳಂತೆ!' ಇನ್ನೊಬ್ಬಳು ಆ ಕುರಿತ ಚರ್ಚೆಯನ್ನು ಮೊಬೈಲಿನಲ್ಲಿ ಸರ್ಚ್‌ಮಾಡಿ ತೋರಿಸಿದಳು.

ಸುನೀತಾಗೆ ತೊಗಲು ಬೇಯುವ ವಾಸನೆ ಅಡರತೊಡಗಿತು. 'ಕುಂಭ ಬೆಂದಿತ್ತು ಹಂಸೆ ಹಾರಿತ್ತು ಗುಹೇಶ್ವರಾ' ಎಂಬ ಅಲ್ಲಮನ ನುಡಿ, ಪ್ರಜ್ಞೆಯ ತೆಳವನ್ನೆಲ್ಲ ಆವರಿಸತೊಡಗಿತು. ಇದ್ದ ಕಸುವನ್ನೆಲ್ಲ ಒಟ್ಟುಗೂಡಿಸಿ ರೆಕ್ಕೆ ಬಿಚ್ಚಿ ಹಾರಲೇಬೇಕೆಂಬ ಯಾವುದೋ ಮೊರೆತ ತೀವ್ರವಾಗುತ್ತಲೇ ಹೋಯಿತು. ಅವಳು ಮೆಲ್ಲಗೆ ಅಲ್ಲಿಂದ ಎದ್ದು ಬಂದದ್ದು ಯಾರಿಗೂ ತಿಳಿಯಲಿಲ್ಲ. ಓಡುನಡಿಗೆಯಲ್ಲಿ ಮೈಕಿನ ತರಂಗಗಳು ತಲುಪಲಾಗದಷ್ಟು ದೂರ ಬಂದೇಬಿಟ್ಟಳು. ಸುಟ್ಟರೆಕ್ಕೆಯನ್ನು ಅಲ್ಲೇ ಕಳಚಿಟ್ಟು ಆಗತಾನೇ ಮೊಳೆಯುತ್ತಿದ್ದ ರೆಕ್ಕೆಯನ್ನು ಮುಟ್ಟಿಮುಟ್ಟಿ ನೋಡಿಕೊಂಡಳು. ಚುಕ್ಕಿಯಾಗಿರುವ ತಾನು ನದಿಯಾಗಿ ಹರಿಯಬಹುದು ಸಮುದ್ರವಾಗಿ ಮೊರೆಯಬಹುದು ಆಕಾಶವಾಗಿ ಹರಡಬಹುದು.... ಅವೆಲ್ಲವೂ ತನ್ನೊಳಗೇ ಇವೆಯೆನಿಸಿತು. ಒಳಗೊಳಗೇ ರೆಕ್ಕೆ ಬಡಿಯುವ ಚುಕ್ಕಿಗೆ ಒಮ್ಮೆ ಅವಕಾಶ ಕೊಟ್ಟುನೋಡಬೇಕೆಂಬ ಬಯಕೆ ಅವಳಲ್ಲಿ ಬಲಿಯತೊಡಗಿತು. ಎಲ್ಲದಕ್ಕೂ ಸಿದ್ಧವೆಂಬಂತೆ ಮುಂದೆ ಬಯಲು ನಿರಾಕಾರವಾಗಿ ನಿಂತಿತ್ತು.



**(ತುಮಕೂರಿನ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಿಕೆಯಾಗಿರುವ ಗೀತಾ ವಸಂತ ಕನ್ನಡದ ಸಮರ್ಥ ಕವಯತ್ರಿ, ಕತೆಗಾತಿ ಮತ್ತು ಚಿಂತಕಿ.)**

# ನವಿಲುಗರಿ

### ಎಂದಿನಿಂದಲೋ ಅವನೆಡೆಗೆ ....

ಭಾವನೆಗಳ ಬೆಂಕಿಸೀರೆಯುಟ್ಟು
ಧಗ್ಗೆಂದು ಉರಿದು ಬೆಳಕಾಗಲು
ಅವನೆಡೆಗೆ ಬರುತ್ತಲೇ ಇದ್ದಾಳೆ



ಉಕ್ಕುವ ಕಡಲಾಗಿ ತೆರೆ ತೆರೆದು
ಬಾಚಿ ಸೆಳೆದು, ಒಳಗೆಳೆದುಕೊಳ್ಳಲು
ಅವನೆಡೆಗೆ ಬರುತ್ತಲೇ ಇದ್ದಾಳೆ

ಅಂತರಿಕ್ಷದ ಅಪಾರದಲ್ಲಿ, ತೀರದ
ನೀಲಿ ಮೋಹದಲ್ಲಿ ಚುಕ್ಕಿ ಹೆಜ್ಜೆ ಇಟ್ಟು
ಅವನೆಡೆಗೆ ಬರುತ್ತಲೇ ಇದ್ದಾಳೆ

ಬಿರುಗಾಳಿಯಂತೊಲೆದು, ಅಲೆದು
ತೂಗಿ, ಮಾಗಿ, ಜೀವದುಸಿರಾಗಿ
ಅವನೆಡೆಗೆ ಬರುತ್ತಲೇ ಇದ್ದಾಳೆ

ಮಣ್ಣೊಳಗೆ ಹುದುಗಿದ ಬೀಜಗಳ
ಒಡಲಲ್ಲಿ ಮೊಳಕೆಯೊಡೆಸಿ, ಚಿಗುರಿಸಿ
ಅವನೆಡೆಗೆ ಬರುತ್ತಲೇ ಇದ್ದಾಳೆ

ಹರಿವ ನೀರ ಹಾಲಾಹಲ ಮಾಡಿ
ಎದೆ ಮಂಜುಗೆಡ್ಡೆಯಲ್ಲಿ ಲಯರೂಪಿ
ಅವನೋ ಕಾಯುತ್ತಲೇ ಇದ್ದಾನೆ !

–ಎಂ.ಆರ್.ಕಮಲ

### ಶಕು

ಪುಟ್ಟ ಕಣಗಿಲೆ ಗಿಡದ ಹಿಂದೆ ಮರೆಯಲಿ
ನಿಂತು ನೋಡುತ್ತಿದ್ದ ಶಕು–ಗೆ ಒಂದು ಕಣ್ಣಿಲ್ಲ
ಹೂ ಬಿಟ್ಟ ಕಣ್ಣಿನಲಿ
ಜಗತ್ತು ನೋಡುವಳು ಹುಡುಗಿ

ಆ ದಿನ ಸಾಯಂಕಾಲ
ಇನ್ನೇನು ಯುಗಾದಿ ಚಂದ್ರ
ಕಣ್ಣು ಬಿಡಬೇಕು ಮೋಡ ಒಡೆದು ಬಿಳಿ ತುದಿ
ಮೊಳೆಯಬೇಕು

ಶಕು ಸೀರೆಯುಟ್ಟಿದ್ದಾಳೆ
ಹಸಿರು ಕೆಂಪಿನ
ಹೂವಿನ ಗುಚ್ಛದ

ದೃಷ್ಟಿ ನೆಟ್ಟಿದೆ ಆಕಾಶದತ್ತ
ಇನ್ನೇನು ಅವಳ ಹತ್ತಿರ
ಬಂದೇ ಬಿಟ್ಟಿತು ಆಕಾಶದ ಹೂ

ನಗುಮೊಗದ ಶಕು
ಕೆಳಗೆ ಬಿದ್ದ ನಕ್ಷತ್ರಗಳ
ಆರಿಸಿ ಮಡಿಲಿಗೆ ತುಂಬಿಕೊಂಡಳು



ಅರ್ಧಕಣ್ಣಿನಲಿ ತುಂಬಿಕೊಳ್ಳುವಳು
ಬೆಳಕಿನ ಜೊಂಪೆ ಹೂವುಗಳ
ಹೂವುಗಣ್ಣಿನ
ಹೂವ ಹುಡುಗಿ
ನಗೆಬಿಲ್ಲಿನಲಿ ಎದುರಿಗಿದ್ದ
ಏನನ್ನೂ ಮಣಿಸಿಬಿಡುವವಳು

–ಆರ್. ತಾರಿಣಿ ಶುಭದಾಯಿನಿ





ಚಿತ್ರಗಳು : ವಿಜಯಶ್ರೀ ಹಾಲಾಡಿ



### ಸೀರೆ

ಹೊಂಬಣ್ಣದ, ಕೆಂಬಣ್ಣದ
ಕಡುಗಪ್ಪು, ತಿಳಿ ನೀಲಿ,
ಬಿಳಿ ನೂಲು, ನೊರೆಹಾಲು
ಬಣ್ಣ ಬಣ್ಣದ ಸೀರೆ.



ಸುಡು ಬೆಂಕಿ, ಉಡು ತಂಪು
ಅಗಣಿತ ತಾರಾ ಗಣಗಳ
ಮಿಂಚಂಚಿನ ಸೆರಗಿನ ಸೀರೆ

ಹಕ್ಕಿ ಹಾರಿದರೊಂದು
ಚುಕ್ಕಿ ಮಿನುಗಿದರೊಂದು
ರುಜು ಮಾಡಿ ಕಳುಹಿದ
ಚಿತ್ತಾರದ ಸೀರೆ

ಕೇಳದು ಮಗ್ಗದ ಸದ್ದು
ಕಾಣದೆ ಸುಮ್ಮನೆ ಇದ್ದು
ನೇಯ್ದವನೇ...

–ಸವಿತಾ ನಾಗಭೂಷಣ

### ಅಗ್ನಿಪರ್ವತಗಳ ಭೂಮಿ ಅವಳು!

ಆಡಿಕೊಳ್ಳಬಹುದು ನೀವೆಲ್ಲ
ನಿಮ್ಮ ನಾಲಗೆ ಮತ್ತು
ಊಹೆಗಳು ಸೋಲುವವರೆಗೆ
ಬಟ್ಟೆ–ಭಾವನೆಗಳ ಕುರಿತು
ಹಿಂಭಾರ ಮುಂಭಾರಗಳ ಕುರಿತು
ಎಲ್ಲಕ್ಕಿಂತ ಹೆಚ್ಚಾಗಿ ಅವಳ
ಪಾತಿವ್ರತ್ಯದ ಕುರಿತು.

ಗಂಡಾಳ್ವಿಕೆಯ ಪರಂಪರೆಯಿದು
ಬೆಟ್ಟ ಭೂಮಿ ಹೂವು ನದಿಯಿಂದ ತೊಡಗಿ
ಸಿಂಹ ಜಿಂಕೆ ತೋಳ ಹಾವು
ಬೀದಿನಾಯಿಯವರೆಗೆ ಹೆಣ್ಣನ್ನು
ಉಪಮೆ ರೂಪಕ ದೀಪಕಗಳಲ್ಲಿ
ಅಲಂಕರಿಸಿ ಉಪಕರಿಸಿದ್ದೀರಿ !
ನಿಮ್ಮ ಸಾಮರ್ಥ್ಯಗಳು ಉಡುಗಿಹೋದಾಗ
ಅತ್ಯಾಚಾರವೆಸಗಿ ಕೊಂದು
ಸುಟ್ಟು ಮುಗಿಸಿದ್ದೀರಿ !

ಕಾಲ ಪುಟಗಳನ್ನು ತಿರುವಿಹಾಕಿದೆ
ಅವಳ ಚಾರಿತ್ರ್ಯಕ್ಕೊಂದು
ಪ್ರತ್ಯೇಕ ಅಧ್ಯಾಯ ಅಚ್ಚುಹಾಕಿಟ್ಟಿದ್ದಿರಲ್ಲ..
ಹರಿದು ಬೆಂಕಿಗೆ ಹಾಕಿ ಅದನ್ನು
ಆ ಉರಿಯಲ್ಲಾದರೂ ಶೀತಲ
ಸಮರದ ಮಂಜುಗಡ್ಡೆಗಳು
ಕರಗಿ ಹರಿದು ಹೊಳೆಯಾಗಲಿ
ತುಕ್ಕುಹಿಡಿದ ನಿಮ್ಮ ನಿಮ್ಮ
ಮನುಷ್ಯತನ 'ಗಂಡಸುತನ'ಗಳು
ಕರಗಿ ಪುಟಗೊಳ್ಳಲಿ
ದಯವಿಟ್ಟು ಇಷ್ಟನ್ನು ಮಾಡಿಬಿಡಿ
ನಿಮ್ಮ ಮಕ್ಕಳಿಗಾಗಿ
ಮಾನವಕುಲದ ಉದ್ಧಾರಕ್ಕಾಗಿ..



ನೆನಪಿಡಿ
ತಡವಾದರೆ ಉರಿವ ಗೋಲವಾಗಬಹುದು
ಅಗ್ನಿಪರ್ವತಗಳ ಭೂಮಿ ಅವಳು !

–ವಿಜಯಶ್ರೀ ಹಾಲಾಡಿ

# ಪುಸ್ತಕಾವಲೋಕನ

**ಪು: ಸ್ತ್ರೀವಾದ ಚಿಂತನೆ ಮತ್ತು ಹೋರಾಟ** ಲೇ: **ಎಚ್.ಎಸ್.ಶ್ರೀಮತಿ** ಪ್ರ: **ಅಭಿರುಚಿ ಪ್ರಕಾಶನ**, ಮೈಸೂರು ಪು: ೬೯೨ ಬೆಲೆ: ರೂ.೩೩೦/-

## ಅವಕಾಶ, ಹೊಣೆಗಾರಿಕೆ ಮತ್ತು ಸ್ತ್ರೀವಾದ




ಎಚ್.ಎಸ್. ಶ್ರೀಮತಿಯವರು ಸ್ತ್ರೀವಾದವನ್ನು ಕನ್ನಡದ ಪ್ರಜ್ಞೆಗೆ ದಾಟಿಸುವುದಕ್ಕಾಗಿ ನಿರಂತರ ಕೆಲಸ ಮಾಡುತ್ತಾ ಬಂದಿದ್ದಾರೆ. ಅದು ಸ್ತ್ರೀವಾದೀ ತತ್ವಶಾಸ್ತ್ರವನ್ನು ಕನ್ನಡಕ್ಕೆ ಅನುವಾದಿಸುವುದರಿಂದ ಹಿಡಿದು, ಸ್ತ್ರೀವಾದೀ ತಾತ್ವಿಕತೆಯ ಕೃತಿಗಳನ್ನು ರಚಿಸುವುದು, ಸ್ತ್ರೀವಾದೀ ಪದವಿವರಣಕೋಶ ರಚಿಸುವುದು, ಈಚಿನ ದಿನಗಳಲ್ಲಿ ಜನಸಾಮಾನ್ಯರಿಗೆ ಸ್ತ್ರೀವಾದ ಎಂಬ ಮಾಲಿಕೆಯನ್ನು ಯು ಟ್ಯೂಬ್‌ನಲ್ಲಿ ಪ್ರಸ್ತುತ ಪಡಿಸುತ್ತಿರುವುದು ಮೊದಲಾದುವನ್ನು ತಮ್ಮ ಬದುಕಿನ ನಂಬಿಕೆಯ ಭಾಗವಾಗಿ ಮಾಡಿಕೊಂಡು ಬರುತ್ತಿದ್ದಾರೆ. ಹೆಣ್ಣು ಗಂಡು ಸಂಬಂಧವನ್ನು ಮತ್ತು ಇತರ ಅಧಿಕಾರ ಸಂಬಂಧಗಳನ್ನು ಆವರಿಸಿಕೊಂಡಿರುವ ಸಿಕ್ಕುಗಳನ್ನು ಬಿಡಿಸಿಕೊಳ್ಳುವ, ಅವುಗಳ ನಡುವೆ ಒಂದು ಹದವರಿಯುವ ಅಗತ್ಯಕ್ಕೆ ಸ್ತ್ರೀವಾದ ಖಂಡಿತವಾಗಿಯೂ ಒದಗಿ ಬರುತ್ತದೆ ಎಂಬ ಒತ್ತು ಈ ಎಲ್ಲಾ ಕೆಲಸಗಳ ಹಿಂದೆ ಇದೆ. ಇದೀಗ ಪ್ರಕಟವಾಗಿರುವ 'ಸ್ತ್ರೀವಾದ ಚಿಂತನೆ ಮತ್ತು ಹೋರಾಟ' ಎಂಬ ಕೃತಿ ಕೂಡ ಇದೇ ಆಶಯಗಳ ಮುಂದುವರಿಕೆಯಾಗಿದೆ.

ಈ ಕೃತಿಯು ಜಾಗತಿಕ ಹಿನ್ನೆಲೆಯಲ್ಲಿ ಸ್ತ್ರೀವಾದ ಬೆಳೆದು ಬಂದ ಬಗೆಯನ್ನೂ, ಅದರ ಹಿಂದಿರುವ ಕಾರಣಗಳನ್ನೂ, ಸ್ತ್ರೀವಾದ ಎದುರುಗೊಂಡ ವಿಷಯಗಳನ್ನೂ ಚರ್ಚಿಸುತ್ತಾ, ಭಾರತದಲ್ಲಿ ಸ್ತ್ರೀವಾದದ ಬೆಳವಣಿಗೆ, ಸ್ವರೂಪಗಳನ್ನು ಚಾರಿತ್ರಿಕ ನೆಲೆಯಲ್ಲಿ ಕಟ್ಟಿಕೊಡುತ್ತದೆ. ಕೃತಿ ಎಲ್ಲೂ ಏನನ್ನೂ ನಿರ್ದೇಶಿಸುವುದಿಲ್ಲ. ಬದಲಿಗೆ ಸರಳ ಪರಿಭಾಷೆಗಳಲ್ಲಿ ವಿಷಯಗಳ ವಿಶ್ಲೇಷಣೆ, ಮಂಡನೆ ಮಾಡುತ್ತದೆ. ವಿಚಾರಗಳನ್ನು ಕಂಡುಕೊಳ್ಳುವ ಹೊಣೆಗಾರಿಕೆಯನ್ನು ಓದುಗರಿಗೇ ದಾಟಿಸುವ ಮಾದರಿಯಲ್ಲಿ ಈ ಬರಹ ಇದೆ. ಈ ಮಾದರಿ ಕನ್ನಡದಲ್ಲಿ ಸ್ವಲ್ಪ ಕಡಿಮೆಯೇ. ಸಾಧಾರಣವಾಗಿ ನಾವು ಸಾಹಿತ್ಯ ಕೃತಿಗಳ ಮೂಲಕವೇ ಸ್ತ್ರೀವಾದವನ್ನು ಪ್ರವೇಶಿಸಿದವರು ಮತ್ತು ವಿವರಿಸಿಕೊಂಡವರು. ಇದು ನಮ್ಮ ಪ್ರೀತಿಯ ದಾರಿಯೂ ಹೌದು. ಅದು ಬಿಟ್ಟರೆ ಪರಿಭಾಷೆಗಳನ್ನು ಅರ್ಥೈಸಿಕೊಳ್ಳುವ ಮೂಲಕ ಅದನ್ನೊಂದು ಪರಿಕರವಾಗಿ ಬಳಸಿದವರು. ಈ ಕೃತಿ ಆ ದಾರಿಯನ್ನು ಬಿಟ್ಟು, ಸ್ತ್ರೀವಾದದ ಕಣ್ನೋಟವನ್ನು ಕಟ್ಟಿಕೊಡುವ ಕೆಲಸ ಮಾಡುತ್ತದೆ. ಮೊದಲ ಅಧ್ಯಾಯದಲ್ಲಿ ಕಳೆದ ಇನ್ನೂರು ವರ್ಷಗಳಲ್ಲಿ ಸ್ತ್ರೀವಾದ ಸವೆಸಿದ ಹಾದಿಯನ್ನು ದೀರ್ಘವಾಗಿ ತೆರೆದಿಡುತ್ತಾರೆ. 'ಜನ ಬದುಕಿನಲ್ಲಿ, ಅದರಲ್ಲೂ ಹೆಣ್ಣು ಸಮುದಾಯದ ಬದುಕಿನ ದಿನನಿತ್ಯದ ಬವಣೆಗಳಲ್ಲಿ ಬಸವಳಿದ ಒಂದು ಜನ ಸಮುದಾಯವು ತನ್ನ ಉಳಿವಿನ ಪ್ರಯತ್ನವಾಗಿ ತೋರಿದ ಪ್ರತಿಕ್ರಿಯೆಗಳೇ ಸ್ತ್ರೀವಾದೀ ಚಿಂತನೆಯ ಪ್ರಾಥಮಿಕ ಹಂತ ಎನ್ನಬಹುದು' (ಪು:೮) ಎಂಬಲ್ಲಿಂದ ಶುರುವಾಗಿ 'ಎಸ್ತೆಲ್ ಬಿ ಫ್ರೀಡ್‌ಮನ್ ಹೇಳುವಂತೆ ಸ್ತ್ರೀವಾದದ ಚರಿತ್ರೆಯನ್ನು ಕಟ್ಟುವ ಮುಖ್ಯ ಉದ್ದೇಶವೆಂದರೆ ಮಹಿಳಾ ಸಮುದಾಯದ ಭವಿಷ್ಯದ ಚಿತ್ರಣವನ್ನು ಕಾಣುವುದು, ಮತ್ತು ಹಿನ್ನಡೆಯ ಯಾವುದೇ ಪ್ರಸ್ತಾಪವೂ ನಿರಾಕರಣೆಗೊಳ್ಳಬೇಕು ಎಂಬುದೇ ಕೊನೆಯ ಮಾತಾಗುತ್ತದೆ.'(ಪು:೬೯) ಎಂಬಲ್ಲಿವರೆಗೆ ನಾವು ತಿಳಿಯಬೇಕಾದ ತಿಳಿವು ಮತ್ತು ಹೊರಬೇಕಾದ ಹೊಣೆಗಳನ್ನು ಈ ಕೃತಿ ಸೂಚಿಸುತ್ತದೆ.

ಹೆಣ್ಣು ಬಿಟ್ಟಿ ಆಳಾಗಿ ದುಡಿಯಬೇಕಾದ ಸನ್ನಿವೇಶವು ಮನೆಯಿಂದ ಸಾರ್ವಜನಿಕ ಕ್ಷೇತ್ರಕ್ಕೆ ವಿಸ್ತರಿಸುವುದಕ್ಕೆ ಕಾರಣವಾದದ್ದು ಬಂಡವಾಳಶಾಹಿ ವ್ಯವಸ್ಥೆ ಮತ್ತು ಕೈಗಾರಿಕೀಕರಣ. ಆದರೆ ವೈರುಧ್ಯವೆಂದರೆ ಈ ಸನ್ನಿವೇಶಗಳೇ ಅವಳಿಗೆ ಅವಕಾಶಗಳಾಗಿಯೂ ಒದಗಿ ಬಂದವು. ರಾಜಕೀಯ ಪ್ರಜ್ಞೆಯು ವಿಸ್ತಾರಗೊಳ್ಳಲು ಕಾರಣಗಳಾದವು. 'ಗಂಡು ಮತ್ತು ಹೆಣ್ಣುಗಳನ್ನು ಸಮಾಜವು ತಾರತಮ್ಯದಲ್ಲಿ ನಡೆಸಿಕೊಳ್ಳುತ್ತಿದೆ ಎಂಬುದನ್ನು ಗುರುತಿಸುವ, ಅದರ ವಿರುದ್ಧ ದನಿ ಎತ್ತುವ ಸಾಮರ್ಥ್ಯವಂತೂ ಪ್ರಕಟವಾಗತೊಡಗಿದವು'(ಪು:೭೯) ೧೭೯೨ರಲ್ಲಿಯೇ ವುಲ್ಸ್ಟನ್‌ಕ್ರಾಫ್ಟ್ 'ಮಹಿಳೆಯರಿಗೆ ಪುರುಷರ ಮೇಲೆ ಅಧಿಕಾರವು ಸಿಗಬೇಕೆಂದು ನಾನು ಬಯಸುವುದಿಲ್ಲ. ಹೆಂಗಸರಿಗೆ ತಮ್ಮ ಮೇಲೆ ತಮಗೆ ಅಧಿಕಾರವು ಸಿಗಬೇಕಷ್ಟೆ' (ಪು:೭೪) ಎಂದು ಹೇಳುವಾಗ ಇರುವ ಸ್ಪಷ್ಟತೆ ಇಂದಿಗೂ ಸ್ತ್ರೀವಾದವನ್ನು ಪೂರ್ವಗ್ರಹ ಪೀಡಿತರಾಗಿ ನೋಡುವವರಿಗೆ ಇಲ್ಲದಿರುವುದೊಂದು ವಿಪರ್ಯಾಸ. ತನ್ನ ದೀರ್ಘ ಹಾದಿಯಲ್ಲಿ ಸ್ತ್ರೀವಾದವು ತನ್ನ ಪ್ರಾಥಮಿಕತೆಯನ್ನೂ, ಎಡರು ತೊಡರುಗಳನ್ನೂ ದಾಟುತ್ತಾ ಸಶಕ್ತವಾದ ಸಿದ್ಧಾಂತವಾಗಿ ಹಲವು ಮಗ್ಗುಲುಗಳಲ್ಲಿ ಬೆಳೆದಿದ್ದು ನಮಗೆಲ್ಲ ತಿಳಿದೇ ಇದೆ.

ಆದರೆ ಇನ್ನೊಂದೆಡೆ ಆಧುನಿಕತೆಯು ಹೆಣ್ಣಿನ ಪರ ಎಂಬ ತೋರುಗಾಣಿಕೆಯ ಹಿಂದೆ ಹೇಗೆ ಹೆಣ್ಣಿನ ಸುತ್ತಲೂ ಒಂದು ಭ್ರಮಾಪರದೆಯನ್ನು ಸೃಷ್ಟಿಸಲಾಗಿದೆ ಎಂಬುದನ್ನು ಸ್ತ್ರೀವಾದಿ ಅಧ್ಯಯನಗಳು ನಮ್ಮ ಮುಂದಿಡುತ್ತಾ ಹೋಗುತ್ತವೆ. ಉದಾ: ಹೆಣ್ಣು ದೇಹ. ಆರೋಗ್ಯ ಕ್ಷೇತ್ರವೇ ಹೆಣ್ಣಿನ ದೇಹದ ಕುರಿತು ಹುಟ್ಟಿಸಿದ ಮಿಥ್‌ಗಳು ಹೇಗೆ ಹೆಣ್ಣಿನ ಆತ್ಮವಿಶ್ವಾಸವನ್ನೇ ನಾಶ ಮಾಡಿತು ಎಂಬ ಅಧ್ಯಯನಗಳನ್ನೇ ನೋಡೋಣ. ವೈಜ್ಞಾನಿಕ ಕ್ರಾಂತಿಯ ಫಲ ಎಂಬುದು ಸಮಾನವಾಗಿ ಪುರುಷನಿಗೂ, ಮಹಿಳೆಗೂ ಒದಗಿ ಬರಬೇಕಾಗಿತ್ತು. ಆದರೆ ಅದುವರೆಗೂ ಮನೆವೈದ್ಯಳಂತೆ ಕೆಲಸ ಮಾಡುತ್ತಿದ್ದ ಹೆಣ್ಣಿನ ಅನುಭವವೇ ಅನಧಿಕೃತವಾಗಿದ್ದೂ ಅಲ್ಲದೇ ಅವಳ ದೇಹದ ಮೇಲೆ ಪುರುಷನಿಗೆ ಅನಿಯಂತ್ರಿತ ಅಧಿಕಾರ ಚಲಾಯಿಸಲು ಅಧಿಕೃತತೆಯನ್ನು ಒದಗಿಸಿದ ವೈರುಧ್ಯವೊಂದು ನಡೆದುಬಿಡುತ್ತದೆ. ಅದರೊಂದಿಗೆ ಅವಳ ಅಧೀನತೆಯ ಚರಿತ್ರೆಯೂ ಬೆಸೆಯುತ್ತದೆ. ಮುಂದೆ ಬಂಡವಾಳಶಾಹಿ ಬೆಳೆದಂತೆಲ್ಲಾ ಅವಳ ದೇಹ ಹಲವು ರೀತಿಯಲ್ಲಿ ಸರಕಾಗಿ ಬಿಡುತ್ತದೆ. ಅಲ್ಲದೆ ಅವಳನ್ನೇ ಸರಕಿನ ಪ್ರಧಾನ ಕೊಳ್ಳುಗಳಾಗಿ ಪರಿವರ್ತಿಸಲಾಗುತ್ತದೆ. ಹೆಣ್ಣು ಇಂತಹ ಉಸುಕಿನಲ್ಲಿ ಹುಗಿದುಕೊಂಡಿರುವ ತನ್ನ ಕಾಲುಗಳನ್ನು ಇಂದಿಗೂ ಮೇಲೆತ್ತಲು ಆಗದೇ ಇರುವುದರ ಹಿಂದಿನ ಗುಟ್ಟುಗಳನ್ನು ಇಲ್ಲಿ ಬಿಚ್ಚಿಡಲಾಗಿದೆ. ಒಮ್ಮೆ ಈ ಒಡಪುಗಳು ಒಡೆದರೆ ಆಗ ನಮಗೆ ಸುತ್ತಲಿನ ಎಲ್ಲಾ ರಾಜಕಾರಣಗಳೂ ಕಾಣತೊಡಗುತ್ತವೆ. ಅದನ್ನು ನಾವೇ ಕಾಣಬೇಕಾಗಿದೆ. ಅದಕ್ಕೊಂದು ತೋರುಗೈಯಾಗಿ ಈ ಕೃತಿ ಕೆಲಸ ಮಾಡುತ್ತದೆ.

ಇನ್ನೊಂದು ಮಹತ್ವದ ಸಂಗತಿ ಎಂದರೆ, ಸ್ತ್ರೀವಾದಕ್ಕೆ ಸಂಬಂಧಿಸಿದ ಕೆಲವು ನೋಟಗಳನ್ನು ತಿಳಿಗೊಳಿಸಿಕೊಳ್ಳುವುದಕ್ಕೆ ಸಹಾಯ ಮಾಡುವ ವಿವರಗಳು ಇಲ್ಲಿವೆ. ಉದಾ: ಸಮಾನತೆ ಎಂಬ ಪದ. ಇದು ಅತಿಬಳಕೆಗೆ ಒಳಗಾದ ಪದವಲ್ಲದೆ, ಅದು ಈಗಾಗಲೇ ತಲೆಯಲ್ಲಿ ಕೂತಿರುವ ಅಸಮಾನತೆಯ ವಿರುದ್ಧ ಪದ ಎಂಬುದರಾಚೆಗೆ ಕೆಲಸ ಮಾಡುತ್ತಿಲ್ಲ. ಶ್ರೀಮತಿಯವರು, ಸ್ತ್ರೀವಾದ ಎಂದರೇನು? ಎಂಬುದನ್ನು ಹೇಳುವಾಗ, 'ಮಹಿಳೆಯರು, ಪುರುಷರೂ ಸಹಜವಾಗಿ ಸಮಾನ ಯೋಗ್ಯರೂ, ಮೌಲ್ಯವುಳ್ಳವರೂ ಆಗಿದ್ದಾರೆ ಎಂಬ ಬಲವಾದ ನಂಬಿಕೆ'(ಪು:೪೧) ಎಂದು ಹೇಳುತ್ತಾ, ಎಸ್ತೆಲ್ ಬಿ ಫ್ರೀಡ್‌ಮನ್ ಸಮಾನತೆ ಎಂಬ ಪದಕ್ಕೆ ಬದಲಾಗಿ ಸಮಾನ ಮೌಲ್ಯ, ಯೋಗ್ಯತೆ ಎಂಬ ಪದ ಬಳಕೆ ಮಾಡುವುದನ್ನು ವಿವರಿಸುತ್ತಾರೆ. ಈ ಪದ ಬಳಕೆಯೇ ಎಷ್ಟೊಂದು ಸಿಕ್ಕುಗಳನ್ನು ಬಿಡಿಸುತ್ತದೆಂದರೆ, ನಾವು ಸಮಾನತೆಯ ಹೆಸರಿನಲ್ಲಿ ಕೇವಲ ರೆಪ್ರಸೆಂಟೇಶನ್‌ಗಾಗಿ ಹೋರಾಡಿ ಸೀಮಿತರಾಗುವ ಅಪಾಯವನ್ನು ಇದು ಮನಗಾಣಿಸುತ್ತದೆ. ರೆಪ್ರಸೆಂಟೇಶನ್ ಕೇಂದ್ರಗಳನ್ನು ಬದಲಿಸುತ್ತದೆಯೇ ಹೊರತು ಚೌಕಟ್ಟುಗಳನ್ನಲ್ಲ. ಬದಲಿಸಬೇಕಾದ್ದು ಚೌಕಟ್ಟುಗಳನ್ನೇ ಹೊರತು ಕೇಂದ್ರವನ್ನಲ್ಲ. ಇನ್ನೊಂದು ಅತ್ಯಂತ ಪ್ರಮುಖವಾದ ಪದ 'ಸಹಜ' ಎನ್ನುವುದು. ಹೆಣ್ಣನ್ನು ದೈವೀಕರಿಸುವುದರ ವಿರುದ್ಧ ಈ ಸಹಜ ಎಂಬ ಪದ ಇಟ್ಟಾಗ ಅದರ ಮಹತ್ವ ಅರಿವಾಗುತ್ತದೆ. ಮತ್ತಿದು ಗಂಡು ಹೆಣ್ಣಿನ ನಡುವಿನ 'ಸ್ಪರ್ಧೆ'ಯೆಂಬ ಮನೋಭಾವವನ್ನು ಕಿತ್ತು ಹಾಕುತ್ತದೆ. ಹಾಗೆಯೇ 'ತಾಯಗುಣ' ಎಂಬ ಪದಬಳಕೆಯ ಮೂಲಕ ವಿವರಿಸುವ ಪರಿಕಲ್ಪನೆ ಕೂಡ ಸ್ಪಷ್ಟತೆಯನ್ನು ಕೊಡುವಂತದು. ತಾಯ್ತನವನ್ನು ವೈಭವೀಕರಿಸಿಕೊಂಡು ಸಂಭ್ರಮಿಸುತ್ತಾ, ಎದುರು ಇರುವ ಪುರುಷರನ್ನು ಭಾವನಾತ್ಮಕವಾಗಿ ಮಣಿಸುವ ಸಾಧನವಾಗಿಯಷ್ಟೇ ಬಳಸಿಕೊಂಡರೆ, ಮತ್ತೆ ಇದು ನಮ್ಮ ಹೆಗಲೇರಿದ ದೆವ್ವವೇ ಅಗುತ್ತದೆ. ಹಾಗಿದ್ದರೆ ಇದನ್ನು ಎದುರುಗೊಳ್ಳುವುದು ಹೇಗೆ? 'ಸ್ತ್ರೀವಾದ ಎಂಬುದು ಶಸ್ತ್ರಾಸ್ತ್ರಗಳನ್ನು ಹಿಡಿದು ಹೊರಡಬಹುದಾದ ಯುದ್ಧದ ಬಗೆಯಲ್ಲ. ಶಾಂತಿ, ಸಹನೆ, ಹೊಂದಾಣಿಕೆ ಎಂಬ ಎಲ್ಲವೂ ಇರುವುದೇ ಎಂಬುದೇನೋ ಸರಿ. ಆದರೆ ಪಿತೃಪ್ರಧಾನತೆಯ ವ್ಯಾಖ್ಯಾನಗಳ ರೀತಿಯಲ್ಲಿ ಅಲ್ಲ. ನಮ್ಮದೇ ವ್ಯಾಖ್ಯಾನದ ತಾಯಗುಣ ಒಂದಿದೆ. ಅದು ಇಡೀ ಸಮುದಾಯಗಳನ್ನು ರಕ್ಷಿಸುವ, ಪೋಷಿಸುವ ಗುರಿಯಲ್ಲಿ ಶಾಂತಿ, ಸಹನೆ, ಹೊಂದಾಣಿಕೆ, ಸ್ನೇಹ ಎಲ್ಲವನ್ನೂ ತನ್ನಲ್ಲಿ ಇರಿಸಿಕೊಂಡಿರುತ್ತದೆ. ಆದರೆ ಸಮುದಾಯಗಳು ತಮ್ಮೊಳಗೇ ತಾರತಮ್ಯ, ದೌರ್ಜನ್ಯಗಳಿಗೆ ತೊಡಗಿದರೆ ಶಿಕ್ಷಿಸಿ ಹತೋಟಿಗೆ ತರುವ ಸಾಮರ್ಥ್ಯದ್ದೂ ಆಗಿರುತ್ತದೆ. ನಮ್ಮ ವ್ಯಾಖ್ಯಾನದ ಎರಡನೆಯ ಭಾಗವನ್ನು ನಾವು ಮರೆತು ಕುಳಿತವರಂತೆ ಇದ್ದು ಬಿಟ್ಟರೆ ನಾವು ಅಧೀನ ನೆಲೆಗಳಿಂದ ಹೊರಬರುವ ಕನಸುಗಳನ್ನು ಕಾಣುವುದು ವ್ಯರ್ಥವೇ' (ಪು:೩೨೦) ಹೀಗೆ ಹೇಳುವ ಮೂಲಕ ನಮ್ಮದೇ ಟ್ರ್ಯಾಪ್‌ಗಳೊಳಗೆ

ನಾವು ಸಿಕ್ಕಿಹಾಕಿಕೊಳ್ಳದಂತೆ ಎಚ್ಚರವನ್ನು ಈ ವ್ಯಾಖ್ಯಾನ ನೀಡುತ್ತದೆ. ಅಲ್ಲದೆ, 'ಅಧಿಕಾರ' ಎಂಬುದನ್ನು ಸ್ತ್ರೀವಾದವು ಪುರುಷ ಚಿಂತನೆಗಿಂತ ಭಿನ್ನವಾಗಿ ವಿವರಿಸಿಕೊಳ್ಳುತ್ತದೆ ಎಂಬುದನ್ನು ಲೇಖಕಿ ಗಮನಕ್ಕೆ ತರುತ್ತಾರೆ. ಪುರುಷ ಚಿಂತನೆಗೆ ಅಧಿಕಾರ ಎಂಬುದು ಎಲ್ಲರನ್ನೂ ಅಧೀನವಾಗಿಸಿಕೊಂಡು ಆಳುವುದು ಎಂದಾಗುತ್ತದೆ. ಆದರೆ, ಸ್ತ್ರೀವಾದಿ ಚಿಂತನೆಯು 'ಅಧಿಕಾರ ಎಂಬುದು ಸ್ವಂತವನ್ನು ನಿರ್ಭಯವಾಗಿ ಪ್ರಸ್ತುತಪಡಿಸಿಕೊಳ್ಳಲು ಅಗತ್ಯವಾದ ಅವಕಾಶ. ಮತ್ತದು ಯಜಮಾನಿಕೆಯನ್ನು ನಿರಾಕರಿಸಿದ ಹೊಣೆಗಾರಿಕೆ' (ಪು: ೩೭)ಎಂದು ಹೇಳುವುದು ಲೋಕವು ಅಧಿಕಾರವನ್ನು ಗ್ರಹಿಸಬೇಕಾದ ಬಗೆಯನ್ನು ಹೇಳುತ್ತಿದೆ. 'ಸಮಾಜ ವ್ಯವಸ್ಥೆಯ ಮುಂದಾಳುತನದಲ್ಲಿ ಹೇಗೋ, ಹಾಗೆಯೇ ಅದನ್ನು ಅನುಸರಿಸುವ ಎಲ್ಲ ಹಂತಗಳಲ್ಲಿಯೂ ಪುರುಷರು ಮತ್ತು ಮಹಿಳೆಯರು ಭಾಗೀದಾರರೆನಿಸಿ ಸಾಗಬೇಕೆಂಬುದು ಸ್ತ್ರೀವಾದದ ಆಶಯ. ಆಗ ಪುರುಷರೂ ಮಹಿಳೆಯರೂ ಏಕಕಾಲಕ್ಕೆ ಪರಸ್ಪರದ ಸಾಹಚರ್ಯದಲ್ಲಿ ಅವಲಂಬಿತರೇ ಅಗಿರುತ್ತಾರಾದರೂ ಸ್ವತಂತ್ರ ವ್ಯಕ್ತಿತ್ವದವರಾಗಿಯೂ ಪರಿಪೂರ್ಣರಾಗಿರುತ್ತಾರೆ.'(ಅದೇ) ಸ್ತ್ರೀವಾದ ಇಷ್ಟು ಸ್ಪಷ್ಟವಾಗಿ ಹೇಳಿದ್ದಾಗ್ಯೂ ಇದನ್ನು ಇನ್ನೂ ಸಮಾಜ ಸರಿಯಾಗಿ ಗ್ರಹಿಸಿದಂತಿಲ್ಲ. ಸ್ತ್ರೀ ಮತ್ತು ಪುರುಷರಿಬ್ಬರೂ ಈ ವಿಷಯದಲ್ಲಿ ಪ್ರಜ್ಞಾವಂತರಾಗಬೇಕಾದ ಅವಶ್ಯಕತೆ ಇದೆ.

ಈ ಕೃತಿಯಲ್ಲಿ 'ಭಾರತದಲ್ಲಿ ಸ್ತ್ರೀವಾದ' ಎಂಬ ಅಧ್ಯಾಯವಿದ್ದು ಇದರಲ್ಲಿ ಹೋರಾಟಗಳ ಮೂಲಕ ರೂಪುಗೊಂಡ ಹಲವು ಸುಧಾರಣೆಗಳನ್ನು ವಿವರಿಸಲಾಗಿದೆ. ಮಹಿಳಾ ಅಧ್ಯಯನವು ಶ್ರೀಮತಿಯವರ ಕಾರ್ಯಕ್ಷೇತ್ರವಾದ್ದರಿಂದಲೋ ಏನೋ ಆ ಕುರಿತ ವಿವರಗಳು ಸ್ವಲ್ಪ ದೀರ್ಘವಾಗಿ ಬಂದಿವೆ. ಈ ಕೃತಿ ಚಿಂತನೆ ಮತ್ತು ಹೋರಾಟಗಳೆರಡನ್ನೂ ಗಮನಿಸಿದೆ. ಸ್ವತಃ ಶ್ರೀಮತಿಯವರು ಚಿಂತನೆಯಲ್ಲಿದ್ದವರೇ ಹೊರತು ಹೋರಾಟದಲ್ಲಿ ಅಲ್ಲ. ಆದರೆ ಇವೆರಡೂ ಸಮಾನವಾಗಿ ಮುಖ್ಯವಾದವು ಎಂಬುದು ಅವರ ನಂಬಿಕೆ. ಕೃತಿಯ ಕೊನೆಯ ಚಿಕ್ಕ ಅಧ್ಯಾಯವಾದ 'ಸ್ತ್ರೀವಾದ: ಒಳನೋಟಗಳು ಮತ್ತು ದಿಕ್ಸೂಚಿಗಳು' ಕನ್ನಡದಲ್ಲಿ ಸ್ತ್ರೀವಾದಕ್ಕೆ ಖಚಿತ ರೂಪುರೇಖೆಗಳನ್ನು ಕೊಡುವಂತಿದೆ. ಸ್ತ್ರೀ ಪ್ರಜ್ಞೆಯನ್ನೇ ವಿಸ್ಮೃತಿಗೆ ತಳ್ಳುವ ಪ್ರಯತ್ನಗಳಿಗೆ ಈಗೀಗ 'ಸ್ತ್ರೀವಾದ ಬೇಕಿಲ್ಲ' ಎಂದು ಹೇಳುವ ಹೆಣ್ಣುಮಕ್ಕಳನ್ನೇ ಮುಂದಕ್ಕೆ ಬಿಡಲಾಗುತ್ತಿದೆ. ಈ ದೃಷ್ಟಿಯಿಂದ ಸ್ತ್ರೀವಾದವನ್ನು ಮೆಡಲ್ ಆಗಿಯೋ, ಅಂಗಿಯಾಗಿಯೋ ಧರಿಸದೇ, ಅದನ್ನು ಜೀವಿಸುವ ತುರ್ತಿದೆ. ಅಂತಹ ಹೊತ್ತಿನಲ್ಲಿ ಹೊರಬಂದಿರುವ ಈ ಗಂಭೀರ ಪುಸ್ತಕವನ್ನು ತಾಳ್ಮೆಯಿಂದ ಓದುವ ಅವಶ್ಯಕತೆ ಇದೆ.

**–ಸಬಿತಾ ಬನ್ನಾಡಿ**

ಪು: **ಶ್ಯಾಮಲಾದೇವಿ** ಲೇ: **ಆರ್. ತಾರಿಣಿ ಶುಭದಾಯಿನಿ** ಪ್ರ: **ಸಾಹಿತ್ಯ ಅಕಾಡೆಮಿ** ಪು: **೯೬** ಬೆ: ರೂ. **೫೦/–**

## ಕನ್ನಡದ ಆದಿ ಕತೆಗಾರ್ತಿಯೊಬ್ಬರ ಸಮರ್ಥ ಪರಿಚಯ



**ಆ**ಧುನಿಕ ಕನ್ನಡ ಸಾಹಿತ್ಯ ರೂಪುಗೊಳ್ಳತೊಡಗಿದ್ದ ಸ್ವಾತಂತ್ರ್ಯ ಪೂರ್ವದ ದಶಕಗಳಲ್ಲಿ ಸಾಹಿತ್ಯ ನಿರ್ಮಾಣದಲ್ಲಿ ತೊಡಗಿಕೊಂಡ ಲೇಖಕಿಯರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ನಂಜನಗೂಡು ತಿರುಮಲಾಂಬ, ಕೊಡಗಿನ ಗೌರಮ್ಮ, ಸರಸ್ವತಿಬಾಯಿ ರಾಜವಾಡೆಯವರ ಸಮಕಾಲೀನರಾಗಿ ಶಾಮಲಾದೇವಿ ಎಂಬ ಉತ್ತರಕರ್ನಾಟಕದ ಲೇಖಕಿಯೊಬ್ಬರಿದ್ದರೆಂಬುದು ಸಾಹಿತ್ಯದ ಇಂದಿನ ಪೀಳಿಗೆಯ ಅನೇಕರಿಗೆ ಗೊತ್ತೇ ಇರಲಿಕ್ಕಿಲ್ಲ. ಹೊಸಗನ್ನಡ ಸಾಹಿತ್ಯದ ಆರಂಭಿಕ ಕಾಲಘಟ್ಟದಲ್ಲೇ ಸ್ತ್ರೀ ಸಂವೇದನೆಯ ಅಡಿಪಾಯ ಹಾಕಿದ ಶಾಮಲಾದೇವಿ ಅವರ ಬದುಕು ಬರಹವನ್ನು ನಿರೂಪಿಸುವ ಕಿರುಹೊತ್ತಿಗೆ ಇದು.

ಶಾಮಲಾದೇವಿ ಕೇವಲ ಕುರ್ಚಿ–ಮೇಜಿನ ಲೇಖಕಿಯಾಗಿರದೆ ಅಸಾಧ್ಯವೆನಿಸುವಷ್ಟು ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಧೀಮಂತ ಮಹಿಳೆಯಾಗಿದ್ದರು. ಸಾಹಿತ್ಯ, ಪತ್ರಿಕೋದ್ಯಮ, ಮಹಿಳಾ ಸಂಘಟನೆ, ಮಕ್ಕಳಕೂಟ ಹೀಗೆ ಅವರು ಕೆಲಸ ಮಾಡಿದ ಕ್ಷೇತ್ರಗಳು ಒಂದೆರಡಾಗಿರಲಿಲ್ಲ. ಧಾರವಾಡದ ಗೆಳೆಯರ ಗುಂಪಿನ ಕ್ರಿಯಾಶೀಲತೆಗೆ ಸಾಕ್ಷಿಯಾಗಿದ್ದ 'ಜಯಕರ್ನಾಟಕ' ಪತ್ರಿಕೆಯನ್ನು ಪತಿ ರಾಮಚಂದ್ರ ಬೆಳಗಾಂವ್‌ಕರ್ ಅವರೊಂದಿಗೆ ಪ್ರಕಟಿಸಿದ ಹಿರಿಮೆ ಇವರದ್ದು.

ಶಾಮಲಾದೇವಿ ಉತ್ತರ ಕರ್ನಾಟಕದ ಮೊದಲ ಕತೆಗಾರ್ತಿ.. ಅವರ 'ಹೂ ಬಿಸಿಲು' ಮತ್ತು 'ಹೊಂಬಿಸಿಲು' ಎಂಬ ಎರಡು ಸಂಕಲನಗಳಲ್ಲಿ ಪ್ರಕಟವಾಗಿರುವ ಕತೆಗಳ ಸಂಕ್ಷಿಪ್ತ ವಿವರ ಮತ್ತು ವಿಶ್ಲೇಷಣೆ ಇಲ್ಲಿದೆ. ಮೂವರು ನಾಗರೀಕರು, ಮಹಾಶಿವರಾತ್ರಿ, ದೊಡ್ಡಮ್ಮ ನೋಡಿದವರ, ನನ್ನನ್ನು ನೋಡಲಿಕ್ಕೆ ಬಂದಾಗ, ಸವತಿಯರು, ವಸಂತರಾಯನ ಮದುವೆ, ಕಂತಿಯ ದೇಶಾಂತರ ಮುಂತಾದವು ಶಾಮಲಾ ಅವರ ಪ್ರಮುಖ ಕತೆಗಳಾಗಿದ್ದು ಉತ್ತರ ಕರ್ನಾಟಕದ ಆ ಕಾಲದ ಜನಜೀವನವನ್ನು ನಿರ್ಭಿಡೆಯಿಂದ ಚಿತ್ರಿಸುತ್ತವೆ. 'ಶಾಮಲಾ ಅವರು ಪ್ರಗತಿಶೀಲ ಪಂಥವನ್ನು ಮುನ್ನವೇ ನಿರೀಕ್ಷಿಸುತ್ತಿದ್ದರೆಂಬಂತೆ ಅವರ ಕತೆಗಳ ಪ್ರಧಾನ ವಸ್ತು ವೇಶ್ಯಾ ಸಮಸ್ಯೆಯಾಗಿರುವುದು' ಎಂದು ತಾರಿಣಿಯವರು ಗುರುತಿಸುತ್ತಾರೆ. ಮುಂದೆ ಬಂದ ಪ್ರಗತಿಶೀಲ ಪಂಥದ ಅನಕೃ, ತರಾಸು ಅವರುಗಳು ಈ ಸಮಸ್ಯೆಯನ್ನು ಪ್ರಜ್ಞಾಪೂರ್ವಕವಾಗಿ ಎತ್ತಿಕೊಂಡು ಬರೆಯಲಾರಂಭಿಸಿದರಲ್ಲದೆ ಸಮಸ್ಯೆಯನ್ನು ವೈಭವೀಕರಿಸಿದ್ದರ ಬಗ್ಗೆ ಹೇಳುತ್ತಾ ಅದೇ ಶಾಮಲಾ ಅವರ ಕತೆಗಳಲ್ಲಿ ಇದು ನೈಜ ಕಾಳಜಿಯಿಂದ ಬಿಂಬಿತವಾಗಿದ್ದು ನೋವಿನ ಮಿಡಿತ ಕೇಳಿಸುತ್ತದೆ ಎನ್ನುತ್ತಾರೆ.

ದೇವಸ್ಥಾನದಲ್ಲಿ ನರ್ತನ, ಹಾಡುಗಾರಿಕೆ ವೃತ್ತಿ ಮಾಡುವ ಪಾತರದವರ ವರ್ಗಕ್ಕೆ ಸೇರಿದ ಶಾಮಲಾ ಅವರದು ಅಂತರ್ಜಾತೀಯ ಮದುವೆಯೂ ಆಗಿದ್ದರಿಂದ ಜಾತಿ ಪ್ರಾಬಲ್ಯವಿದ್ದ ಅಂದಿನ ಸಮಾಜದಲ್ಲಿ ಹೆಜ್ಜೆ, ಹೆಜ್ಜೆಗೂ ಕಷ್ಟಗಳನ್ನು ಎದುರಿಸಬೇಕಿತ್ತು. ಧಾರವಾಡದ ಕೆರೆ ದಂಡೆಯ ಮೇಲೆ ಗಂಡ ಹೆಂಡತಿ ಒಟ್ಟಿಗೆ ವಾಕಿಂಗ್ ಹೋಗುವುದನ್ನೂ ಜನರು ಆಡಿಕೊಳ್ಳುತ್ತಿದ್ದರೆಂದರೆ ಆಗಿನ ಸಾಮಾಜಿಕ ಸಂದರ್ಭ ಹೇಗಿತ್ತೆಂದು ಊಹಿಸಿಕೊಳ್ಳಬಹುದು. ಆದರೆ ದೈಹಿಕವಾಗಿ ಮಾನಸಿಕವಾಗಿ 'ಗಟ್ಟಿಗಿತ್ತಿ'ಯಾಗಿದ್ದ ಅವರು ಯಾವುದನ್ನು ಲೆಕ್ಕಿಸದೆ ಮುನ್ನುಗ್ಗುವ ಛಾತಿವುಳ್ಳವರಾಗಿದ್ದರಿಂದ ಹಲವು ರಂಗಗಳಲ್ಲಿ ಯಶಸ್ಸು ಗಳಿಸಲು ಸಾಧ್ಯವಾಯಿತು. ಇನ್ನೊಂದು ರೀತಿಯಲ್ಲಿ ಅಂತರ್ಜಾತಿ ಮದುವೆಗಳು ಮಹಿಳೆಯರಿಗೆ ಸಾಂಪ್ರದಾಯಿಕ ಸಿದ್ಧಮಾದರಿಯ ಜೀವನ ಶೈಲಿಯಿಂದ ಹೊರಬಂದು ತಮಗಿಷ್ಟವಾದ ರೀತಿಯಲ್ಲಿ ಸ್ವತಂತ್ರ ಬದುಕನ್ನು ರೂಪಿಸಿಕೊಳ್ಳಲು ನೆರವಾಗುವುದರಿಂದ ಶಾಮಲಾ ಅವರಿಗೆ ಸಾರ್ವಜನಿಕ ಜೀವನದಲ್ಲಿ ಹೆಚ್ಚು ಹೆಚ್ಚು ತೊಡಗಿಕೊಳ್ಳಲು ಸಾಧ್ಯವಾಯಿತೆನ್ನಬಹುದು. ಆದರೆ ಇತಿಹಾಸದ ಪುಟಗಳಲ್ಲಿ ಇಂತಹವರ ಸುಳಿವೇ ಇಲ್ಲದಂತಾಗುತ್ತದೆ. 'ಮುಖ್ಯವಾಹಿನಿಯ ಲೇಖಕರ ಬಗೆಗೆ ತಿಳಿದುಕೊಳ್ಳುವ ಸಂದರ್ಭ ಬಂದರೆ ಚರಿತ್ರೆಗೆ ಎಷ್ಟೊಂದು ನಿಚ್ಚಳ ಹೆಜ್ಜೆಗಳಿವೆ! ಆದರೆ ಶಾಮಲಾ ಜೀವನ ವಿವರಗಳು ಚರಿತ್ರೆಯಲ್ಲಿ ದಾಖಲಾಗುವುದೇ ಇಲ್ಲ. ಶಾಮಲಾ ಅವರ ಬದುಕಿನ ಅನೇಕ ವಿವರಗಳು ಇಂದಿಗೂ ಅಜ್ಞಾತವಾಗಿಯೇ ಉಳಿದಿವೆ. ಅವರ ತಂದೆ, ತಾಯಿ ಯಾರು? ಒಡಹುಟ್ಟುಗಳು ಯಾರು? ಇತ್ಯಾದಿ ಪ್ರಶ್ನೆಗಳಿಗೆ ಈಗಲೂ ಖಚಿತ ಉತ್ತರವಿಲ್ಲ'. ಲೇಖಕರ ಈ ಮಾತುಗಳಿಂದ ಈ ಪುಸ್ತಕವನ್ನು ರೂಪಿಸಲು, ಜೀವನ ವಿವರಗಳನ್ನು ಸಂಗ್ರಹಿಸಲು ಎಷ್ಟೆಲ್ಲ ಪರಿಶ್ರಮಪಡಬೇಕಾಗುತ್ತದೆ ಎಂಬುದನ್ನು ಊಹಿಸಬಹುದು.

ಶಾಮಲಾದೇವಿಯವರ ಬಗೆಗಿನ ಈ ಕೃತಿ ಅವರ ಜೀವನಕತೆಯೂ ಆಗಿರುವುದರಿಂದ ಅವರ ಕೆಲವು ಭಾವಚಿತ್ರಗಳನ್ನು ಒಳಗೊಂಡಿದ್ದರೆ ಚೆನ್ನಾಗಿರುತ್ತಿತ್ತು ಎನ್ನಿಸುತ್ತಾದರೂ, ಆದರೆ ಪುಸ್ತಕದ ಮುಖಪುಟಕ್ಕೆ ಬಳಸಲೂ ಒಂದು ಒಳ್ಳೆಯ ಚಿತ್ರ ದೊರೆಯದಿರುವಂತಹ ಕಾಲಘಟ್ಟದಲ್ಲಿ ಅವರು (ಅದೂ ಕೇವಲ ೩೩ ವರ್ಷ) ಬದುಕಿದ್ದರಿಂದ ಹೆಚ್ಚಿನದನ್ನು ನಿರೀಕ್ಷಿಸಲಾಗದು.

**–ಎನ್. ಎಂ. ಕುಲಕರ್ಣಿ**

ಪು: **ಬಸಂತ** ಲೇ: **ಕಮಲಾ ಹಂಪನಾ** ಪ್ರ : **ಸಪ್ನ ಬುಕ್ ಹೌಸ್**, ಬೆಂಗಳೂರು ಪು: **489** ಬೆಲೆ :: **ರೂ. 360/–**

## ಉಪಯುಕ್ತ ಅನುವಾದ ಮತ್ತು ಸಂಶೋಧನೆ



**ಹಿ**ರಿಯ ಲೇಖಕಿ ಕಮಲಾ ಹಂಪನಾ ಇವರ ಸಮಗ್ರ ಸಾಹಿತ್ಯದ ಹತ್ತನೇ ಸಂಪುಟವಿದು. ಈ ಕೃತಿ ಸೋಮದೇವಸೂರಿಯ 'ನೀತಿವಾಕ್ಯಾಮೃತ ರಾಜನೀತಿಯ ಕೈಗನ್ನಡಿ' ಇದರ ತಿಳಿಗನ್ನಡ ಭಾವಾನುವಾದವಾಗಿದೆ. ಬಸಂತ ಎನ್ನುವುದು ನನ್ನ ಅನುಭಾವ ಅಭಿವ್ಯಕ್ತಿ ಎಂದಿದ್ದಾರೆ ಲೇಖಕಿ.

ಭಾಗ ಒಂದರಲ್ಲಿ 'ರಾಜನೀತಿ' ಇದ್ದರೆ ಎರಡನೇ ಭಾಗದಲ್ಲಿ 'ಮಹಾಮಂಡಲೇಶ್ವರಿ ರಾಣಿ ಚೆನ್ನಾದೇವಿ ಮತ್ತು ಇತರ ಕರಾವಳಿ ರಾಣಿಯರು' ಎಂಬ ಜೀವನ ಚರಿತ್ರೆಗಳನ್ನು ಒಳಗೊಂಡಿದೆ. ಸಮುದ್ದೇಶ ಎಂದು ಕರೆಯಲಾಗಿರುವ ಸುಮಾರು ೩೨ ಅಧ್ಯಾಯಗಳಲ್ಲಿರುವ ಒಂದೊಂದು ಸೂಕ್ತಿಯೂ ಇಂದಿಗೂ ಎಂದೆಂದಿಗೂ

ಪ್ರಸ್ತುತವಾದ ಸೂಕ್ತಿಗಳ ಭಾವಾನುವಾದವಾಗಿದೆ. ಡಾ॥ ಹಂಪಾನಾ ಅವರು ಸಂಶೋಧಿಸಿ ಪ್ರಕಟಿಸಿರುವ ಕೊಪ್ಪಳದ ನಿಶದಿ ಶಾಸನ ಕುರಿತು, ಆಚಾರ್ಯ ಸೋಮದೇವನ ಕುರಿತು, ಒಮ್ಮೆ ಉಪನ್ಯಾಸ ನೀಡಿದ್ದು ಕೃತಿರಚಿಸಲು ಪ್ರೇರಣೆಯಾಯಿತೆಂದು ಲೇಖಕಿ ಹೇಳಿದ್ದಾರೆ. ಸೋಮದೇವ ಸೂರಿ ಜೈನಕವಿ ಇರಬಹುದು ಎಂದು ರಂ. ಶ್ರೀ ಮುಗಳಿ ಹೇಳುತ್ತಾರೆ.

ಸಮುದ್ದೇಶಗಳಲ್ಲಿ ಹತ್ತನೇ ಶತಮಾನದ ಸಾಮಾಜಿಕ ರಾಜಕೀಯ ಸಂಗತಿಗಳಿಗೆ ಮಾರ್ಗದರ್ಶನ ನೀಡಬಲ್ಲ ಸೂಕ್ತಿಗಳು ಇಂದಿಗೂ ಪ್ರಸ್ತುತವೆನ್ನಿಸಬಹುದಾದಷ್ಟು ನಾವೀನ್ಯತೆಯಿಂದ ಕೂಡಿ ವಿಚಾರ ಪ್ರಚೋದಕವಾಗಿರುವುದು ಕುತೂಹಲಕಾರಿಯಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರ, ನೀತಿಶಾಸ್ತ್ರ, ಮತ್ತು ಧರ್ಮಶಾಸ್ತ್ರಗಳ ಅಧ್ಯಯನದಿಂದ ಈ ಸೂಕ್ತಿಗಳು ಮೂಡಿ ಬಂದಿವೆ. ಧರ್ಮ, ಅರ್ಥ, ಕಾಮಗಳ ಕುರಿತು ಹೇಳಲಾಗಿದೆ. ಪ್ರಭುಸಂಹಿತಾ, ಕಾಂತಾ ಸಂಹಿತಾ, ಮತ್ತು ಮಿತ್ರಸಂಹಿತಾ ಎಂಬ ವಿಭಾಗಗಳನ್ನು ಮಾಡಲಾಗಿದೆ. ಶಾಸ್ತ್ರಗ್ರಂಥವಾದರೂ ಕಾವ್ಯಗುಣದಿಂದ ಕೂಡಿರುವುದು ಈ ಕೃತಿಯ ವಿಶೇಷವಾಗಿದೆ.

ಈ ಕೃತಿಯಲ್ಲಿ ಆಗಸದ ಕೆಳಗಿನ ಎಲ್ಲಾ ವಿಚಾರಗಳೂ ಇವೆ ಎನ್ನಬಹುದು. ಆಡಳಿತ, ರಾಜ ಮಂತ್ರಿ, ಸರ್ಕಾರಗಳು ಪಾಲಿಸಬೇಕಾದ ಸಂಗತಿಗಳ ಬಗ್ಗೆ, ಮನುಷ್ಯರ ಸ್ವಭಾವ, ಮನೋವ್ಯಾಪಾರ, ಹೆಣ್ಣು ಗಂಡು ಸಂಬಂಧ, ತಂದೆ ತಾಯಿ ಮಿತ್ರ ಶತ್ರು ಮಗ ಮಗಳು ಸಂಭ್ರಮ ಸಾಲ ಲಂಚ ಭ್ರಷ್ಟಾಚಾರ ಹೀಗೆ ಹೆಸರಿಸುತ್ತಾ ಹೋದರೆ ಮನುಷ್ಯಲೋಕದ ಎಲ್ಲಾ ವ್ಯವಹಾರಗಳಿಗೆ ನೀತಿಬೋಧಕ ಮಾರ್ಗದರ್ಶಕ ಸೂಕ್ತಿಗಳು ಕಾವ್ಯದಂತೆ ಓದಿಸಿಕೊಳ್ಳುತ್ತವೆ. ಏಕತಾನತೆಯಿಲ್ಲದೆ ಪ್ರತಿಯೊಂದೂ ಉದಾಹರಣೆ ಮೂಲಕ ತಿಳಿಸಲಾಗಿದೆ. ತಿಳಿಗನ್ನಡದ ಭಾವಾನುವಾದ ಕೂಡ ವಿಶೇಷವಾಗಿದ್ದು ಕನ್ನಡಶಾಸ್ತ್ರ ಸಾಹಿತ್ಯಕ್ಕೆ ವಿಶೇಷ ಕೊಡುಗೆಯೇ ಸರಿ. ಕೆಲವು ಸೂಕ್ತಿಗಳನ್ನು ಓದುಗರ ಅವಗಾಹನೆಗೆ ತರುವುದಾದರೆ

'ಕೋಶವೇ ರಾಜ, ರಾಜನಿಗೆ ದೇಹವಿಲ್ಲ'

'ಲಂಚವೇ ಎಲ್ಲಾ ಪಾತಕಗಳಿಗೆ ಮೂಲ'

'ದೇವರ ಆಕಾರದ ಕಲ್ಲನ್ನು ಪೂಜಿಸುವುದಾದರೆ ಮನುಷ್ಯನನ್ನೇಕೆ ಪೂಜಿಸಬಾರದು'

'ದುಷ್ಟಶಿಕ್ಷೆಯನ್ನು ಮಾಡದಿದ್ದರೆ ರಾಜ್ಯವು ನರಕವಾಗುವುದು'

'ಲಂಚವನ್ನು ತೆಗೆದುಕೊಳ್ಳುವ ಅಧಿಕಾರಿಗಳು ಟಗರನ್ನು ಕಟುಕರಿಗೆ ಮಾರುವಂತೆ ಅರಸನನ್ನು ಮಾರಿಬಿಡುತ್ತಾರೆ.'

ಮನೆಯ ಸೂಕ್ಷ್ಮ ಸಂಗತಿಗಳನ್ನು ಬಂದವರ ಮುಂದೆ ಪ್ರಕಟಿಸಬಾರದು ಎಂಬ ಸೂಕ್ಷ್ಮ ಸಂಗತಿಗಳೂ

'ಹಾಲಿಗೆ ನೀರಿಗಿಂತ ಉತ್ತಮವಾದ ಮಿತ್ರ ಇನ್ನೊಂದಿಲ್ಲ ಏಕೆಂದರೆ ಅದು ಹಾಲಿನೊಂದಿಗೆ ಸೇರಿದ ಮಾತ್ರದಿಂದಲೇ ಅದನ್ನು ವೃದ್ಧಿಗೊಳಿಸುತ್ತದೆ ಆಪತ್ಕಾಲದಲ್ಲಿ ತಾನು ಕ್ಷೀಣಿಸಿ ಹಾಲನ್ನ ರಕ್ಷಿಸುತ್ತದೆ' ಎಂಬ ಉದಾಹರಣೆಯೊಂದಿಗಿನ ಸೂಕ್ತಿಗಳು ಅದೆಷ್ಟು ಚೆನ್ನಾಗಿವೆಯಲ್ಲವೆ? ಹಾಗೇ ಈ ಸೂಕ್ತಿಗಳಲ್ಲಿ ಕೆಲವು ವೈರುಧ್ಯಗಳನ್ನೂ ಕಾಣಬಹುದು. ಅದು ಆ ಕಾಲದ ನೀತಿ ನಿಯಮಗಳಿಗೆ ಅನುಸಾರವಾಗಿವೆ ಎನ್ನಬಹುದು.

ರಾಜರಕ್ಷಾ ಸಮುದ್ಧೇಶದಲ್ಲಿ ಸ್ತ್ರೀಯರಿಂದ ರಾಜನನ್ನು ರಕ್ಷಿಸಬೇಕು ಎಂದು ಸೂಚಿಸುವ ಸೂಕ್ತಿಗಳಿವೆ; ಮೊಸಳೆಯ ದವಡೆಯಂತೆ ಸ್ತ್ರೀಯರು ಸಹಜವಾಗಿಯೇ ವಕ್ರಸ್ವಭಾವವುಳ್ಳವರು. ಸ್ತ್ರೀಯರನ್ನು ವಶಪಡಿಸಿಕೊಳ್ಳುವ ಉಪಾಯವು ದೇವರಿಗೂ ದುರ್ಲಭ.

ಸ್ತ್ರೀಯರನ್ನು ನಂಬುವುದು ಮರಣಾಂತಿಕವಾದುದು ಎಂಬ ಆ ಕಾಲಕ್ಕೆ ತಕ್ಕನಾಗಿ ಹೆಣ್ಣು ಸದಾ ಗಂಡಸಿಂದ ರಕ್ಷಿಸಲ್ಪಡಬೇಕು ಪೋಷಿಸಲ್ಪಡಬೇಕು ಹಾನಿಗೊಳಗಾಗಬಾರದು ಎಂಬಂತಹ ಸೂಕ್ತಿಗಳೂ ಇವೆ.

ಇನ್ನು ಎರಡನೇ ಭಾಗದಲ್ಲಿ ಕವಯಿತ್ರಿ ರಾಣಿ ನಾಗಲಾದೇವಿ – ಸಂಸ್ಕೃತ – ಕನ್ನಡ ಎರಡೂ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದಳು. ಕನ್ನಡವನ್ನು ಸುಖದಾಯಕ ಭಾಷೆ ಎಂದು ಕರೆದ ಅವಳ ಕುರಿತ ಪರಿಚಯ, ಹಾಗೂ ರಾಣಿ ಚೆನ್ನಾದೇವಿ, ವೀರಾದೇವಿ, ರಾಣಿ ಅಬ್ಬಕ್ಕ, ಕಿರಿಯ ರಾಣಿ ಅಬ್ಬಕ್ಕ ಮೊದಲಾದ ವೀರವನಿತೆಯರನ್ನು ಪರಿಚಯಿಸುವ ಲೇಖನಗಳಿವೆ. ಇಟಲಿಯ ಪ್ರವಾಸಿ ಪಿತ್ರೋ ರಾಣಿ ಅಬ್ಬಕ್ಕನನ್ನು ಕುರಿತು ಹೇಳುವ ವಿಚಾರಗಳು ಕುತೂಹಲಕರವೂ ಆಸಕ್ತಿದಾಯಕವೂ ಆಗಿವೆ. ಮತ್ತು ಭಟ್ಕಳ, ಹಾಡುವಳ್ಳಿ ಮೊದಲಾದ ಊರುಗಳ ಐತಿಹ್ಯ ಮೂಲ ಹೆಸರುಗಳು, ಪೋರ್ಚುಗೀಸರ ವ್ಯಾಪಾರಕೇಂದ್ರ, ಅಲ್ಲಿಯ ವ್ಯವಹಾರ, ಹೀಗೆ ಹತ್ತು ಹಲವು ಸಂಶೋಧನಾತ್ಮಕ ಬರಹಗಳ ಸೊಗಸಾದ ಭಾವಾನುವಾದಗಳ ಸೂಕ್ತಿಗಳಿಂದ ಕೂಡಿರುವ ಈ ಕೃತಿ ಸಂಗ್ರಹಯೋಗ್ಯವಾಗಿದೆ.

**–ಮಂಜುಳಾ ಎಂ. ರಾಜು**

**೯ನೇ ಪುಟದಿಂದ)**

ಹೆಣ್ಣುಮಕ್ಕಳನ್ನು ಪಿಯುಸಿಗೆ ಸೇರಿಸಿ, ಕ್ಯಾಲೆಂಡರಿನಲ್ಲಿ ಆ ದಿನ ಬರುತ್ತಿದ್ದಂತೆ ಮದುವೆ ಮಾಡಿ ಮುಗಿಸುವ ಪೋಷಕರಿಗೇನು ಕಡಿಮೆ ಇಲ್ಲ. ಇದೂ ಒಂದರ್ಥದಲ್ಲಿ ಬಾಲ್ಯ ವಿವಾಹವೇ !

ಆಧುನಿಕ ಬದುಕು ಸೃಷ್ಟಿಸುತ್ತಿರುವ ಅನೇಕ ಸವಾಲುಗಳು ಮತ್ತು ಅವು ಹದಿಹರೆಯದ ಮಕ್ಕಳಲ್ಲಿ ಉಂಟುಮಾಡುವ ಗೊಂದಲಗಳನ್ನು ಎದುರಿಸಲು ೧೮ ತೀರಾ ಕಡಿಮೆ ವಯಸ್ಸು. ಮಾತ್ರವಲ್ಲ, ಹೆಣ್ಣು ಮಕ್ಕಳ ಮಾನಸಿಕ, ಬೌದ್ಧಿಕ ಮತ್ತು ದೈಹಿಕ ಸ್ಥಿತಿ ಸರಿಯಾಗಿ ವಿಕಾಸಗೊಳ್ಳಲು ಮತ್ತು ಆಕೆ ತನ್ನದೇ ಕನಸನ್ನು ಕಟ್ಟಿಕೊಳ್ಳಲು ಕೇವಲ ಪಿಯುಸಿ ಹಂತದ ವಿದ್ಯಾರ್ಹತೆ ಏನೇನೂ ಸಾಲದು. ಪೋಷಕರ ಒತ್ತಾಯಕ್ಕೆ ಮಣಿದು ಮದುವೆಗೆ ಕೊರಳೊಡ್ಡಿದವರಷ್ಟೇ, ಪ್ರೇಮ–ಮೋಹಕ್ಕೆ ಬಿದ್ದು ಓದಿನಿಂದ ವಿಮುಖರಾದವರನ್ನೂ ಈ ಮಾತಿಗೆ ನಿದರ್ಶನವನ್ನಾಗಿ ನೀಡಬಹುದು. ಆದ್ದರಿಂದ, ಹೆಣ್ಣು ಗಂಡಿನ ಸಮಾನತೆಯನ್ನು ಎತ್ತಿಹಿಡಿಯುತ್ತಿರುವ ಈ ಕಾಲದಲ್ಲಿ ಹೆಣ್ಣಿಗೂ ಮದುವೆಯ ವಯಸ್ಸನ್ನು ೨೧ಕ್ಕೆ ಏರಿಸಿದರೆ ಅಸಂಖ್ಯ ಹಳ್ಳಿ ಹೆಣ್ಮಕ್ಕಳ 'ಹದಿನೆಂಟರ ಹೊಯ್ದಾಟ' ತಪ್ಪಬಹುದು. ಎಸ್ಸೆಸ್ಸೆಲ್ಸಿ, ಪಿಯುಸಿಗೇ ಹೆಣ್ಮಕ್ಕಳನ್ನು ಓದು ಬಿಡಿಸಿ, ಮನೆವಾರ್ತೆಗೆ ಹಚ್ಚುವ ಪೋಷಕರ ಮನೋಧರ್ಮವೂ ಬದಲಾಗಬಹುದು. ಪೋಷಕರ 'ಮದುವೆ'ಯ ಒತ್ತಾಯ; ಒತ್ತಡ ತಂತ್ರಗಳಿಂದ ಹೇಗೋ ಪಾರಾಗಿ, ಡಿಗ್ರಿ ಕಾಲೇಜು ಸೇರಿ; ಓದು ಮುಗಿಸಿ, ಉದ್ಯೋಗ ಹಿಡಿದು ಆತ್ಮ ಸ್ಥೈರ್ಯ; ಸ್ವಾಭಿಮಾನದಿಂದ ಮಾತನಾಡುವ ಅದೇ ಹಳ್ಳಿಯ ಹುಡುಗಿಯರನ್ನು ಕಂಡಾಗ ಮನಸ್ಸಿಗೆ ಹಿತ ಎನ್ನಿಸುತ್ತದೆ. 'ಹದಿನೆಂಟರ ಹೊಯ್ದಾಟ' ತಪ್ಪಲಿ ಎಂದು ಅದೇ ಮನಸ್ಸು ಬಯಸುತ್ತದೆ.



**(ಮೈಸೂರು ಜಿಲ್ಲೆಯ ಗ್ರಾಮಾಂತರದ ಪ.ಪೂ. ಕಾಲೇಜೊಂದರಲ್ಲಿ ಇಂಗ್ಲಿಷ್ ಉಪನ್ಯಾಸಕಿಯಾಗಿರುವ ಸ್ನೇಹಾ ಭರತನಾಟ್ಯ ಕಲಾವಿದೆ ಕೂಡ ಹೌದು)**


Statement about Ownership and other particulars about News paper 'Hosa Manushya'

FORM 1V

| | |
|---|---|
| 1. Place of Publication : | Shimoga |
| 2. Printers name : | D.S. Nagabhushana |
| Nationality : | Indian |
| Address : | HIG-5, 'Nudi', Kallalli Extn, Vinoba Nagara Shimoga-577204 |
| 3. Publishers Name: | D.S.Nagabhushana |
| Nationality : | Indian |
| Address : | Same as above |
| 4. Editor's name : | D.S.Nagabhushana |
| Nationality : | Indian |
| Adddress : | Same as above |
| 5. Name of Individuals who own the News paper : | D.S.Nagabhushana, |
| Address : | Same as above |

I, D.S.Nagabhushana hereby declare that the particulars given above are true to the best of my knowledge and belief.

Shimoga Sd/-
31.3.2020 D.S.Nagabhushana


ಹಿರಿಯ ಸಮಾಜವಾದಿ ಧಾರವಾಡದ ರಾಚಪ್ಪ ಹಡಪದ ಅವರ ನಿಧನಕ್ಕಾಗಿ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ–ಸಂ.

# ಧರ್ಮ-ಸಂಸ್ಕೃತಿ-ರಾಜಕಾರಣ ಇತ್ಯಾದಿ : ಗೆಳೆಯರೊಬ್ಬರು ತಿರುಗಿ ಬಿದ್ದಾಗ...

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಎರಡು ಶ್ರದ್ಧಾಂಜಲಿ ಬರಹಗಳಲ್ಲಿ ಒಂದು ಪೇಜಾವರ ಶ್ರೀಗಳನ್ನು ಕುರಿತಾದದ್ದು. ಅದನ್ನು ಬರೆದವರು ರಾಜಾರಾಂ ತೋಳ್ಪಾಡಿ. ಪೇಜಾವರರು ಧರ್ಮದ ಹೆಸರಿನಲ್ಲಿ ಮಾಡುತ್ತಾ ಬಂದಿದ್ದ ರಾಜಕಾರಣವನ್ನು ನಾನು ವೈಯಕ್ತಿಕವಾಗಿ ಇಷ್ಟಪಟ್ಟವನಲ್ಲವಾದರೂ, ಅವರು ರಾಜ್ಯದ ಸಾರ್ವಜನಿಕ ಜೀವನದ ಒಂದು ಗಣನೀಯ ಭಾಗವೇ ಆಗಿಬಿಟ್ಟಿದ್ದುದರಿಂದ ಅವರ ನಿಧನದ ಸಂದರ್ಭದಲ್ಲಿ ಅವರನ್ನು ಕುರಿತ ಒಂದು ವಿಮರ್ಶಾತ್ಮಕ ಬರಹ ಉಚಿತವೆಂದು ಭಾವಿಸಿದೆ. ನಾನು ಬರೆದರೆ ಅದರಲ್ಲಿ ಪೂರ್ವಗ್ರಹಗಳು ಬೆರತಾವು ಎಂಬ ಅನುಮಾನದಿಂದ ನಾನು ಪೇಜಾವರರ ಹತ್ತಿರದ ಬಂಧುವಾದ ಮತ್ತು ಅವರನ್ನು ನಿಕಟವಾಗಿ ಬಲ್ಲ ರಾಜಾರಾಮ್ ತೋಳ್ಪಾಡಿಯರನ್ನು ಬರೆಯಲು ಕೋರಿದೆ. ಹೇಗೂ ಅವರು ಲೋಹಿಯಾ ವಿಚಾರಗಳಿಂದ ಪ್ರಭಾವಿತರಾಗಿರುವ ಸಮಾಜವಾದಿ ಎಂದು ಹೆಸರಾದವರಲ್ಲವೆ? ತೋಳ್ಪಾಡಿ ಬರೆಯಲು ಸಂತೋಷದಿಂದ ಒಪ್ಪಿಕೊಂಡರು. ನಾನು ಪತ್ರಿಕೆಯ ಪೂರ್ವ ನಿಯೋಜಿತ ಪುಟ ವಿನ್ಯಾಸಕ್ಕೆ ತಕ್ಕಂತೆ ಅವರ ಲೇಖನ ೩೦೦ ಶಬ್ದಗಳನ್ನು ಮೀರದಂತಿರಲಿ ಎಂದೂ ಹೇಳಿದ್ದೆ. ಇದೇ ಮಾತನ್ನು ಎಂ. ಚಿದಾನಂದ ಮೂರ್ತಿಯವರನ್ನು ಕುರಿತು ಬರೆಯಲು ಕೋರಿದ್ದ ಎಚ್ಚೆಸ್ಸಾರ್ ಅವರಿಗೂ ಹೇಳಿದ್ದೆ. ನಾನು ಸೂಚಿಸಿದ್ದ ಗಡುವಿನಲ್ಲಿ ಲೇಖನ ಬರದಿದ್ದರಿಂದ ತೋಳ್ಪಾಡಿಯವರಿಗೆ ಕರೆ ಮಾಡಿದೆ. ಅವರು ಲೇಖನ ಸಿದ್ಧವಾಗಿದೆಯಾದರೂ ಅದು ಸುಮಾರು ೫೦೦ ಶಬ್ದಗಳಾಗಿವೆ ಎಂದೂ, ಇನ್ನೆರಡು ದಿನಗಳಲ್ಲಿ ಅದನ್ನು ೩೦೦ ಶಬ್ದಗಳಿಗೆ ಇಳಿಸಿ ಕಳಿಸುವುದಾಗಿ ತಿಳಿಸಿದರು. ನಾನು ಆಗ ಮತ್ತೆ ಬರಹ ವಿಮರ್ಶಾತ್ಮಕವಾಗಿರಲಿ ಎಂದು ನೆನಪು ಮಾಡಿದೆ. ಅವರೂ, 'ಹೌದು, ವಿಮರ್ಶಾತ್ಮಕವಾಗಿಯೇ ಇರುತ್ತದೆ.' ಎಂದರು

ಎರಡು ದಿನಗಳ ನಂತರ ಲೇಖನವೇನೋ ಬಂತು. ಆದರೆ ಯಾವುದೇ ಕಡಿತವಿಲ್ಲದೆ. ಆದ್ದರಿಂದ ನಾನು ಮತ್ತೆ ಇನ್ನೊಂದು ದಿನದಲ್ಲಿ ಅದನ್ನು ೩೦೦ ಶಬ್ದಗಳಿಗೆ ಕಡಿತ ಮಾಡಿ ಕಳಿಸಲು ಕೋರಿದೆ. ಅದಕ್ಕವರು 'ನನಗೆ ಬಿಡುವಿಲ್ಲ ಸಾರ್! ಸಂಪಾದಕರಾಗಿ ಕತ್ತರಿಯಾಡಿಸುವ ಅಧಿಕಾರ ನಿಮಗೆ ಹೇಗೂ ಇದೆ,. ನೀವೇ ಮಾಡಿ' ಎಂದರಲ್ಲದೆ, ಕೊಸರಿನಂತೆ ಲೇಖನ ಹೇಗನಿಸಿತು? ಎಂದು ನನ್ನ ಅಭಿಪ್ರಾಯ ಕೇಳಿದರು. ನಾನು ಈ ಹಿಂದೆ ಅವರ ಒಂದು ಲೇಖನದ ಬಗ್ಗೆ ಅಭಿಪ್ರಾಯ ಹೇಳಿ ಅವರು ಕ್ರೋಧಿತರಾಗಿದ್ದ ಪ್ರಸಂಗವನ್ನು ಎಚ್ಚರದಪ್ಪಿ ಮರೆತವನಾಗಿ, ನಾನು ಕೋರಿದ್ದ ಶ್ರದ್ಧಾಂಜಲಿ ಲೇಖನದ ಚೌಕಟ್ಟಿನಾಚೆಯ-ಅನಗತ್ಯವೆನಿಸಿದ- ಸಾಕಷ್ಟು ಮಾಹಿತಿ ಇದರಲ್ಲಿದೆಯೆಂದು ಭಾವಿಸಿದ್ದರಿಂದ ಸ್ನೇಹದ ಸಲಿಗೆಯಿಂದ 'ಏನ್ರಿ ತೋಳ್ಪಾಡಿ, ಹೈಸ್ಕೂಲ್ ವಿದ್ಯಾರ್ಥಿಯ ಪ್ರಬಂಧದಂತೆ ಅಪ್ಪ ಅಮ್ಮನ ಹೆಸರು, ಹುಟ್ಟಿದ ತಾರೀಖು, ಮೂಲ ನಾಮ, ಹುಟ್ಟೂರು ಇದನ್ನೆಲ್ಲ ಬರೆದಿದ್ದೀರಿ!' ಎಂದು ಮಾತು ಮುಂದುವರೆಸುತ್ತಿದ್ದರ ಮಧ್ಯವೇ ಸಿಡಿದೆದ್ದ ಅವರು 'ನನ್ನನ್ನು ಏನೆಂದು ತಿಳಿದಿದ್ದೀರಿ? ನೀವು ಹೀಗೆ ನನ್ನನ್ನು ಅವಮಾನಿಸಲಾರಿರಿ... ನನ್ನ ಲೇಖನ ಪ್ರಕಟಿಸಬೇಡಿ' ಇತ್ಯಾದಿಯಾಗಿ ಬಡಬಡಿಸುತ್ತಾ ಫೋನ್ ಸ್ಥಗಿತಗೊಳಿಸಿಬಿಟ್ಟರು. ಈ ಅಸಭ್ಯತೆಯಿಂದ ನಾನು ನಿಜವಾಗಿ ದಂಗಾಗಿ ಹೋದೆ! ನಾನು ಸಲಿಗೆಯಿಂದ ಟೀಕಿಸಿದ್ದ ಅವರ ಲೇಖನದ ಭಾಗ ಇದು:

'ವಿಶ್ವೇಶ ತೀರ್ಥರ ಪೂರ್ವಾಶ್ರಮದ ಹೆಸರು ವೆಂಕಟರಮಣ ಎಂದು. ಅವರು ದಕ್ಷಿಣ ಕನ್ನಡದ ಉಪ್ಪಿನಂಗಡಿಗೆ ಹತ್ತಿರವಿರುವ ರಾಮಕುಂಜದಲ್ಲಿ ಎಪ್ರಿಲ್ ೨೭ ೧೯೩೧ರಂದು ಬಡಬ್ರಾಹ್ಮಣ ಕುಟುಂಬವೊಂದರಲ್ಲಿ ಜನ್ಮ ತಳೆದರು. ಅವರ ತಂದೆ ನಾರಾಯಣಾಚಾರ್ಯ ಮತ್ತು ತಾಯಿ ಕಮಲಮ್ಮ. ಸಣ್ಣ ವಯಸ್ಸಿನಲ್ಲಿಯೇ ಧಾರ್ಮಿಕ ವಿಷಯಗಳಲ್ಲಿ ಆಳವಾದ ಆಸಕ್ತಿ ತೋರಿಸುತ್ತಿದ್ದ ವೆಂಕಟರಮಣನ ವರ್ಚಸ್ಸನ್ನು ಗುರುತಿಸಿ ಅಂದಿನ ಪೇಜಾವರ ಮಠದ ವಿಶ್ವಮಾನ್ಯ ತೀರ್ಥರು ಈ ಬಾಲಕನನ್ನು ತನ್ನ ಶಿಷ್ಯನನ್ನಾಗಿ ಸ್ವೀಕರಿಸಿದರು. ಹೀಗೆ ವೆಂಕಟರಮಣ ವಿಶ್ವೇಶ ತೀರ್ಥ ಎನ್ನುವ ಹೆಸರಿನಲ್ಲಿ ಪೇಜಾವರ ಮಠದ ೩೩ನೇಯ ಮಠಾಧೀಶರಾಗಿ ಸನ್ಯಾಸ ದೀಕ್ಷೆಯನ್ನು ಸ್ವೀಕರಿಸಿದರು. ಅಲ್ಲಿಂದೀಚೆಗೆ, ತಮ್ಮ ಎಂಟು ದಶಮಾನಗಳ ಘಟನಾನಿಬಿಡ ಧಾರ್ಮಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ಅವರು ಉಡುಪಿಯ ಹೆಸರನ್ನು, ಅಂತೆಯೇ ತಮ್ಮ ಧರ್ಮ ಪರಂಪರೆಯ ಖ್ಯಾತಿಯನ್ನು ದೇಶಾದ್ಯಂತ ಮತ್ತು ವಿಶ್ವಾದ್ಯಂತ ವಿಸ್ತರಿಸಿದರು.'

ಆದರೆ ಪೇಜಾವರರನ್ನು ಕುರಿತ ಬರಹಕ್ಕೆ ನನಗೆ ನಾನೇ ಬದ್ಧನಾಗಿದ್ದುದರಿಂದ 'ತೋಳ್ಪಾಡಿಯವರ ಲೇಖನವನ್ನು ಪೂರ್ವ ನಿಯೋಜನೆಯಂತೆ ನಮ್ಮ ಪತ್ರಿಕೆಯ ಅರ್ಧ ಪುಟಕ್ಕೆ ಹೊಂದುವಂತೆ ಸಂಕಲಿಸಿ ಪ್ರಕಟಿಸಿದೆ. ಅದನ್ನು ನೀವೂ ಓದಿದ್ದೀರಿ. ಆದರೆ ಅದನ್ನೋದಿದ ತೋಳ್ಪಾಡಿಯವರು ನನಗೆ ಹೀಗೊಂದು 'ಪ್ರೇಮ ಪತ್ರ' ಬರೆದರು:

ಮಾನ್ಯರೇ,

'ಹೊಸ ಮನುಷ್ಯ'ದ ಸಂಚಿಕೆ ತಲುಪಿದೆ. ಧನ್ಯವಾದಗಳು. ಹೈಸ್ಕೂಲ್ ಹುಡುಗರ ಮಟ್ಟದ್ದೆಂದು ನೀವು ತಿಳಿಸಿರುವ ನನ್ನ ಲೇಖನವನ್ನು ಪ್ರಕಟಿಸಿದ್ದಕ್ಕೆ ಕೃತಜ್ಞತೆಗಳು. ಆದರೆ ಒಂದು ಮಾತನ್ನು ನಾನು ಇಲ್ಲಿ ಹೇಳಲೇಬೇಕು. ಸಂಪಾದಕರಾಗಿ ನನ್ನ ಲೇಖನಕ್ಕೆ ಕತ್ತರಿ ಪ್ರಯೋಗ ಮಾಡುವ ಅಧಿಕಾರ ನಿಮಗಿದೆ. ಆದರೂ ನಾನು ಬಹುಮುಖ್ಯವೆಂದು ಭಾವಿಸಿದ ನನ್ನ ಲೇಖನದ ಕೊನೆಯ ಸಾಲನ್ನು ನೀವು ಅಚ್ಚು ಮಾಡದಿರುವುದಕ್ಕೆ ನನ್ನ ವಿರೋಧವಿದೆ. ಆ ಒಂದು ಸಾಲಿಗೆ ನಿಮ್ಮ ಪತ್ರಿಕೆಯಲ್ಲಿ ಜಾಗ ಸಾಲದಾಯಿತೆ?

ಇನ್ನು ಎರಡನೇ ಮಾತು. ಇದೇ ಸಂಚಿಕೆಯಲ್ಲಿ ನೀವು ಪೇಜಾವರ ಸ್ವಾಮಿಯವರ ಮತ್ತು ಚಿದಾನಂದ ಮೂರ್ತಿಯವರ ಕುರಿತಾಗಿ ಬರೆದ ಲೇಖನ ಅತ್ಯಂತ ಕಳಪೆ ಅಭಿರುಚಿಯದ್ದು ಎಂದು ನಾನು ತಿಳಿಯುತ್ತೇನೆ (ಸ್ವಾಮಿಗಳ ಕುರಿತಾದ ನಿಮ್ಮ ನಿರೂಪಣೆ ನಿಮ್ಮದೇ ಕಪೋಲ ಕಲ್ಪನೆಯೆಂದು ಲಕ್ಷ್ಮೀಶ ತೋಳ್ಪಾಡಿಯವರು ನನಗೆ ತಿಳಿಸಿರುತ್ತಾರೆ). ಈ ಇಬ್ಬರೂ ವ್ಯಕ್ತಿಗಳು ಇಂದು ನಮ್ಮ ಜೊತೆಗೆ ಇಲ್ಲ. ಅವರಲ್ಲಿ ಇದೆ ಎಂದು ನೀವು ತಿಳಿಯುವ ಮಾನವ ಸಹಜವಾದ ದೌರ್ಬಲ್ಯಗಳನ್ನು ಇಂದು ಎತ್ತಿ ಆಡುವ ಔಚಿತ್ಯವೇನು? ಈ ಬಗೆಯ ಕಾಡು ಹರಟೆಗೆ ನಿಮ್ಮಲ್ಲಿ ಸಾಕಷ್ಟು ಜಾಗವಿದೆ. ನನ್ನ ಒಂದು ವಾಕ್ಯಕ್ಕೆ ಮಾತ್ರ ಇಲ್ಲ.

ವಂದನೆಗಳೊಂದಿಗೆ

**-ರಾಜಾರಾಂ ತೋಳ್ಪಾಡಿ**

ತೋಳ್ಪಾಡಿಯವರು ಹೇಳುವ, ನಾನು ಕೈಬಿಟ್ಟ ಅವರ ಆ ಅಮೂಲ್ಯ ವಾಕ್ಯ ಇದಾಗಿತ್ತು: '... ಅವರ ನಿರ್ಗಮನ ನನ್ನ ಭಾವಪ್ರಪಂಚದಲ್ಲಿ ಖಾಲಿತನವೊಂದನ್ನು ಸೃಷ್ಟಿಸಿದೆ. ನನ್ನೊಳಗಿನ ಒಳ್ಳೆಯತನವೊಂದು ಕಣ್ಮರೆಯಾದಂತೆ ಭಾಸವಾಗುತ್ತಿದೆ.'

ಬಹುಶಃ ತೋಳ್ಪಾಡಿಯವರ ಸಿಟ್ಟಿಗೆ ಕಾರಣ, ಪೇಜಾವರರನ್ನು ಕುರಿತ ತಮ್ಮ ಢಂಗುರ ಈ ವಾಕ್ಯದೊಂದಿಗೆ ಲಯಬದ್ಧವಾಗಿ ಮುಗಿಯುವುದಕ್ಕೆ ಅವಕಾಶವಿಲ್ಲದಾಗಿದೆ ಎಂಬುದಾಗಿರಬಹುದು. ಅದೇನೇ ಇರಲಿ, ನನಗೆ ಅವರ ಈ ಪತ್ರಕ್ಕೆ ವಿವರವಾದ ಉತ್ತರ ಅಗತ್ಯವಿಲ್ಲ ಎನಿಸಿ ಇಷ್ಟು ಮಾತ್ರ ಬರೆದೆ:

ಮಾನ್ಯರೇ,

ನಿಮ್ಮ ಪತ್ರ ಬಂದಿದೆ; ಓದಿದೆ. ನೀವು ಬರೆದದ್ದು ಒಳ್ಳೆಯದಾಯಿತು, ನಿಮ್ಮ ಮನಸ್ಸನ್ನು ತಿಳಿಯಲು ಸಹಾಯಕವಾಯಿತು. ನಿಮ್ಮ ಪತ್ರಕ್ಕೆ ಈ ಎರಡು ವಾಕ್ಯಗಳ ಪ್ರತಿಕ್ರಿಯೆ ಅಗತ್ಯವೆನಿಸಿದ್ದರಿಂದ ಅವನ್ನಿಲ್ಲಿ ಬರೆಯುತ್ತಿರುವೆ-

೧. ಪೇಜಾವರರ ನಿಧನಕ್ಕೆ ಸಂಬಂಧಿಸಿದಂತೆ ನಮ್ಮ ಪತ್ರಿಕೆಯಲ್ಲಿ ಅಷ್ಟು ಜಾಗ ಕೊಟ್ಟದ್ದು ದೊಡ್ಡ ತಪ್ಪು ಎಂದು ನನಗೀಗ ಜ್ಞಾನೋದಯವಾಗಿದೆ.

೨. ನನ್ನ 'ಕಾಡು ಹರಟೆ' ಬರಹದಲ್ಲಿನ ಯಾವುದೇ ವಿಷಯ ಕಪೋಲ ಕಲ್ಪಿತವಾದದ್ದೆಂದು ಲಕ್ಷ್ಮೀಶರು ನನಗೆ ಬರೆದರೆ ನಾನು ಅದನ್ನು ಪತ್ರಿಕೆಯಲ್ಲಿ ಪ್ರಕಟಿಸುವೆ.

**-ಡಿಎಸ್ಸೆನ್**

ಆದರೂ, ಇತ್ತೀಚಿನವರೆಗೂ ಆಪ್ತ ಗೆಳೆಯನಾಗಿದ್ದ ಒಬ್ಬ ವ್ಯಕ್ತಿ ನನ್ನ ಮೇಲೆ ಈ ಮಟ್ಟದ ಭಾಷೆ ಬಳಸಲು, ಆಧಾರ ರಹಿತ ಆರೋಪಗಳನ್ನು ಮಾಡಲು ಏನು ಕಾರಣವೆಂದು ಆಶ್ಚರ್ಯಪಡುತ್ತಲೇ ಇದ್ದೇನೆ. ಚಿದಾನಂದ ಮೂರ್ತಿಯವರ ಬಗ್ಗೆಯಾಗಲಿ, ಪೇಜಾವರರ ಬಗ್ಗೆಯಾಗಲೀ ಅಪಚಾರವಾಗುವಂಥಹದ್ದನ್ನು ನಾನು ಏನು ಬರೆದಿದ್ದೇನೆ? ಮೂರ್ತಿಯವರು ತಾವು ಕ್ಯಾಲೆಂಡರ್ ಕದ್ದ ಪ್ರಸಂಗವನ್ನು ಸ್ವತಃ ತಾವೇ ಲೇಖನವಾಗಿ ಬರೆದುಕೊಂಡಿದ್ದಾರೆ. ಇನ್ನು ಪೇಜಾವರರು ವಿಹೆಚ್‌ಪಿ ಉಪಾಧ್ಯಕ್ಷರಾಗಿ ಸಂಘ ಪರಿವಾರದ ರಾಜಕಾರಣಕ್ಕೆ ನೈತಿಕ ಬೆಂಬಲವಾಗಿ ನಿಂತಿದ್ದುದು ಸರ್ವವೇದ್ಯ ಸಂಗತಿಯಲ್ಲವೆ? ಪ್ರಗ್ಯಾ ಠಾಕೂರ್, ಸಾಕ್ಷಿ ಮಹಾರಾಜ್, ಯೋಗಿ ಆದಿತ್ಯನಾಥ, ತೇಜಸ್ವಿ ಸೂರ್ಯ ಮುಂತಾದವರ ವಿಚ್ಛಿದ್ರಕಾರಿ ಮಾತುಗಳಿಗೆ ಎಂದೂ ಸ್ವಯಂಪ್ರೇರಿತರಾಗಿ ಪ್ರತಿಕ್ರಿಯಿಸದ ವ್ಯಕ್ತಿಗೆ ಗಾಂಧಿ ಬಗ್ಗೆ ಗೌರವವಿತ್ತೆಂದು ಹೇಗೆ ನಂಬುವುದು? ಗುಪ್ತ ಗೌರವವಿತ್ತೆಂದು ಇವರು ಹೇಳಿಬಿಟ್ಟರೆ ನಾವು ನಂಬಿಬಿಡಬೇಕು! ಏಕೆಂದರೆ ಇವರು ಹುಟ್ಟು ಬ್ರಹ್ಮಜ್ಞಾನಿಗಳಲ್ಲವೆ?

ರಾಜಾರಾಮ್ ಅವರ ಪತ್ರ ಬಂದ ನಾಲ್ಕೈದು ದಿನಗಳ ನಂತರದಲ್ಲೇ ಅವರ ಜೋಡಿ ಅಂಕಣಕಾರ ನಿತ್ಯಾನಂದ ಬಿ. ಶೆಟ್ಟಿಯವರಿಂದ ನನ್ನ ಇದೇ ಬರಹವನ್ನು 'ಕ್ಷುಲ್ಲಕ- ಕ್ಷುದ್ರ' ಎಂದೆಲ್ಲ ವರ್ಣಿಸಿ ಬರೆದ ಪತ್ರ ಬಂದಾಗ ನನಗೆ ಎಲ್ಲವೂ ಅರ್ಥವಾದಂತಾಯಿತು. ಜೊತೆಗೇ ಇವರಿಬ್ಬರೂ ಇತ್ತೀಚೆಗೆ ಪ್ರತಿಪಾದಿಸುತ್ತಿರುವ ಎಡ-ಬಲಗಳ ನಡುವಣ ಅನುಸಂಧಾನದ ಅರ್ಥ ಹೊಳೆದಂತಾಗಿ ಗಾಬರಿಗೊಂಡೆ.

**-ಡಿ.ಎಸ್. ನಾಗಭೂಷಣ**

'ಹೊಸ ಮನುಷ್ಯ'ದ ಮಹಿಳಾ
ವಿಶೇಷ ಸಂಚಿಕೆಗೆ
ಹಾರ್ದಿಕ ಶುಭಾಶಯಗಳು



**ಓ.ಎಲ್. ನಾಗಭೂಷಣ ಸ್ವಾಮಿ**
ಮತ್ತು ಕುಟುಂಬ
**ಮೈಸೂರು**

'ಹೊಸ ಮನುಷ್ಯ'ದ
ಮಹಿಳಾ ವಿಶೇಷ ಸಂಚಿಕೆಗೆ
ಹಾರ್ದಿಕ ಶುಭಾಶಯಗಳು



**ಸುಮನಾ ಸದಾನಂದ**
ಮತ್ತು **ಕುಟುಂಬ**
**ಬೆಂಗಳೂರು**

‘ಹೊಸ ಮನುಷ್ಯ’ದ
ಮಹಿಳಾ ವಿಶೇಷ
ಸಂಚಿಕೆಗೆ ಹಾರ್ದಿಕ
ಶುಭಾಶಯಗಳು



**ಕೆ. ಅರ್ಕೇಶ್**
ಮತ್ತು **ಕುಟುಂಬ**
**ಮೈಸೂರು**

## ತಿಂಗಳ ಕೊನೆಯ ಸಾಲುಗಳು



ಮನೆ ಮನೆಯಲಿ ದೀಪ ಮುಡಿಸಿ
ಹೊತ್ತು ಹೊತ್ತಿಗನ್ನವುಣಿಸಿ
ತಂದೆ-ಮಗುವ ತಬ್ಬಿದಾಕೆ

ನಿನಗೆ ಬೇರೆ ಹೆಸರು ಬೇಕೆ
ಸ್ತ್ರೀ ಎಂದರೆ ಅಷ್ಟೆ ಸಾಕೆ?

-ಜಿ.ಎಸ್. ಶಿವರುದ್ರಪ್ಪ

ಶುಭಾಶಯಗಳೊಂದಿಗೆ

**ಆರ್ ಜ್ಯೋತಿ**
ಮತ್ತು ಕುಟುಂಬ
**ಕಾರ್ಕಳ**

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)